ಹಿತ್ತಲಗಿಡ


ಚಾತುರ್ಮಾಸಿಕ

ಪೈರು 6, ಕೊಯಿಲು 1, ಜನವರಿ-ಏಪ್ರಿಲ್ , 2000

'ಹಿತ್ತಲಗಿಡ' ರೈತ, ವಿಜ್ಞಾನಿ,
ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಬಿಡಿ ಪತ್ರಿಕೆ : ರೂ. 20/-

ಗ್ರಾಮೀಣ ಬದುಕಿನ ಜೀವನಾಡಿ ಕೆರೆಗಳನ್ನು ಮರೆಯಬೇಡಿ



ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟುಹಾಕುವ ಪ್ರಯತ್ನ

ದೇಶೀಯ ಜ್ಞಾನ ಮತ್ತು ಸಂಸ್ಥೆಗಳು, ರೈತ ಮೂಲದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆ

ಕೇಂದ್ರಸರ್ಕಾರದ ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (The National Innovation Foundation) ಮತ್ತು ಪ್ರೊ. ಅನಿಲ್ ಗುಪ್ತಾರ 'ಹನಿಬೀ ಜಾಲ'ಗಳು ಜಂಟಿಯಾಗಿ ಈ ಮೇಲ್ಕಂಡ ಸ್ಪರ್ಧೆಯನ್ನು ಏರ್ಪಡಿಸಿರುತ್ತವೆ. ರೈತರು, ಬುಡಕಟ್ಟು ಜನಾಂಗಗಳು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇವೇ ಮೊದಲಾದ ನಾಟೀ ಸಮುದಾಯಗಳು ಮತ್ತು ವ್ಯಕ್ತಿಗಳ ಪರಿಸರ ಮತ್ತು ಜೀವ ವಿವಿಧತೆಗಳನ್ನು ಕಾಪಾಡುವಲ್ಲಿ ಕಂಡುಕೊಂಡಿರುವ ಪದ್ಧತಿಗಳು, ಶೋಧಿಸಿರುವ ಕೃಷಿ ಉಪಕರಣಗಳು, ಜಾನುವಾರು ಚಿಕಿತ್ಸೆಗಳು, ಬೆಳೆ ಸಂರಕ್ಷಣೆ ಪದ್ಧತಿಗಳು, ಇವೇ ಮೊದಲಾದ ದೇಶೀಯ ತಂತ್ರಜ್ಞಾನ ಮತ್ತು ಅನುಶೋಧನೆಗಳ ಬಗ್ಗೆ ರಾಷ್ಟ್ರೀಯ ಮಟ್ಟದ ಸ್ಪರ್ಧೆ ಏರ್ಪಡಿಸಲಾಗಿದೆ. ಇವುಗಳಲ್ಲಿ ಅತ್ಯುತ್ತಮವಾದ ಅನುಶೋಧನೆಗಳಿಗೆ ರೂ. 50,000 ಮೊದಲ ಬಹುಮಾನ, ರೂ. 25,000 ಎರಡನೇ ಮತ್ತು 10,000 ಮೂರನೇ ಬಹುಮಾನ ಜೊತೆಗೆ ರೂ. 1,000ದ ಐನೂರಕ್ಕೂ ಹೆಚ್ಚು ಪ್ರೋತ್ಸಾಹ ಬಹುಮಾನಗಳನ್ನು ಇಡಲಾಗಿದೆ. ಸ್ಪರ್ಧೆಗಳಲ್ಲಿ ವಿಜೇತ ವ್ಯಕ್ತಿಗಳನ್ನು ಮುಂದಿನ ಫೆಬ್ರವರಿ ಹೊತ್ತಿಗೆ ಅಹಮದಾಬಾದಿನಲ್ಲಿ ಸನ್ಮಾನಿಸಲಾಗುವುದು.

ಈ ನಿಟ್ಟಿನಲ್ಲಿ ವ್ಯಕ್ತಿ ಮತ್ತು ಸಮುದಾಯಗಳು ತಮ್ಮ ಅನುಶೋಧನೆಗಳ ಬಗ್ಗೆ ಸಂಪೂರ್ಣ ವಿವರವನ್ನು ಖಾಲಿ ಹಾಳೆಗಳಲ್ಲಿ ಬರೆದು ಸಾಧ್ಯವಿದ್ದಲ್ಲಿ ಫೋಟೋ ಮತ್ತು ಚಿತ್ರಗಳ ಸಮೇತ ಸಂಪಾದಕರು, ಹಿತ್ತಲಗಿಡದ ವಿಳಾಸಕ್ಕೆ ಸೆಪ್ಟೆಂಬರ್ ಅಂತ್ಯದೊಳಗೆ ಕಳುಹಿಸಬೇಕಾಗಿ ಕೋರಲಾಗಿದೆ. ವ್ಯಕ್ತಿ ಅಥವಾ ಸಮುದಾಯಗಳು ತಮ್ಮ ಶೋಧನೆಗಳನ್ನು ಬರೆದು ಕಳುಹಿಸಲು ಕಷ್ಟವಾದಲ್ಲಿ ಅಂತಹವರಿಗೆ ಬೇರೆ ವ್ಯಕ್ತಿ, ಸ್ವಯಂ ಸೇವಾ ಸಂಸ್ಥೆಗಳೂ ಸಹಕರಿಸಬಹುದು. ಈ ರೀತಿಯಾಗಿ ತಳಮಟ್ಟದ ಶೋಧಕರನ್ನು ಪರಿಚಯಿಸಿದವರಿಗೆ ಪ್ರೋತ್ಸಾಹ ಬಹುಮಾನ ನೀಡಲಾಗುವುದು. ವಿವರಗಳಿಗೆ ಪ್ರೊ. ಅನಿಲ್ ಕೆ. ಗುಪ್ತಾ ಅಥವಾ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಇವರನ್ನು ಸಂಪರ್ಕಿಸಬಹುದು.

ಮುಖಪುಟ :
Resource Management in Rainfed Drylands
Myrada - Bangalore & IIRR - Philippines ದ ಕೃಪೆ

ಸಂಪಾದಕೀಯ

ಹೊಸ ಸಹಸ್ರಮಾನದತ್ತ ಹಿತ್ತಲಗಿಡ : ಸಾಧಕ ಬಾಧಕಗಳು

ಹಿತ್ತಲಗಿಡ ಹೊಸ ಸಹಸ್ರಮಾನಕ್ಕೆ ಕಾಲಿಡುತ್ತಿರುವಾಗಲೇ ಪತ್ರಿಕೆ ಐದು ವರ್ಷಗಳನ್ನೂ ಪೂರೈಸುತ್ತಿರುವುದು ಒಂದು ಹೆಮ್ಮೆಯ ವಿಚಾರ. ಈ ಐದು ವರ್ಷಗಳ ಅವಧಿಯಲ್ಲಿ ಈ ಪತ್ರಿಕೆಯ ಹುಟ್ಟು ಬೆಳವಣಿಗೆಗೆ ಕಾರಣವಾದ ಘಟನೆ, ವ್ಯಕ್ತಿ, ವಿಚಾರಗಳನ್ನು ಸ್ಮರಿಸಿ ಒಂದು ವ್ಯವಸ್ಥಿತ ರೀತಿಯಲ್ಲಿ ಹಿಡಿದಿಟ್ಟಲ್ಲಿ ಅದು ಹಿತ್ತಲಗಿಡದ ಮುಂದಿನ ಬೆಳವಣಿಗೆಗೆ ಸಹಕಾರಿಯಾಗುವುದೆಂದು ಆಶಿಸುತ್ತೇವೆ.

ಅದು 1990ರ ದಶಕದಲ್ಲಿ ಪ್ರಾರಂಭದ ಕಾಲ. ರಶೇಲ್ ಕಾರ್‌ಸನ್‌ರ ಕೃಷಿ ರಾಸಾಯನಿಕಗಳ ಮೇಲಿನ ಪುಸ್ತಕ Silent Spningನ ಗಾಳಿ ಭಾರತದಲ್ಲೂ ಬೀಸಲು ಶುರುವಾಗಿತ್ತು. ಹಾಗೇ, ಪುಕುವೋಕಾರ ನೈಸರ್ಗಿಕ ಕೃಷಿಯನ್ನು ಪ್ರಯೋಗಿಸಿ ನೋಡಲು ನಾರಾಯಣರೆಡ್ಡಿ ಯಂತಹ ಸಾಹಸಿ ರೈತರು ಕೈ ಹಾಕಿದ್ದರು. ದಕ್ಷಿಣಭಾರತದಲ್ಲಿ ಇಂತಹ ಹಲವಾರು ರೈತರು ಸಾವಯವ ಕೃಷಿಯತ್ತ ದೃಢ ಹೆಜ್ಜೆ ಇಡಲು ಶುರುಮಾಡಿದ್ದರು. ಆದರೆ ಹಸಿರು ಕ್ರಾಂತಿಯ ಗುಂಗಿನಲ್ಲಿದ್ದ ಕೃಷಿ ವಿಶ್ವವಿದ್ಯಾಲಯಗಳು ಇದ್ಯಾವುದರ ಪರಿವೆಯೇ ಇಲ್ಲದೇ ತಮ್ಮದೇ ದಿಕ್ಕಿನಲ್ಲಿ ಯೋಚಿಸುತ್ತಿದ್ದವು. ಇಂತಹ ಪರಿಸ್ಥಿತಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನೊಳಗೆ ಪರ್ಯಾಯ ಕೃಷಿ ಬಗ್ಗೆ ಒಂದು ಕೂಗು ಎಬ್ಬಿಸಿದ ಕೀರ್ತಿ ವಿದ್ಯಾರ್ಥಿಗಳದ್ದೇ ಆದ 'ಚಿಂತನಾ ಬಳಗ'ವೆಂಬ ಒಂದು ಸಣ್ಣ ಗುಂಪಿಗೆ ಸೇರುತ್ತದೆ. ಆನಂದ್, ಅರುಣ್‌ಕುಮಾರ್ ನೇತೃತ್ವದ ಈ ಗುಂಪು ಆಗಲೇ ಪುರುಷೋತ್ತಮರಾಯರು, ನಾರಾಯಣರೆಡ್ಡಿ, ಭರಮಗೌಡರ ಪಟ್ಟಶಿಷ್ಯರಾಗಿದ್ದರು. ಸಾವಯವ ಕೃಷಿ ಬಗ್ಗೆ ಪ್ರಚಾರ ಆರಂಭಿಸಿದ್ದ 'ಅಡಿಕೆ ಪತ್ರಿಕೆ' ಅಂತಹಾ ವಿದ್ಯಾರ್ಥಿಗಳ ಬೈಬಲ್ ಆಗಿತ್ತು. ಜೊತೆಗೆ ಇಕ್ರಾ, ಏಎಂಇ ಯಂತಹ ಸ್ವಯಂ ಸೇವಾ ಸಂಸ್ಥೆಗಳು ಈ ಸಾವಯವ ಚಳುವಳಿಯನ್ನು ಗಟ್ಟಿ ಮಾಡುತ್ತಲಿದ್ದವು. ನಂತರ, ಜಾಗತಿಕ ಮಟ್ಟದಲ್ಲಿ ಪರಿಸರ ಪ್ರಜ್ಞೆಯನ್ನು ಚುರುಕುಗೊಳಿಸಿದ 1992ರ ಅಂತ್ಯದ ಐತಿಹಾಸಿಕ ರಿಯೋ ಸಮ್ಮೇಳನದಿಂದ ನಮ್ಮ ಕೃಷಿ ವಿಜ್ಞಾನಿಗಳೂ ಸ್ವಲ್ಪ ಚುರುಕುಗೊಳ್ಳುವಂತಾದರು. ಇವೆಲ್ಲಾ ಬೆಳವಣಿಗೆಗಳನ್ನು ಆಸಕ್ತಿಯಿಂದ ಗಮನಿಸುತ್ತಿದ್ದ ಕೃಷಿ ವಿ.ವಿ.ಯ ನನ್ನಂತಹ ಕೆಲವರಿಗೆ ಆಗಾಗ್ಗೆ ರೈತರ, ಸ್ವಯಂ ಸೇವಾ ಸಂಸ್ಥೆಗಳ ಸಭೆ ಸಮಾರಂಭಗಳಿಗೆ ಆಹ್ವಾನ ಬರುತ್ತಿದ್ದು, ಅದರಿಂದಾಗಿ ಸಾವಯವ ಕೃಷಿಯಲ್ಲಿ ಸ್ವಲ್ಪ ತೊಡಗಿಸಿಕೊಳ್ಳಲು ಸಹಕಾರಿಯಾಯ್ತು. ಪುಕುವೋಕ, ಬಿಲ್ ಮಾಲಿಸನ್‌ರಂತಹವರ ಪುಸ್ತಕಗಳೂ ನಮಗೆ ಅಪಾರ ನೆರವಾಯತ್ತು. ಹೀಗೆ, ಪರ್ಯಾಯ, ಸಾವಯವ ಕೃಷಿಯತ್ತ ಚಿಂತಿಸಲು ಶುರುಮಾಡಿರುವಾಗಲೇ ನನಗೆ, ಅದೃಷ್ಟವೋ, ಕಾಕತಾಳೀಯವೋ ಎಂಬಂತೆ ಪರಿಸರ ಅರ್ಥಶಾಸ್ತ್ರದಲ್ಲಿ ಇಂಗ್ಲೆಂಡಿನಲ್ಲಿ ಉನ್ನತ ವ್ಯಾಸಂಗಕ್ಕೆ ಅವಕಾಶ ದೊರೆತಿತ್ತು.

ಇಂಗ್ಲೆಂಡಿನಿಂದ ಹಿಂದಿರುಗಿದ ಕೆಲ ಸಮಯದಲ್ಲೇ 1993ರ ಅಂತ್ಯದಲ್ಲಿ ಅಹಮದಾಬಾದಿನ ಒಂದು ಕಾರ್ಯಾಗಾರದ ಸಮಯದಲ್ಲಿ ಡಾ. ಚಂದ್ರಕಾಂತರಿಂದ ಪ್ರೊ. ಅನಿಲ್ ಗುಪ್ತಾರ ಪರಿಚಯವಾಯ್ತು. ತಳಮಟ್ಟದ ಅನುಶೋಧನೆ, ದೇಶೀಯ ಜ್ಞಾನ ಮತ್ತು ಜೀವವೈವಿಧ್ಯತೆಗಳನ್ನು ತಮ್ಮ 'ಹನಿಬೀ' ಪತ್ರಿಕೆಯ ಮೂಲಕ ದಾಖಲಿಸಿ, ಪಸರಿಸಿ ಆ ಮೂಲಕ ಪರ್ಯಾಯ ಕೃಷಿ ಅಭಿವೃದ್ಧಿ ಬಗ್ಗೆ ಚರ್ಚೆ ಎಬ್ಬಿಸಿದ್ದ ಪ್ರೊ. ಗುಪ್ತಾರು 1994 ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿಗೆ ಬಂದು, ಇಲ್ಲಿನ ಪರಿಸರಾಸಕ್ತ, ಸಾವಯವ ಕೃಷಿ ಪ್ರಿಯರ ಸಭೆಯೊಂದರಲ್ಲಿ ಭಾಗವಹಿಸಿ 'ಹಿತ್ತಲಗಿಡ' ಪತ್ರಿಕೆಯ ಉಗಮಕ್ಕೆ ನಾಂದಿ ಹಾಡಿದರು.

ಪತ್ನಿ ತೇಜಸ್ವಿನಿ ಊರಿಗೆ ಹೋದಾಗ ಮಲೆನಾಡ ಮಹಿಳೆಯರು ಹಿತ್ತಲಲ್ಲಿ ರಕ್ಷಿಸಿದ್ದ ಬೀಜವಿವಿಧತೆ ಬಗ್ಗೆ ಲೇಖನ ಒಂದುನ್ನು ಆದಾಗಲೇ ತಯಾರಿಸಿದ್ದು ನನಗೂ ಸ್ವಲ್ಪ ಧೈರ್ಯ ಬರುವಂತಾಯ್ತು. ಈ ಹಿನ್ನೆಲೆಯಲ್ಲಿ ಪತ್ರಿಕೆಗೆ 'ಹಿತ್ತಲಗಿಡ'ವೆಂದು ಹೆಸರಿಟ್ಟು 1995 ಫೆಬ್ರವರಿ ತಿಂಗಳಲ್ಲಿ ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಸ್ಥಳೀಯ ವಯೋವೃದ್ಧ ರೈತರೊಬ್ಬರಿಂದ ಬಿಡುಗಡೆ ಮಾಡಿಸಲಾಯ್ತು. ನಾರಾಯಣರೆಡ್ಡಿ, ಪುರುಷೋತ್ತಮರಾಯರು, ಭರಮಗೌಡರು, ಎ.ಪಿ. ಚಂದ್ರಶೇಖರ್, ಕಿನ್ಯಾ ವಿಠಲ್‌ರಾವ್‌ರಂತಹ ಸಾವಯವ ಕೃಷಿ ಋಷಿಗಳ ಅನುಭವಗಳ ದಾಖಲಾತಿ, ಇಕ್ರಾಬಾಬು, ವಾಸು ಅಂತಹವರ ನೆರವು, ಶಿವರಾಜಕಟ್ಟೆ, ನಾಗರತ್ನ, ಅನಿಲ್ ಕೌಶಿಕ್‌ರಂತಹ ಉತ್ಸಾಹಿ ಕೃಷಿ ವಿದ್ಯಾರ್ಥಿಗಳ ಸಹಕಾರದಿಂದ ರಾಜ್ಯದ ಮೂಲೆ ಮೂಲೆಗಳಿಂದ ರೈತರ ದೇಶೀಯ ಜ್ಞಾನ, ಅನುಶೋಧನೆಗಳ ಹುಡುಕಾಟ, ಅನಿಲ್ ಗುಪ್ತಾರ ಅಭಯ ಹಸ್ತ ಇವೆಲ್ಲವುಗಳ ಸಹಾಯದಿಂದ ಹಿತ್ತಲಗಿಡ ಪುಟ್ಟ ಪುಟ್ಟ ಹೆಜ್ಜೆ ಇಡುವಂತಾಯ್ತು. ಹಿತ್ತಲಗಿಡದ ಈ ಪ್ರಯತ್ನಗಳಿಗೆ ಅಡಿಕೆ ಪತ್ರಿಕೆ, ಕನ್ನಡಪ್ರಭ ಮೊದಲಾದ ಮಾಧ್ಯಮಗಳಿಂದ ದೊರೆತ ಪ್ರಚಾರ, ಪ್ರೋತ್ಸಾಹ ಈ ಹೆಜ್ಜೆಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ಸಹಕಾರಿಯಾದವು.

96ರ ನಂತರ ಜಾಗತೀಕರಣದ ಗಾಳಿ ಭಾರತದಾದ್ಯಂತ ದಟ್ಟವಾಗಿ ಬೀಸತೊಡಗಿತು. ಇದರ ಬಿಸಿ ಹಿತ್ತಲಗಿಡದ ಅಂಗೋಪಾಂಗಗಳಿಗೆ ಮೊದಲು ತಟ್ಟುವಂತಾಯ್ತು. ಆ ಪೇಟೆಂಟ್ ಹಾವಳಿಗಳಿಂದ ವಿದೇಶಿಯರ ಕಣ್ಣು ಮೊದಲು ಬೀಳುವಂತಾಗಿದ್ದು ಇಲ್ಲಿನ ಜೀವವಿವಿಧತೆ ಮತ್ತು ದೇಶೀಯ ತಂತ್ರಜ್ಞಾನಗಳ ಮೇಲೆ. ಬೇವು, ಬಾಸುಮತಿ, ಅರಿಶಿನಗಳ ಕಥೆ, ಥೈಲ್ಯಾಂಡ್ ತನ್ನ ದೇಶೀಯ ಜ್ಞಾನ ತಂತ್ರಜ್ಞಾನ ವ್ಯವಸ್ಥೆಗಳನ್ನು ವ್ಯವಸ್ಥಿತಗೊಳಿಸಲು ಪ್ರಯತ್ನಿಸಿದಾಗ ಅದಕ್ಕೆ ಅಮೇರಿಕಾದ ಅಡ್ಡಗಾಲು, ನಮ್ಮನ್ನು ಹೆಚ್ಚು ಭಯ ಬೀಳುವಂತೆ ಮಾಡಿತು. ಈ ನಿಟ್ಟಿನಲ್ಲೇ ಪ್ರೊ. ಎಂ.ಡಿ. ನಂಜುಂಡಸ್ವಾಮಿಯ ನೇತೃತ್ವದ ರೈತ ಸಂಘದ ಸಹವಾಸ, ಸಂಘದ ಜಾಗತೀಕರಣದ ವಿರುದ್ಧ ನಿಲುವುಗಳು ನಮಗೆ ಸ್ವಲ್ಪ ಧೈರ್ಯ ತರುವಂತೆ ಮಾಡಿದವು. ಹಾಗೇ, ಇನ್ನೊಂದೆಡೆಯಿಂದ, ಪ್ರೊ. ಗುಪ್ತಾರ ಜಾಗತೀಕರಣದೊಡನೆ ಸೂಕ್ತ ಅನುಸಂಧಾನ ನಡೆಸಿ, ನಮ್ಮ ಅನ್ವೇಷಕ ಪ್ರವೃತ್ತಿಯ ಬಡಜನತೆಗಳ ಅನುಶೋಧನೆ, ಅವರು ಸಂರಕ್ಷಿಸಿದ ಜೀವವಿವಿಧತೆಗೆ ಪ್ರತಿಫಲ ನೀಡುವಂತೆ ಮಾಡುವ ನಿಲುವುಗಳು, ನಮ್ಮನ್ನು ಆ ನಿಟ್ಟಿನತ್ತವೂ ಸ್ವಲ್ಪ ಚಿಂತಿಸುವಂತೆ ಮಾಡಿತು. ಪ್ರೊ. ಗುಪ್ತಾರ 1996 ಜನವರಿಯ ಅಹಮದಾಬಾದಿನ ತಳಮಟ್ಟದ ಜನರ ಅನುಶೋಧನೆಗಳ ಯಶಸ್ವಿ ಸಮ್ಮೇಳನ ಹಿತ್ತಲಗಿಡದ ಪ್ರಯತ್ನಕ್ಕೆ ಮತ್ತಷ್ಟು ಬಲ ದೊರೆಯುವಂತೆ ಮಾಡಿತು. ಕರ್ನಾಟಕದ ದಿನೇಶ, ಅಂಬಾಜಿ, ಚೆನ್ನಪ್ಪಗೌಡರು, ರಾಮಕೃಷ್ಣಶಾಸ್ತ್ರಿಗಳಂತಹವರ ಶೋಧನೆಗಳ ಪರಿಚಯವನ್ನು ಈ

ಸಂಪಾದಕೀಯ

ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ದೇಶವಿದೇಶಗಳಿಂದ ಆಗಮಿಸಿದವರಿಗೆ ಮಾಡಿಸುವಂತಾಗಿದ್ದು ಹೆಮ್ಮೆಯ ವಿಚಾರ ಎನ್ನಬಹುದು.

ಇವೆಲ್ಲಾ ಹಿತ್ತಲಗಿಡ ಹುಟ್ಟುಹಾಕಬಯಸಿದ್ದ ತತ್ವಗಳಿಗೆ ಮತ್ತಷ್ಟು ಶಕ್ತಿ ದೊರಕುವಂತೆ ಮಾಡಿತು. ಪ್ರೊ. ಗುಪ್ತಾರವರ 'ಸೃಷ್ಟಿ' ಸಂಸ್ಥೆಯ ಮೂಲಕ ಗುಜರಾತಿನ ಕುಶಲಕರ್ಮಿ ಅಮೃತ್‌ಬಾಯಿಯ ಬಾಗುವ ಎತ್ತಿನಗಾಡಿ ಅನುಶೋದನೆ ವ್ಯವಸ್ಥಿತಗೊಂಡು ವಾಣಿಜ್ಯಗೊಳ್ಳುವ ಲಕ್ಷಣವನ್ನೂ ತೋರಿಸಿದಾಗ ತಳಮಟ್ಟದ ಜನರ ಶೋಧನೆಗಳಿಗೆ ಪ್ರತಿಫಲ ನೀಡುವ ಗುಪ್ತಾರ ಕನಸು ನನಸಾಗುವ ಸಾಧ್ಯತೆಗಳು ನಮ್ಮ ಮುಂದೆ ಹುಟ್ಟತೊಡಗಿದವು. ಈ ನಿಟ್ಟಿನಲ್ಲಿ ಪಡಾರು ಶಾಸ್ತ್ರೀಯವರ ಕಳೆಕಟಾವುಯಂತ್ರ, ಸರು ದಿನೇಶರ ಮುಕ್ಕಡಕ ದ್ರಾವಣ ಕೀಟನಾಶಕ, ಅಂಬಾಜಿಯ ನಾಟೀ ಪಶು ಚಿಕಿತ್ಸೆಗಳನ್ನೂ ಹೇಗೆ ವ್ಯವಸ್ಥಿತ ಗೊಳಿಸಬಹುದೆಂಬ ಯೋಚನೆ ನಮ್ಮನ್ನು ಕಾಡತೊಡಗಿತು. ಶ್ರೀ ಸಿದ್ದುಸ್ವಾಮಗೌಡರು ರೈತಶಕ್ತಿಯ ಪ್ರದರ್ಶನದ ಮೂಲಕ ಚಿಕ್ಕ ಪಡಸಲಗಿ ರೈತ ಬ್ಯಾರೇಜ್‌ನ್ನು ನಿರ್ಮಿಸಿದ ಯಶಸ್ಸಿನಿಂದ ಪರ್ಯಾಯ ಅಭಿವೃದ್ಧಿ ಮಾದರಿಯ ಹಲವು ಸಾಧ್ಯತೆಗಳು ನಮ್ಮ ಮುಂದೆ ಗೋಚರವಾಗುವಂತಾಯ್ತು. ಕೇರಳದ TBPGRI ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳು ಕಾಣಿ ಬುಡಕಟ್ಟು ಜನಾಂಗದ ದೇಶೀಯ ಜ್ಞಾನವನ್ನು ವೈಜ್ಞಾನೀಕರಿಸಿ ಉದ್ಯಮದ ಮಟ್ಟಕ್ಕೇರಿಸಿದ ಸಾಧನೆಯಿಂದ ಆಧುನಿಕ ಜ್ಞಾನ, ವಿಜ್ಞಾನ ಸಂಸ್ಥೆಗಳೂ ಈ ದೇಶೀಯ ಜ್ಞಾನ ವ್ಯವಸ್ಥೆಯನ್ನು ಹೇಗೆ ಗಟ್ಟಿ ಮಾಡಬಹುದೆಂಬ ದಾರಿ ನಮಗೆ ಕಾಣುವಂತಾಯ್ತು. ಇವೆಲ್ಲಾ ಜಾಗತೀಕರಣ, ಗ್ಯಾಟ್‌ಗಳ ಬಗೆಗಿನ ಭಯ ಆತಂಕಗಳ ಕಪ್ಪು ನೆರಳಿನಡಿಯಲ್ಲೂ ಉದಯಿಸುತ್ತಿರುವ ಕೆಂಪುಗುಲಾಬಿಗಳಂತೆ ನಮಗೆ ತೋರತೊಡಗಿದವು. ಇದೇ ಸಂದರ್ಭದಲ್ಲಿ ಪ್ರೊ. ಗುಪ್ತಾರ 'ಹನಿಬೀ ಜಾಲ' ಪಸರಿಸುತ್ತಾ ಹಿತ್ತಲಗಿಡದ ಸಹೋದರ ಪತ್ರಿಕೆಗಳು ವಿವಿಧ ರಾಜ್ಯಗಳಲ್ಲಿ ವಿವಿಧ ಭಾಷೆಗಳಲ್ಲಿ ಅರಳ ತೊಡಗಿದವು.

ಹೀಗೆ ಪರ್ಯಾಯಗಳು, ಭರವಸೆಗಳೂ ನಮ್ಮ ಮುಂದೆ ಗೋಚರವಾಗುತ್ತಿರುವಾಗಲೇ 1998ರ ಆರಂಭದ ಉತ್ತರ ಕರ್ನಾಟಕದ ರೈತರ ಆತ್ಮಹತ್ಯೆ ಪ್ರಕರಣಗಳು ನಮ್ಮನ್ನು ದಿಗ್ಭ್ರಾಂತಗೊಳಿಸಿದವು. ಇನ್ನೊಂದೆಡೆಯಿಂದ 'ಬಂಜೆ ಬೀಜ' ದಂತಹ ಜೈವಿಕ ತಂತ್ರಜ್ಞಾನದ ಅವಾಂತರಗಳು ನಮ್ಮ ಮುಂದೆ ಗೋಚರಿಸುವಾಗ ಜಾಗತೀಕರಣದ ಕ್ರೂರ ಮುಖವಾಡದ ಪರಿಚಯ ನಮಗಾಗುವಂತಾಯ್ತು. ಈ ನಿಟ್ಟಿನಲ್ಲಿ 1998ರ ಅಂತ್ಯದಲ್ಲಿ ಪ್ರೊ. ನಂಜುಂಡಸ್ವಾಮಿಯವರ ಸಮ್ಮುಖದಲ್ಲಿ ಹಿತ್ತಲಗಿಡ ಬೆಂಗಳೂರು ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಒಂದು ಸಭೆ ನಡೆಸಿ, ಜೈವಿಕ ತಂತ್ರಜ್ಞಾನದ ಅನಾಹುತಗಳ ಬಗ್ಗೆ ಒಂದು ಘೋಷಣೆಯನ್ನೂ ಹೊರಡಿಸಿತು. ಈ ಎಲ್ಲಾ ಅನುಭವಗಳಿಂದ ಹಿತ್ತಲಗಿಡದ ದಾರಿ ಸುಗಮಗೊಳಿಸಿಕೊಂಡು ಗುರಿ ತಲುಪಲು ರಾಜಕೀಯವಾದ ಕೆಲವು ಪ್ರಯತ್ನವೂ ಅಗತ್ಯವೆಂದು ಅರಿವಾಯ್ತು. ಈ ದಿಕ್ಕಿನಲ್ಲಿ 1999ರ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಹಿತ್ತಲಗಿಡ ಇದುವರೆಗೂ ಎತ್ತಿರುವ ವಿಚಾರಗಳನ್ನೇ ಪ್ರಸ್ತಾಪಿಸುತ್ತಾ 'ಕರ್ನಾಟಕ ರಾಜ್ಯದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೊಂದು ಪರ್ಯಾಯ ಮಾದರಿಯನ್ನು' ಸೂಚಿಸಿ ರಾಜ್ಯದ ಜನತಾ ಪ್ರತಿನಿಧಿಗಳಿಗೊಂದು ಪತ್ರ ಬರೆಯಲಾಯ್ತು. ಇದು ಸದ್ದಿಲ್ಲದೇ ಕೆಲಸಮಾಡುತ್ತಿತ್ತು ಎನ್ನುವುದಕ್ಕೆ ಮಾನ್ಯ ಕೃಷಿ ಮಂತ್ರಿ ಜಯಚಂದ್ರರು ಮೊನ್ನೆ ಹಿತ್ತಲಗಿಡ ಗಟ್ಟಿಯಾಗಲು ತೆರದ ಮನಸ್ಸಿನ ಸಹಾಯ ಸಹಕಾರ ವ್ಯಕ್ತಪಡಿಸಿರುವುದೇ ಸಾಕ್ಷಿ. ಇದು ಹಿತ್ತಲಗಿಡದ ಹಿಂದೆ ಕೆಲಸಮಾಡುತ್ತಿರುವ ಎಲ್ಲರಿಗೂ ದೊರೆತ ಅಪಾರ ಪ್ರೋತ್ಸಾಹವೂ ಕೂಡ.

99 ರ ಉತ್ತರಾರ್ಧದಲ್ಲಿ ಗ್ರೀನ್ ಫೌಂಡೇಷನ್ ಸಹಯೋಗದಿಂದ ಕೃಷ್ಣಪ್ರಸಾದ್‌ರ ಸಕ್ರಿಯ ಸಹಕಾರದಲ್ಲಿ ಕನಕಪುರದ ಕೆಲವು ಪ್ರೌಢಶಾಲಾ ಮಕ್ಕಳಿಗೆ ನಾಟೀವೈದ್ಯ, ಜೀವವಿವಿಧತೆ ಮತ್ತು ಪರಂಪರಾಗತ ಜ್ಞಾನಗಳ ಬಗ್ಗೆ ಹೊನ್ನೇರು ಸ್ಪರ್ಧೆಯನ್ನು ಏರ್ಪಡಿಸಲಾಯ್ತು. ಗ್ರಾಮೀಣ ಪ್ರದೇಶದ ಶಾಲಾ ಮಕ್ಕಳಲ್ಲಿ ದೇಶೀಯ ಜ್ಞಾನ ಮತ್ತು ಜೀವವಿವಿಧತೆ ಬಗೆಗಿನ ಆಸಕ್ತಿ ನೋಡಿ ನಮಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಇದರಿಂದ ಈ ಎಲ್ಲಾ ಸಂಪನ್ಮೂಲಗಳನ್ನು ಸಂರಕ್ಷಿಸುವ ಅತ್ಯಂತ ಪರಿಣಾಮಕಾರಿ ಅಸ್ತ್ರದ ನೇರ ಪರಿಚಯ ನಮಗಾದಂತಾಯ್ತು. ಶತಮಾನದ ಅತ್ಯಂತ ಹೊತ್ತಿನಲ್ಲಿ, ಸದಾ ಸಮಸ್ಯೆ, ಸೋಲುಗಳತ್ತನೇ ಚಿಂತಿಸುವುದರ ಬದಲಾಗಿ ಪರಿಹಾರ, ಪರ್ಯಾಯಗಳತ್ತ ನೋಡುವ ದೃಷ್ಟಿಕೋನ ಬೇಕೆಂಬ ನಿರ್ಣಯ ಮಾಡಿ, "ಹಸನಾದ ಕೃಷಿ ಮತ್ತು ಗ್ರಾಮೀಣ ಬದುಕಿಗಾಗಿ ಸಹಸ್ರಮಾನಕ್ಕೆ ಹಿತ್ತಲಗಿಡದ ಸಪ್ತಸೂತ್ರ"ಗಳನ್ನು ಮುಂದಿಟ್ಟೆವು. ಹೀಗೆ, ಈ ಐದು ವರ್ಷಗಳ ಅವಧಿಯಲ್ಲಿ, ನಮ್ಮೆಲ್ಲಾ ಇತಿಮಿತಿಗಳ ನಡುವೆಯೂ ಹಿತ್ತಲಗಿಡ ಹಲವು ಗಂಭೀರ ವಿಚಾರಗಳನ್ನು ಎತ್ತಿ ಸ್ಪಷ್ಟದಿಕ್ಕಿನಲ್ಲಿ ಮುಂದುವರೆಯುತ್ತಾ ಬಂದಿದೆ. ಈಗಂತೂ, ಪ್ರೊ. ಗುಪ್ತಾರು ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಂತಹ ಬೃಹತ್ ಕಾರ್ಯವನ್ನೇ ಹಮ್ಮಿಕೊಂಡಿರುವರು. ಇದರಿಂದ ಹಿತ್ತಲಗಿಡದಂತಹ ಪ್ರಯತ್ನ ಮತ್ತಷ್ಟು ಗಟ್ಟಿಯಾಗುವ ವಿಶ್ವಾಸ ನಮಗಿದೆ.

ಇಂದು ಸುಸ್ಥಿರ ಕೃಷಿ ಅಭಿವೃದ್ಧಿಯ ವಿಚಾರದಲ್ಲಿ ಜಾಗತೀಕರಣದಿಂದ ಜೈವಿಕ ತಂತ್ರಜ್ಞಾನಗಳವರೆಗೆ ಹಲವು ಹತ್ತಾರು ಸವಾಲುಗಳೇ ನಮ್ಮ ಮುಂದಿದ್ದು, ಇವುಗಳತ್ತ ಸೂಕ್ತ ರೀತಿಯ ಅನುಸಂಧಾನದ ದಾರಿಯನ್ನು ನಾವಿಂದು ಕಂಡುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ, ಗೆಳೆಯ ಗೋಪಾಲಕೃಷ್ಣ ಹೇಳುತ್ತಿರುವಂತೆ, ಪ್ರಮೇಯ, ಸಮೀಕರಣ ಸಿದ್ಧಾಂತಗಳು ನಮ್ಮ ಸಾಧ್ಯತೆಗಳನ್ನು ಮೊಟಕುಗೊಳಿಸದಂತೆ ನಾವಿಂದು ಎಚ್ಚರವಹಿಸಬೇಕಾಗಿದೆ. ಹಾಗಾಗಿಯೇ ಹಿತ್ತಲಗಿಡವಿಂದು ನಾರಾಯಣ ರೆಡ್ಡಿಯವರ ಹೈಬ್ರೀಡ್ ತಳಿಯ ಮೇಲಿನ ನಂಬಿಕೆಯನ್ನು, ಕುರುವಳ್ಳಿ ಕೃಷಿನಿವಾಸದ ವೆನಿಲ್ಲಾ ಬೆಳೆಯ ಪ್ರಯೋಗವನ್ನೂ, ಎಂ.ಜಿ. ಸತ್ಯನಾರಾಯಣರ ಸಾವಯುವ ನಾಟಿ ಕೃಷಿ ಉತ್ಪನ್ನಗಳ ರಫ್ತನ್ನು ಜೊತೆಗೆ ಪ್ರೊ. ಗುಪ್ತಾರ ತಳಮಟ್ಟದ ಜನರ ಶೋಧನೆಗಳ ಪೇಟೆಂಟ್ ಕೊಡಿಸುವ ನೆದರ್‌ಲಾಂಡ್‌ನ ಡಾ. ಬಂಡರ್ ಮತ್ತು ಹೋವರ್‌ಕಟ್‌ರ ರೈತರ ಜ್ಞಾನ ಆಧಾರದ ಮೇಲಿನ ಜೈವಿಕ ತಂತ್ರಜ್ಞಾನ ಬಳಸುವ ವಿಚಾರ! ಇವೆಲ್ಲವುಗಳನ್ನು ನಿರಾಕರಿಸುವುದರ ಬದಲು ಸಾಧ್ಯತೆಗಳಾಗಿ ನೋಡುವ ಮನೋಪ್ರವೃತ್ತಿಯನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತ್ತದೆ.

ಅನಿವಾರ್ಯ ಕಾರಣದಿಂದ ಹಿತ್ತಲಗಿಡ ಸ್ವಲ್ಪ ತಡವಾಗಿ ತಮ್ಮ ಕೈ ಸೇರುತ್ತಿರುವುದಕ್ಕೆ ಕ್ಷಮಿಸಿರಿ.

ಡಾ॥ ಟಿ.ಎನ್. ಪ್ರಕಾಶ್ ಕಮ್ಮರಡಿ

■ ತಂಬಾಕಿನ ಹಸಿರು ಮಚ್ಚೆ [Mosaic] ರೋಗಕ್ಕೆ ಕೆನೆತೆಗೆದ ಹಾಲಿನ ಉಪಚಾರ

ಹಸಿರು ಮಚ್ಚೆ ರೋಗ ತಂಬಾಕಿಗೆ ಸಸಿ ನಾಟಿ ಸಮಯದಲ್ಲಿ ಹಾಗೂ ಇತರೆ ಹಂತದಲ್ಲೂ ಹರಡಬಹುದು. ಈ ರೋಗಕ್ಕೆ ತುತ್ತಾಗಿರುವ ಗಿಡಗಳನ್ನು ಮುರುಟಿದ ಎಲೆ ಹಾಗೂ ಕಳಾಹೀನ ಹೂ ಗೊಂಚಲಿನಿಂದ ಗುರುತಿಸಬಹುದಾಗಿದೆ. ತಮಿಳುನಾಡಿನ ಸತ್ಯಮಂಗಲದ ಜನ ಈ ರೋಗ ನಿಯಂತ್ರಿಸಲು ಕೆನೆ ತೆಗೆದ ಹಾಲನ್ನು ಬಳಸುತ್ತಾರೆ. ಒಂದು ತಿಂಗಳಾದ ಸಸ್ಯಕ್ಕೆ ಒಂದು ಎಕರೆಗೆ ೫ ಲೀಟರ್ ಹಾಲಿನೊಂದಿಗೆ ೧೦೦ ಲೀಟರ್ ನೀರು ಬೆರಸಿದ ದ್ರಾವಣವನ್ನು ಸಿಂಪಡಿಸುವರು.

■ ಕಬ್ಬಿನ ಪೀಡೆಯ ನಿಯಂತ್ರಣ

ಕಬ್ಬು ಪೀಡೆಗಳಿಗೆ ಹೆಸರುವಾಸಿಯಾದುದು. ರೈತರು ಪೀಡೆಯನ್ನು ದೂರವಿಡಲು ತಮ್ಮದೇ ಅನನ್ಯ ಔಷಧಿ ಪಟ್ಟಿಒಂದನ್ನು ಕಂಡುಹಿಡಿದಿದ್ದಾರೆ. ೪ ಕೆ.ಜಿ. ಅರಘುಟೋಬೆಕ್ಟಾರ್‌ಗೆ ೨ ಕೆ.ಜಿ. ಟ್ರೈಕೋಡೆರ್ಮಾ ವಿರ್ಡೀಸ್ ಹಾಗೂ ೧ ಕೆ.ಜಿ. ದ್ರಾವಣೀಕರಿಸಿದ ಬೆಲ್ಲದಿಂದ ಮಿಶ್ರಣಮಾಡಿಕೊಳ್ಳುತ್ತಾರೆ. ಇದು ಪೀಡೆಯನ್ನು ನಿಯಂತ್ರಿಸುವುದಲ್ಲದೆ ಜೈವಿಕಗೊಬ್ಬರವಾಗಿಯೂ ಕೂಡ ಬಳಸುತ್ತಾರೆ. ಜೈವಿಕ ಗೊಬ್ಬರದ ದೀರ್ಘಕಾಲದ ಉಳುವಿಕೆಗಾಗಿ ರೈತರು ಈ ಮಿಶ್ರಣವನ್ನು ಚೆನ್ನಾಗಿ ಕೊಳೆತ ಗೊಬ್ಬರದೊಂದಿಗೆ ತೇವಾಂಶ ಬೆರಸಿ ನೆರಳಿನಲ್ಲಿ ಕಾಯ್ದಿಡುತ್ತಾರೆ.

■ ಚೆಂಡುಹೂವಿನ ಗಿಡ ಅರಿಸಿಣ ಉಳಿಸುತ್ತದೆ

ಚೆಂಡುಹೂವಿನ [*Tagetes ereeta*] ಗಿಡಗಳನ್ನು ಅರಿಸಿಣದ [*Curcumma longa*) ಬೆಳೆ ಜೊತೆ ಅಂತರ ಬೆಳೆಯಾಗಿ ಬೆಳೆದರೆ ದುಂಡು ಹುಳದ ಬಾದೆ ಹೇಳ ಹೆಸರಿಲ್ಲದಾಗುತ್ತದೆ.

■ ಸಸ್ಯ ಹೀರುವ ಕೀಟಗಳನ್ನು ನಿಯಂತ್ರಿಸುವುದು

೫ ಕೆ.ಜಿ. ಪುಡಿಮಾಡಿದ ತಂಬಾಕಿನ ಎಲೆಗೆ ೧೦ ಲೀಟರ್ ಗಂಜಲ ಹಾಗೂ ೫ ಲೀಟರ್ ನೀರು ಸೇರಿಸಿ ೩ ರಿಂದ ೫ ದಿನ ಹುದುಗಲು ಬಿಡಬೇಕು. ನಂತರ ಈ ದ್ರಾವಣವನ್ನು ಸೋಸಿ ಅದಕ್ಕೆ ೮೦ ಲೀಟರ್ ನೀರು ಬೆರಸಿ ಸಿಂಪಡಿಸಿದರೆ ಎಲ್ಲಾ ಸಸ್ಯ ಹೀರುವ ಕೀಟಗಳನ್ನು ನಿಯಂತ್ರಿಸಬಹುದು.

■ ರೋಗನಾಶಕವಾಗಿ ಲಾಂಟಾನ

ಲಾಂಟಾನದ ಎಲೆಗಳನ್ನು ಉಪಯೋಗಿಸಿಕೊಂಡು ಪ್ರಭಲ ದ್ರಾವಣ/ಸಿಂಪರಣೆಯನ್ನು ತಯಾರಿಸಿಕೊಳ್ಳಬೇಕು. ಕನಿಷ್ಠ ೫ ಕೆ.ಜಿ. ಎಲೆಗಳನ್ನು [*Lantana camara*] ೫ ಲೀಟರ್ ನೀರು ಹಾಗೂ ೧೦ ಲೀಟರ್ ಗಂಜಲದಲ್ಲಿ ಬೆರಸಿ ಮಣ್ಣಿನ ಪಾತ್ರೆಯಲ್ಲಿ ೩-೪ ದಿನ ಬಿಡಬೇಕು. ನಂತರ ಸೋಸಿ, ೮೦ ಲೀಟರ್ ನೀರು ಬೆರಸಿ ಸಾರ ಕಡಿಮೆ ಮಾಡಿ. ಇದನ್ನು ಸಿಂಪರಣ ದ್ರಾವಣವನ್ನಾಗಿ ಬಳಸಬಹುದು. ಇದು ಬೂಸ್ಟ್/ಶಿಲೀಂದ್ರ ಹಾಗೂ ಬ್ಯಾಕ್ಟೀರಿಯಾ ನಾಶಕವಾಗಿ ಉತ್ತಮ ಪರಿಣಾಮಕಾರಿ. ಆಕ್ರಮಣಕಾರಿ ಕಳೆಗಳನ್ನು ಹಿಡಿತದಲ್ಲಿಡಲೂ ಕೂಡ ಇದನ್ನು ಬಳಸಬಹುದಾಗಿದೆ.

ಸಂಗ್ರಹ : ಹನಿ ಬೀ Vol. 10(4) Oct-Dec. 99

ಅನುವಾದ : ಬಿ.ಎನ್. ಶಾರದ

ತೆಂಗಿನ ಮರಕ್ಕೆ ನುಸಿ

ಕರ್ನಾಟಕದಲ್ಲಿ ತೆಂಗಿನ ಮರಕ್ಕೆ ನುಸಿ ರೋಗ ಬಂದು ರೈತರು ಕಂಗಾಲಾಗಿದ್ದಾರೆ. ಇದರ ಬಿಸಿ ವಿಧಾನಸೌಧಕ್ಕೂ ತಟ್ಟಿ ಬಾರಿ ಚರ್ಚೆಗೆ ಗ್ರಾಸ ಒದಗಿಸಿದೆ. ಎಲ್ಲಾ ರೈತರು ಒಮ್ಮೆಗೆ ಔಷಧೋಪಚಾರ ಮಾಡಿ ರೋಗ ನಿಯಂತ್ರಿಸಿ, ಇದಕ್ಕೆ ತೋಟಗಾರಿಕೆ ಇಲಾಖೆ ಹಾಗೂ ಇತರೆ ಇಲಾಖೆಗಳು ಸಂಯುಕ್ತವಾಗಿ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳುತ್ತದೆ. ಇದರೊಂದಿಗೆ ಶೇ. ೭೫ ಸಬ್ಸಿಡಿ ಕೊಡುವುದಾಗಿ ಕೂಡ ಆಶ್ವಾಸನೆಯನ್ನು ಸರ್ಕಾರ ಕೊಟ್ಟಿದೆ. ಮಾನೋಕ್ರೋಟೋಪಾಸ್ ಸಿಂಪಡಿಸಿದ ೧೫ ದಿನಗಳವರೆಗೆ ಎಳನೀರು ಬಳಸಬಾರದೆಂಬ ಕಿವಿ ಮಾತು ಕೂಡ ಹೇಳಿದೆ.

ತಲ್ಲಣಿಸಿರುವ ರೈತರಿಗೆ ರೈತ ಸಂಘದ ಪ್ರಧಾನ ಕಾರ್ಯದರ್ಶಿ ನುಲೇನೂರು ಶಂಕರಪ್ಪನವರು ನುಸಿರೋಗ ತಡೆಗಟ್ಟಲು ಸಾವಯವ ಕೃಷಿ ಹಾಗೂ ಜೈವಿಕ ನಿಯಂತ್ರಣ ಪದ್ಧತಿ ಅನುಸರಿಸಬೇಕೆಂದು ಕರೆ ನೀಡಿದ್ದಾರೆ. ಅವರ ಸಲಹೆ ರೈತ ಸಮುದಾಯದ ಹಿರಿಯ ಅನುಭವಿ ರೈತರು ಹೇಳುವಂತೆ ಮರದ ಕೆಳಗೆ ಬೇವಿನ ಹೊಗೆ ಹಾಕಬೇಕು. ಬೆಳ್ಳುಳ್ಳಿ ಬೇವಿನೆಣ್ಣೆ ಹಾಗೂ ಪರ ಭಕ್ಷಿತ ಕೀಟಗಳನ್ನು ಬಳಸಿ ನುಸಿ ಪೀಡೆ ನಿಯಂತ್ರಿಸಿ. ಇದರ ಹತೋಟಿಗೆ ಬಳಸುವಂತೆ ತೋಟಗಾರಿಕೆ ಇಲಾಖೆ ಸಲಹಿಸಿರುವ ಮನೋಕ್ರೋಟೋಪಾಸ್/ಡೈಕೋಫಾರ್ಮ್ ಅಂತರ ವ್ಯಾಪಿ ಕ್ರಿಮಿನಾಶಕವಾಗಿರುವುದರಿಂದ ಮರವನ್ನು ವಿಷಪೂರಿತ ಮಾಡಿ ತೆಂಗಿನಕಾಯಿ ಬಳಸುವವರನ್ನು ಯೋಚಿಸುವಂತೆ ಮಾಡುತ್ತದೆಂಬ ಎಚ್ಚರಿಕೆಯನ್ನು ಕೂಡ ರೈತ ಸಮುದಾಯಕ್ಕೆ ನೀಡಿದ್ದಾರೆ.

ರೈತ ಸಂಘದ ರಾಜ್ಯಾಧ್ಯಕ್ಷರಾದ ಪ್ರೊ|| ಎಂ.ಡಿ. ನಂಜುಂಡಸ್ವಾಮಿಯವರು ತೆಂಗಿನ ನುಸಿ ಪೀಡೆ ಅಮೇರಿಕಾದ ಪೆಂಟಗನ್ ಕೇಂದ್ರದಿಂದ ಬಂದ ರೋಗಾಣು. ಮೆಕ್ಸಿಕೋ ನಗರದ ನುಸಿಪೀಡೆಯನ್ನು ಪೆಂಟಗಾನ್‌ನವರು ಕೇರಳಕ್ಕೆ ತಂದು ಬಿಟ್ಟರು. ಇದರ ಹಿಂದಿದ್ದ ಉದ್ದೇಶ ಇಲ್ಲಿ ಉತ್ಪತ್ತಿಯಾಗುತ್ತಿರುವ ಎಣ್ಣೆಯನ್ನು ನಾಶಮಾಡಿ, ಹೊರದೇಶದ ತಾಳೆಎಣ್ಣೆಗೆ ಭಾರತ ಅವಲಂಬಿಸುವಂತೆ ಮಾಡುವುದೇ ಆಗಿತ್ತು. ಈಗ ಅದು ಕರ್ನಾಟಕ ಹಾಗೂ ತಮಿಳುನಾಡಿಗೂ ಹಬ್ಬಿದೆ ಎಂದು ವಿಷಾದ ಪಟ್ಟಿದ್ದಾರೆ. ಇದರ ನಿಯಂತ್ರಣಕ್ಕೆ ರಾಸಾಯನಿಕಗಳನ್ನು ಬಳಸಿದರೆ ದುಷ್ಪರಿಣಾಮಗಳೇ ಹೆಚ್ಚು. ಹಾಗಾಗಿ ಕೇರಳದಲ್ಲಿ ಯಶಸ್ವಿಯಾಗಿ ಬಳಸಿದ ಸ್ಥಳೀಯ ವಿಧಾನ ಬಳಸುವುದೇ ಸೂಕ್ತ ಎಂದಿದ್ದಾರೆ. ಅವರೇ ಹೇಳುವಂತೆ ಬೇವಿನೆಣ್ಣೆ, ಬೆಳ್ಳುಳ್ಳಿ ಹಾಗೂ ದುರ್ಬಲ ಸೋಪಿನ ದ್ರಾವಣವನ್ನು ತಯಾರಿಸಿ ಸಿಂಪಡಿಸುವುದರಿಂದ ನುಸಿಬಾಧೆ ನಿಯಂತ್ರಿಸಬಹುದಾಗಿದೆ. ಕೇರಳದಲ್ಲಿ ಇದು ಯಶಸ್ವಿಯಾಗಿದೆ. ಇದರೊಂದಿಗೆ ಎಣ್ಣೆ ಅಂಶವಿರುವ ಪದಾರ್ಥಗಳಲ್ಲಿ ರಾಸಾಯನಿಕಗಳು ಶೇಖರವಾಗುವುದು ದೃಢವಾಗಿರುವುದರಿಂದ, ಬಾಧೆ ತಡೆಹಿಡಿಯಲು ಬಳಸುವ ರಾಸಾಯನಿಕ ಕೊಬ್ಬರಿಯಲ್ಲಿ ಶೇಖರವಾಗಬಹುದೆಂಬ ಶಂಕೆಯಿದೆ.

ಯಶಸ್ವಿ ಪ್ರಯತ್ನಗಳೇನಾದರೂ ರೈತ ಸಮುದಾಯದಿಂದ ಬಂದಲ್ಲಿ ಹಿತ್ತಲಗಿಡ ಅದನ್ನು ಪ್ರಚಾರಪಡಿಸುತ್ತದೆ.

ವಿವಿಧ ಮೂಲಗಳಿಂದ ಸಂಗ್ರಹ : ಶಾರದ ಬಿ.ಎನ್.

ದೇಶೀಯ ಹತೋಟಿ ಕ್ರಮಗಳು

ಸಹೃದಯಿ ಕೃಷಿಮಂತ್ರಿ
ಶ್ರೀ ಟಿ. ಬಿ. ಜಯಚಂದ್ರ

ಸ್ವತಃ ಕೃಷಿ ಕುಟುಂಬದಿಂದ ಬಂದಿರುವ ಸಹೃದಯಿ, ಸೌಮ್ಯ ಸ್ವಭಾವದ ಕೃಷಿ ಸಚಿವರಾದ ಶ್ರೀ ಟಿ.ಬಿ. ಜಯಚಂದ್ರರವರು ರಾಜ್ಯದ ಕೃಷಿ ಅಭಿವೃದ್ಧಿಗೆ ಮಾರಕವಾಗಲಿರುವ ಹೊಸ ಆಮದು ರಫ್ತು ನೀತಿಗಳಿಂದ ಹಿಡಿದ ಜೈವಿಕ ತಂತ್ರಜ್ಞಾನದ ಅಪಾಯಕಾರಿ ಬಳಕೆಯಂತಹ ವಿಚಾರಗಳ ಬಗ್ಗೆ ಸ್ಪಷ್ಟ ದೃಢ ನಿಲುವುಗಳನ್ನು ರೂಪಿಸಿಕೊಳ್ಳುತ್ತಿರುವರು. ಹಿತ್ತಲಗಿಡದ ಬಗ್ಗೆ ಅಪಾರ ಆಸಕ್ತಿ ತೋರಿಸುತ್ತಿರುವ ಮಾನ್ಯ ಸಚಿವರು, ಪತ್ರಿಕೆಯ ಬೆಳವಣಿಗೆಗೆ, ಇದನ್ನು ಕರ್ನಾಟಕದ ಮೂಲೆ ಮೂಲೆಗೆ ತಲುಪಿಸುವತ್ತ ತಮ್ಮ ಸಹಕಾರ ವ್ಯಕ್ತಪಡಿಸಿರುವರು. ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಅಧ್ಯಕ್ಷರೂ ಆಗಿರುವ ಶ್ರೀ ಜಯಚಂದ್ರರ ನೇತೃತ್ವದಲ್ಲಿ ರಾಜ್ಯದ ಕೃಷಿ ಸುಸ್ಥಿರ ಅಭಿವೃದ್ಧಿಯತ್ತ ಮುಂದುವರೆಯಲೆಂದು 'ಹಿತ್ತಲಗಿಡ' ಹಾರೈಸುತ್ತದೆ.

- *ಸಂ.*

■ **ದನದ ಗಂಜಲದಿಂದಲೂ**

ಬಹುದಿನಗಳಿಂದ ಶೇಖರಿಸಿದ ದನಗಳ ಗಂಜಲ ೧ ಲೀಟರ್ + ೧೦೦ ಗ್ರಾಂ ಹಿಪ್ಪೇಹಿಂಡಿ, + ೫ ಮೆಣಸಿನ ಕಾಳಿನ ಪುಡಿ. ಕಷಾಯ ತಯಾರಿಸಿ ೨೪ ಗಂಟೆ ನಂತರ ೫ ಲೀಟರ್ ನೀರು ಸೇರಿಸಿ ತೆಂಗಿನ ಮರದ ಶಿರಕ್ಕೆ ಸಿಂಪಡಿಸಬೇಕು. ಈ ದ್ರಾವಣದ ಪ್ರಮಾಣ ಒಂದು ಮರಕ್ಕೆ ಸಾಕು. ನುಸಿ ನಿವಾರಣೆಯಾಗುತ್ತದೆ. ಪ್ರತಿ ದಿನಗಳಿಗೊಂದು ಸಾರಿ, ೩ ಬಾರಿ ಸಿಂಪರಣೆ ಮಾಡಬೇಕು.

■ **ಮುಂಜಾಗ್ರತೆ ಕ್ರಮ**

೨೦೦ ಗ್ರಾಂ ಯಾವುದಾದರೂ ಎಣ್ಣೆ (ಹರಳೆಣ್ಣೆ, ಬೇವಿನ ಎಣ್ಣೆ, ಹೊಂಗೇ ಎಣ್ಣೆ, ಇತ್ಯಾದಿ) + ಪರಂಗಿಕಳ್ಳಿ ರಸ + ೫ ಲೀಟರ್ ನೀರು ಮರದ ಶಿರಕ್ಕೆ ಸಿಂಪಡಣೆ. ಎಣ್ಣೆಯ ಅಂಶ ಹರಳುಗಳ ಮೇಲೆ ಶೇಖರಣೆ ಮಾಡುವುದರಿಂದ ನುಸಿ ಹುಳುಗಳು ಕೂರಲು ಸಾಧ್ಯವಾಗುವುದಿಲ್ಲ.

ಬಸವರಾಜ, ಸಂತೇಶಿವರ

ಮನೆಯಲ್ಲಿ ಪೀಡೆ ನಿಯಂತ್ರಣ

ಇರುವೆಗೆ **:** ಮನೆಯಲ್ಲಿ ಇರುವೆಗಳು ಕಂಡಾಗ ಅರಿಶಿಣ ಪುಡಿ ಉದುರಿಸುವುದು ವಾಡಿಕೆ. ಹಾಗೆಯೇ ಹಿಟ್ಟಿರುವೆ ಅಥವಾ ಲಕ್ಷ್ಮೀ ಇರುವೆ ಬಂದಾಗ ಅವುಗಳ ಮೇಲೆ ಸ್ವಲ್ಪ ಸಕ್ಕರೆ ಉದುರಿಸಿದರೆ ಸಾಕು ಐದು ನಿಮಿಷದಲ್ಲಿ ಇರುವೆಗಳು ಅಲ್ಲಿಂದ ಮಾಯ ಎನ್ನುತ್ತಾರೆ ಬೆಂಗಳೂರಿನ ಶ್ರೀಮತಿ ಭಾರತಿ ಪ್ರಕಾಶ್.

ನೊಣಕ್ಕೆ **:** ಸಾಮಾನ್ಯವಾಗಿ ಹಳ್ಳಿ ಮನೆಯಲ್ಲಿ ನೊಣನೊಣ ಎಂದು ಗೊಣಗುವವರಿಗೆ ಉಪಾಯ ಹುಡುಕಿಕೊಟ್ಟಿದ್ದಾರೆ ಶಿರಸಿ ಕರಸೊಳ್ಳಿಯ ಶ್ರೀಮತಿ ಲಲಿತಾ ಹೆಗಡೆ. ಚಹಾ ಸೋಸಿದ ನಂತರ ಉಳಿಯುವ ಪುಡಿ (ಚರಟ) ಯನ್ನು ಒಲೆಗೆ ಹಾಕಿ, ಬರುವ ಹೊಗೆಗೆ ನೊಣವೆಲ್ಲಾ ಪರಾರಿ.

ಹಾಗೆಯೇ ಗಣಸೆಬಳ್ಳಿಯನ್ನು ಸಣ್ಣದಾಗಿ ತುಂಡು ಮಾಡಿ, ಒಲೆಗೆ ಹಾಕಿದರೂ ಸಹ ನೊಣವನ್ನೋಡಿಸಬಹುದು ಎನ್ನುತ್ತಾರೆ ಅವರು.

ಜಿರಳೆಗೆ **:** ಅಡಿಗೆ ಸೋಡಕ್ಕೆ ಸ್ವಲ್ಪನೀರು ಬೆರೆಸಿ ಸಣ್ಣ ಉಂಡೆ ಮಾಡಿ ಜಿರಳೆ ಬರುವ ಕಡೆ ಇಟ್ಟರೆ ಇನ್ನುಮುಂದೆ ಜಿರಳೆ ಆ ಕಡೆ ತಿರುಗಿ ನೋಡುವುದೇ ಇಲ್ಲವಂತೆ

ಮಿಡತೆ ಹತೋಟಿ **:** ಹೊಲದಿಂದ ಹೊಲಕ್ಕೆ, ಹಳ್ಳಿಯಿಂದ ಹಳ್ಳಿಗೇ ಏಕೆ? ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಆಹಾರ ಹುಡುಕುತ್ತಾ ವಲಸೆ ಹೋಗುವಷ್ಟು ಶಕ್ತಿ ಇರುವ ಮಿಡತೆಗಳು ಜೋಳ, ಸಜ್ಜೆ, ನವಣೆ ಬೆಳೆಗಳ ಕೀಟಗಳು. ಹೊಲದ ಮಧ್ಯೆ ತಗಡಿನ ಮೇಲೆ ಡಾಂಬರ್ ಬಳಿದು ಕಂಬಕ್ಕೆ ತೂಗುಹಾಕಿದರೆ ಮಿಡತೆಗಳು ಆಕರ್ಷಣೆಗೊಂಡು ಅದರ ಮೇಲೆ ಬಂದು ಕುಳಿತರೆ.... ಕಥೆ ಮುಗಿಯಿತು, ಮತ್ತೆ ಏಳಲಾರವು. ಈ ವಿಷಯ ತಿಳಿದ ಇತರ ಮಿಡತೆಗಳು ಅಲ್ಲಿಂದ ಪರಾರಿ. ಧಾರವಾಡ ಜಿಲ್ಲೆ ತಿಮ್ಮಾಪುರದ ರುದ್ರಪ್ಪನವರಿಂದ ನೆಮ್ಮದಿಯ ನಿಟ್ಟುಸಿರು.

■ **ನಾಟೀ ಬೀಜ ಶೇಖರಣೆ**

ಮುಂಗಾರಿನಲ್ಲಿ ಬೆಳೆದ ದವಸಧಾನ್ಯಗಳಿಂದ ಮುಂದಿನ ಹಂಗಾಮಿಗೆ ಸ್ವಲ್ಪ ಬೀಜಕ್ಕಾಗಿ ಆಯ್ದು ಶೇಖರಿಸಿಡುವ ಮುನ್ನ ಬೀಜ ಉಪಚರಿಸುವ ಉತ್ತರ ಕನ್ನಡದ ಹಲವು ರೈತರ ವಿಧಾನ ಹೀಗಿದೆ.

ಅ) ಚೆನ್ನಾಗಿ ಒಣಗಿದ ಬಿತ್ತನೆ ಬೀಜಗಳನ್ನು ಹಸುವಿನ ಗಂಜಲದಲ್ಲಿ ತೊಳೆದು ಬಿಸಿಲಿನಲ್ಲಿ ಒಣಹಾಕಿ ನಂತರ ಶೇಖರಣೆ.

ಆ) ಶೇಂಗಾ ಎಣ್ಣೆ ಅಥ್‌ವಾ ಬೇವಿನೆಣ್ಣೆಯು ಬೀಜಗಳಿಗೆ ಲೇಪನವಾಗುವಂತೆ ಬಿತ್ತನೆ ಬೀಜಗಳನ್ನು ಎಣ್ಣೆಯೊಂದಿಗೆ ಮಿಶ್ರಮಾಡಿ ನಂತರ ಶೇಖರಿಸಿಡುವುದು ವಾಡಿಕೆ.

ಕ) ಬೇವಿನ ಎಲೆ, ಲಕ್ಕಿಸೊಪ್ಪನ್ನು ಬೀಜಗಳೊಂದಿಗೆ ಬೆರೆಸಿ ಶೇಖರಿಸಿಡುವುದು ಗೊತ್ತಿದೆ ತಾನೇ? ಹಾಗೆಯೇ ಬೇವಿನ ಬೀಜದ ಪುಡಿಯನ್ನು ಬೀಜದೊಂದಿಗೆ ಬೆರೆಸಿ ಶೇಖರಣೆ ಮಾಡಿ ಎಂದು ಹೇಳಿ, ಹುಳ ಬಂದ್ರೆ ಕೇಳ್ರಿ ಎನ್ನುವರು ಧಾರವಾಡ ಜಿಲ್ಲೆಯ ಓರ್ವ ಹಿರಿಯ ಕೃಷಿಕ ಶ್ರೀ ರುದ್ರಪ್ಪನವರು.

ಸಂಗ್ರಹ : ಬಿ.ಎ. ಅನಿಲ್‌ಕೌಶಿಕ್

ಹಿತ್ತಲ ಗಿಡದ ಎಲ್ಲಾ ಹಳೆ ಸಂಚಿಕೆಗಳನ್ನು ರೂ. ೩೦೦ ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು M.O./DD ಕಳಿಸಿ, ಅಂಚೆ ವೆಚ್ಚ ಉಚಿತ

ಹಿಮಾಚಲ ಪ್ರದೇಶ, ಮಧ್ಯಪ್ರದೇಶದ ರೈತಾಪಿ ಜನ ತಮ್ಮ ಜಾನುವಾರುಗಳಿಗೆ ಬರುವ ಖಾಯಿಲೆಗಳಿಗೆ ಮಾಡುವ ಔಷಧಿಗಳ ವಿವರ ಈ ಕೆಳಗಿನಂತಿವೆ.

ಮೇಕೆಗಳಿಗೆ ಬರುವ ಕಾಲು ಬಾಯಿ ರೋಗ

ಬೆಳ್ಳುಳ್ಳಿಯನ್ನು ಸಾಸಿವೆ ಎಣ್ಣೆಯಲ್ಲಿ ಕುದಿಸಿ, ಕಾಯಿಸಿದ ಎಣ್ಣೆಯನ್ನು ತಣಿಸಿದ ನಂತರ ಮೇಕೆಗಳಿಗೆ ಕುಡಿಸುತ್ತಾರೆ. ಅಷ್ಟಲ್ಲದೆ, ಪ್ರತಿನಿತ್ಯ ಮೇಕೆಯ ಕಾಲಿನ ಗೊರಸುಗಳನ್ನು ಕಹಿ ಬೇವಿನ ನೀರಿನಿಂದ ತೊಳೆಯುತ್ತಾರೆ. (ಕಹಿ ಬೇವನ್ನು ಕುದಿಸಿ, ಆರಿಸಿದ ನೀರು)

ಹಸು, ಮೇಕೆಗಳಿಗೆ ಬರುವ ಜ್ವರ

ಲಕ್ಕಿಲಿ ಅಥವಾ ಗಿಡ (*Vitex negundo*) ಮತ್ತು (*Vida Serpens*) ನ ಎಲೆಗಳನ್ನು ನೀರಿನಲ್ಲಿ ಕುದಿಸಿ, ಆರಿಸಿದ ಕಷಾಯವನ್ನು ಜ್ವರ ಬಂದ ಪ್ರಾಣಿಗಳಿಗೆ ಕುಡಿಸುತ್ತಾರೆ.

ಹಾಲು ಹೆಚ್ಚಿಸಲು ಹಲವು ಮಕ್ಕಳ ಬಳ್ಳಿ

ಶತಾವರಿ ಗೆಡ್ಡೆ ಅಥವಾ ಹಲವು ಮಕ್ಕಳ ಬಳ್ಳಿಯ (*Asparagus roumosus*) ಬೇರನ್ನು ಜಜ್ಜಿ ಕಾಳುಗಳೊಂದಿಗೆ ಬೆರೆಸಿ ಹಸುಗಳಿಗೆ ತಿನ್ನಿಸುವುದರಿಂದ ಹಸುಗಳ ಹಾಲು ಹೆಚ್ಚುತ್ತದೆ.

(ಹಲವು ಮಕ್ಕಳ ಬಳ್ಳಿಯನ್ನು ಹಸುವಿನ ಹಾಲು ಹೆಚ್ಚಿಸಲು ಬಳಸುವ ಕ್ರಮ ಮಲೆನಾಡಿನ, ತೀರ್ಥಹಳ್ಳಿ ತಾಲ್ಲೂಕಿನ ಬಸವನಗದ್ದೆಯ ಪದ್ಮಾವತಿ ಕೂಡಾ ಹೇಳುತ್ತಾರೆ ಸಂ.)

ಮೂಲ : ಸಂಜಯ ಕೆ. ಜೋಷಿ
ಹನಿಬೀ ಸಂ. 10(4), 1999

ಕೆಮ್ಮೀ ನಿಮ್ಮ ಎಮ್ಮೆ ಹಸುಗಳಿಗೆ

ನಿಮ್ಮ ಜಾನುವಾರು ಕೆಮ್ಮುತ್ತಾ, ಮೂಗಿನ ಹೊಳ್ಳೆಗಳಿಂದ ನೀರು ಸುರಿಸುತ್ತಾ, ಸುಸ್ತಾಗಿ ತಲೆ ಅಡಿ ಹಾಕಿ ನಿಂತಿದೆಯೇ? ಇದೋ ಹಾಗಾದರೆ, ಗುಜರಾತಿನ ನವಸಾರಿ ಜಿಲ್ಲೆಯ ಗಂಗೂಬಾಯಿ ಹೇಳುವ ಔಷಧಿಗೆ ಕಿವಿಕೊಡಿ.

ಸುಮಾರು 100 ಗ್ರಾಂ ನಷ್ಟು ನುಗ್ಗೇಸೊಪ್ಪಿನ ಮರದ ಚಕ್ಕೆ, 50 ಗ್ರಾಂ ನಷ್ಟು ದೊಡ್ಡ ಹರಳು (*Jatsopa curcas*) ಮರದ ಚಕ್ಕೆ ಮತ್ತು ಬೇರುಗಳನ್ನು ಪುಡಿಮಾಡಿ, ನೀರಿನಲ್ಲಿ ಬೆರೆಸಿ, ಕೆಲ ನಿಮಿಷಗಳ ಕಾಲ ಕುದಿಸಿ, ಜ್ವರ ಬಂದ ಪ್ರಾಣಿಗೆ ಕುಡಿಸುವುದರಿಂದ ಜ್ವರ ಇಳಿಯುತ್ತದೆ.

ಕರುಸತ್ತ ದನದ ಹಾಲು ಕರೆಯುವುದು

ಸತ್ತುಹೋದ ಕರುವಿನ ಚರ್ಮವನ್ನು ತುಣುಕಾಗದಂತೆ ಸರಿಯಾದ ಕ್ರಮದಲ್ಲಿ ಬೇರ್ಪಡಿಸಬೇಕು. ಆಗ ನಾಲ್ಕೈದು ದಿವಸಗಳವರೆಗೆ ಬಿಸಿಲಿನಲ್ಲಿ ಒಣಗಿಸಬೇಕು. ನಂತರ ಕವಳೆ (ಭತ್ತದ) ಅಥವಾ ನವಣೆ ಹುಲ್ಲಿನಿಂದ ಅದೇ ಚರ್ಮವನ್ನು ಉಪಯೋಗಿಸಿ ಹುಲ್ಲು ತುಂಬಿ ಮೊದಲು ಇರುವ ಕರುವಿನ ಹಾಗೆ ತಯಾರಿಸಿ ಹೊಲಗೆಯಾಕಬೇಕು. ಆ ರೀತಿ ಕೃತಕ ಕರು ತಯಾರಿಸುವುದು ತಾಯಿ ಪಶುವಿಗೆ ಕಾಣಿಸಬಾರದು. ಭತ್ತದ ಹೊಟ್ಟಾಗಲಿ ಅಥವಾ ಶೆಂಗಾದ ಹಿಂಡಿಯಾಗಲಿ ಉಪ್ಪಿನ ನೀರು ಸಿಂಪಡಿಸಿ ಆ ತಾಯಿ ಪಶುಗೆ ತಿನ್ನಲು ಇಡಬೇಕು. ನಂತರ ತಯಾರಿಸಿದ ಶಿಶುವನ್ನು ತಾಯಿ ಹಸುವಿನ ಮುಂದೆ ನಿಲ್ಲಿಸಿ ಕರುವಿನ ಕೊರಳು ಹಿಡಿದುಕೊಂಡು ಇರಬೇಕು. ಆಗ ಆ ತಾಯಿ ಹಸು ಅಥವಾ ಎಮ್ಮೆ ತನ್ನ ಶಿಶುವಿನ ವಾಸನೆ ನೋಡಿ ಅದರ ಮೈ ಸವರಲು (ನೆಕ್ಕಲು) ಶುರು ಮಾಡುತ್ತದೆ. ನಂತರ ಸರಳ ರೀತಿಯಲ್ಲಿ ಹಾಲನ್ನು ಕರೆಯಬಹುದು. ಈ ಪದ್ಧತಿ ಗುಲ್ಬರ್ಗ ಪ್ರಾಂತ್ಯದಲ್ಲಿದೆ.

ವಿವರ : ಹುಸೇನ್ ಎಂ. ಗಿರಣಿ

ಕೆಚ್ಚಲು ಬಾವಿಗೆ ಹೆಪ್ಪುನೇರಳೆ

ಗಾಯಗಳಿಂದ ದನಗಳ ಕೆಚ್ಚಲು ಊದಿಕೊಂಡಾಗ ದನ ವಿಪರೀತ ನೋವು ಅನುಭವಿಸುತ್ತಿರುತ್ತದೆ. ಇದಕ್ಕೆ ಪರಿಹಾರವಾಗಿ ಗುಜರಾತಿನ ಸಬರಕಾಂಟ



ಜಿಲ್ಲೆಯ ಹರಿಬಾಯಿ ಹೆಪ್ಪುನೇರಳೆ ಸೊಪ್ಪಿನ ರಸವನ್ನು ಬೆಲ್ಲದೊಂದಿಗೆ ಬೆರಸಿ, ಅದರ ಲೇಪನವನ್ನು ಊದಿದ ಕೆಚ್ಚಲಿಗೆ ಲೇಪಿಸುವ ಪದ್ಧತಿಯನ್ನು ಬಹಳ ಹಿಂದಿನಿಂದಲೂ ಅನುಸರಿಸಿಕೊಂಡು ಬಂದಿರುವರು.

ಕಸ ಹೊರಬರಲು ಕಬ್ಬಿನಗರಿ ರಸ

ಕರು ಹಾಕಿದ ನಂತರ ಕೆಲ ಹಸುಗಳಲ್ಲಿ ಕಸ (*Placnta*) ಸರಾಗವಾಗಿ ಹೊರ ಬರುವುದಿಲ್ಲ. ಇದಕ್ಕೆ ದಾಹೋಡ್ ಜಿಲ್ಲೆಯ ಮಹಿಳೆ ಬಡುದ್‌ಬಿನ್ ಕಂಡುಕೊಂಡ ಸರಳ ಉಪಾಯವೆಂದರೆ ಕಬ್ಬಿನ ಗರಿ ಸೊಪ್ಪಿನ ರಸವನ್ನು ಅರೆದು ಕುಡಿಸುವುದು. ಹೀಗೆ ಮಾಡಿದಲ್ಲಿ ಕೆಲ ಗಂಟೆಗಳಲ್ಲಿ ಕಸ ಹೊರಬರುತ್ತದೆಯಂತೆ.

ಮೂಲ : ಹನಿಬೀ ಸಂ ಪುಟ 10(4), 1999

ಕರ್ನಾಟಕ ತಿಗಳರ ಕೃಷಿ ಬದುಕಿನ ಅನನ್ಯ ರೀತಿ

– *ಚಿತ್ರಶೇಖರ*

ತಿಗಳರು ಮೂಲತಃ ಆದಿ ದ್ರಾವಿಡ ಜನಾಂಗಕ್ಕೆ ಸೇರಿದವರು. ತಿಗಳ ಎಂದರೆ ತಮಿಳಿನವ ಎಂದು ಸಹ ಹೇಳಬಹುದು. ತಮಿಳು ನಾಡಿನಲ್ಲಿ ಇವರನ್ನು ಅರ ತಿಗಳರು ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ತಿಗಳ ಅಥವಾ ಆದಿ ಜಾಂಬವ ಎಂಬ ಪೌರಾಣಿಕ ಹೆಸರಿದೆ. ಕರ್ನಾಟಕದಲ್ಲಿ ಈ ಜನಾಂಗವನ್ನು ಬೆಂಗಳೂರಿನ ಗ್ರಾಮಾಂತರ ಜಿಲ್ಲೆಗೆ ಸೇರಿದ ಎಲ್ಲಾ ತಾಲ್ಲೂಕುಗಳಲ್ಲಿಯೂ ಹಾಗೂ ಕೋಲಾರ, ಮಂಡ್ಯ, ತುಮಕೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಾಣಬಹುದು. ಮಲೆನಾಡಿನ ಪ್ರದೇಶಗಳಲ್ಲಿ ಅಪರೂಪಕ್ಕೆ ಒಂದೊಂದು ಕುಟುಂಬಗಳನ್ನು ಕಾಣಬಹುದು. ತಿಗುಳರ ಸಾಂಸ್ಕೃತಿಕ ಲಕ್ಷಣಗಳೆಂದರೆ ವಯಸ್ಸಾದ ಮಹಿಳೆಯರು ಇಂದಿಗೂ ಕುಪ್ಪಸವನ್ನು ತೊಡುವುದಿಲ್ಲ. ಬೆಳ್ಳಿ, ಬಂಗಾರದ ಒಡವೆಯನ್ನು ಧರಿಸುವುದಿಲ್ಲ. ಇವರ ಅಲಂಕಾರಿಕ ಒಡವೆಗಳೆಂದು ಬೆಂಡು ಓಲೆಗಳು ಮಾತ್ರ. ಇವರಲ್ಲಿ ಕೆಲವರು ಇಂದಿಗೂ ಸಹ ಮೂಗುನೊತ್ತನ್ನು ಇಡುವುದಿಲ್ಲ. ಈ ಎಲ್ಲಾ ಸಂಸ್ಕೃತಿಯು ದ್ರಾವಿಡ ಶೈಲಿಯದ್ದೇ ಆಗಿದೆ. ತಿಗುಳರು ಮೂಲತಃ ಸಣ್ಣ ರೈತರು. ಇವರು ವಾಸಿಸುವಂತಹ ಸ್ಥಳಗಳಲ್ಲೇ ಕೈತೋಟಗಳಿರುತ್ತವೆ. ಈ ಕೈತೋಟಗಳೇ ಇವರ ಮುಖ್ಯವಾದ ಜೀವನ. ತಿಗಳರು ಇಂದಿಗೂ ಸಹ ಆಧುನಿಕ ಕೃಷಿಗಾಗಿ ಮಹತ್ವ ನೀಡಿಲ್ಲ. ಅವರು ಹೆಚ್ಚಿನದಾಗಿ ಪೂರ್ವಾರ್ಜಿತ ಪದ್ಧತಿ ಮತ್ತು ಜೀವನಕ್ರಮವನ್ನೇ ಅನುಸರಿಸುತ್ತಿದ್ದಾರೆ.

> *ಸಾಮಾನ್ಯಕ್ಕೆ ನೂರಕ್ಕೆ ತೊಂಬತ್ತರಷ್ಟು ತಿಗಳರು ಒಂದು ಕುಂಟೆಯ ಜಾಗದಲ್ಲಾದರೂ ವೀಳ್ಯದೆಲೆಯನ್ನು ಬೆಳೆಯುತ್ತಾರೆ. ಈ ವೀಳ್ಯದೆಲೆ, ಅಡಿಕೆ, ಗೆಣಸು ಇವುಗಳೆಲ್ಲವೂ ಯಾವುದೇ ರಾಸಾಯನಿಕ ಗೊಬ್ಬರವನ್ನು ಹಾಕದೆ ಬೆಳೆಯುವ ಬೆಳೆಗಳು. ಈಗ ನಾಟಿ ಗೊಬ್ಬರದಿಂದ ಮುನ್ನೂರು ವರ್ಷದ ವೀಳೆದೆಲೆಯ ಅಂಬುಗಳಿವೆ.*

ಕೃಷಿ ಪದ್ಧತಿ

ತಿಗಳರು ಮೂಲತಃ ಸಣ್ಣ ಕೃಷಿಕರು. ಇವರಿಗೆ ಸರಾಸರಿ ಮೂರು ಕುಂಟೆಯಿಂದ ಮೂರು ಎಕರೆ ಜಮೀನು ಇರುತ್ತದೆ. ತಿಗಳರ ಕೃಷಿಯೆಂದರೆ ಸಣ್ಣ ತೋಟಗಾರಿಕಾ ಬೇಸಾಯ ಮಾಡುವಂತಹದ್ದು. ಇವರ ಮುಖ್ಯ ಬೆಳೆಗಳೆಂದರೆ ವೀಳೇದೆಲೆ, ಅಡಿಕೆ, ಕರಿಮೆಣಸು, ಅರಿಶಿನ, ಶುಂಠಿ, ಗೆಣಸು, ಪಪ್ಪಾಯಿ ಇವುಗಳ ಜೊತೆಗೆ ವಿವಿಧ ರೀತಿಯ ಸೊಪ್ಪುಗಳು. ಅವುಗಳಲ್ಲಿ ಮುಖ್ಯವಾದುವೆಂದರೆ ದಂಟಿನ ಸೊಪ್ಪು, ಹರಿವೆ ಸೊಪ್ಪು, ಕೊತ್ತಂಬರಿ, ಮೂಲಂಗಿ. ಇವುಗಳನ್ನು ಪ್ರತಿಯೊಬ್ಬ ತಿಗಳರೂ ಬೆಳೆಯುತ್ತಾರೆ. ತಿಗಳರಲ್ಲಿ ಇನ್ನೊಂದು ರೀತಿಯ ಬೇಸಾಯವೆಂದರೆ ಮಿಶ್ರ ತೋಟಗಳ ಬೆಳೆ ಬೇಸಾಯ ಕ್ರಮ. ಇವರ ಮಿಶ್ರ ಬೇಸಾಯದ ಬೆಳೆಗಳೆಂದರೆ ಅಡಿಕೆ ಸಸಿಗಳನ್ನು ನಾಟಿ ಮಾಡಿದ ಎರಡು ಮೂರು ವರ್ಷದವರೆಗೆ ಈ ಅಡಿಕೆ ಜೊತೆಯಲ್ಲಿ ಮಿಶ್ರಬೆಳೆಯಾಗಿ ಪಪ್ಪಾಯ, ಗೆಣಸು, ಹರಳು ಇವನ್ನು ಅಡಿಕೆ ಸಸಿಗೆ ನೆರಳಾಗಿ ಬಳಸುತ್ತಾರೆ. ಇದೇ ಅಡಿಕೆಗೆ ಇನ್ನೊಂದು ಮಿಶ್ರಬೆಳೆ ಎಂದರೆ ಅಲಸಂಡೆ, ಏಲಕ್ಕಿ ಬಾಳೆ, ಹೂವು. ಒಣಕೃಷಿಯಲ್ಲಿ ಮಿಶ್ರಬೇಸಾಯವೆಂದರೆ ರಾಗಿಯ ಜೊತೆಯಲ್ಲಿ ತೊಗರಿ, ಹುಚ್ಚೆಳ್ಳು, ಅವರೇಗಿಡ, ಸಾಸಿವೆ, ಹೆಜ್ಜಾವೆ ಇವುಗಳನ್ನು ಮಿಶ್ರ ಬೇಸಾಯವಾಗಿ ಬೆಳೆಯುತ್ತಾರೆ ಮತ್ತು ಶೇಂಗಾದ ಜೊತೆಯಲ್ಲಿ ತೊಗರಿ, ಅವರೆ, ಹುಚ್ಚೆಳ್ಳು ನಾಟಿ ತಳಿ ಜೋಳಗಳನ್ನು ಬೆಳೆಯುತ್ತಾರೆ.

ಅಡಿಕೆ ಬೇಸಾಯ ಕ್ರಮ

ಅಡಿಕೆ ತಿಗುಳರ ಬಹು ಮುಖ್ಯ ವಾಣಿಜ್ಯ ಬೆಳೆ. ಈ ಅಡಿಕೆಯೊಂದಿಗೆ ವೀಳ್ಯದೆಲೆ, ಶುಂಠಿ, ಅರಿಶಿನ, ಕರಿಮೆಣಸು ಇವುಗಳನ್ನು ಫಲಬಿಡದ ಅಡಿಕೆ ತೋಟಗಳಲ್ಲಿ ಮಿಶ್ರ ಬೆಳೆಯಾಗಿ ಬೆಳೆಯುತ್ತಾರೆ. ಅಡಿಕೆ ಸಸಿಯನ್ನು ೭ - ೮ ಅಡಿ ಅಂತರದಲ್ಲಿ ನಾಟಿಮಾಡುತ್ತಾರೆ. ಇದರ ಮಧ್ಯದಲ್ಲಿಯೇ ಬೇರೆ ಬೇರೆ ಬೆಳೆಗಳನ್ನು ಬೆಳೆಯುತ್ತಾರೆ.

ತಿಗುಳರು ಅಡಿಕೆ ಬೆಳೆಗೆ ಎಷ್ಟು ಮಹತ್ವ ನೀಡುತ್ತಾರೋ ಅಷ್ಟೇ ಮಹತ್ವ ವೀಳ್ಯದೆಲೆ ಬೆಳೆಗೆ ನೀಡುತ್ತಾರೆ. ಅಗಸೇಮರಕ್ಕೆ ವೀಳ್ಯಗಿಡವನ್ನು ಹಬ್ಬಿಸಿ ಬೆಳೆಸುವುದುಂಟು. ರಾಸಾಯನಿಕ ಗೊಬ್ಬರವನ್ನು ಈ ಅಂಬಿಗೇನಾದರೂ ಕೊಟ್ಟರೆ ಮೂರು ನಾಲ್ಕು ವರ್ಷಕ್ಕೇ ಅಂಬುಗಳು ಒಣಗುತ್ತವೆ ಮತ್ತು ವಿವಿಧ ರೋಗಗಳಿಗೆ ತುತ್ತಾಗುತ್ತವೆ ಎಂಬುದು ಅವರ ಅನುಭವ.

ಈ ಬಯಲು ಸೀಮೆಯ ಅಡಿಕೆಗಳಿಗೆ ಬಣ್ಣ ಕಟ್ಟುತ್ತಾರೆ. ಈ ಬಣ್ಣಕಟ್ಟುವ ತಂತ್ರಗಾರಿಕೆ ತಿಗಳರು ಚೆನ್ನಾಗಿ ಬಲ್ಲವರು. ನೇರಳೆಯ ಚಕ್ಕೆ, ಅರಳಿ ಚಕ್ಕೆಗಳನ್ನು ಈ ಬಣ್ಣ ಕಟ್ಟುವ ವಿಧಾನಕ್ಕೆ ಬಳಸುತ್ತಾರೆ. ಅರಳಿ ಚಕ್ಕೆ ಅಥವಾ ನೇರಳೇ ಚಕ್ಕೆಯನ್ನು ನೀರಿನಲ್ಲಿ ಚೆನ್ನಾಗಿ ಬೇಯಿಸಿ, ಆ ರಸವನ್ನು ಅಡಿಕೆ ಬೇಯಿಸಲು ಉಪಯೋಗಿಸುತ್ತಾರೆ. ಆಗ ಅಡಿಕೆ ಕೆಂಪು ಬಣ್ಣಕ್ಕೆ ಬರುತ್ತದೆ.

ಭೂಮಿಯನ್ನು ಹದ ಮಾಡಿ ನೀರು ಬಳಸುವುದು

ತಿಗಳರು ಒಣ ಕೃಷಿ ಬೇಸಾಯ ಮಾಡಲು ಮುಂಗಾರು ಮಳೆಯ ಪ್ರಾರಂಭದಿಂದಲೇ ಉಳುಮೆಯನ್ನು ಮಾಡುತ್ತಾರೆ. ಈ ಉಳುಮೆಯನ್ನು ಮರದ ನೇಗಿಲುಗಳಲ್ಲೇ ಮಾಡುವುದು. ಅವರು ಬಳಸುವ ಮರದ ನೇಗಿಲೆಂದರೆ ಬೇವಿನ ಮರ ಮತ್ತು ಹೊಂಗೆಯ ಮರದ ನೇಗಿಲು. ಈ ಜಾತಿಯ ಮರದ ನೇಗಿಲನ್ನು ಉಪಯೋಗಿಸುವುದರಿಂದ ಈ ಬಯಲು ಸೀಮೆಯ ಬಹು ಮುಖ್ಯ ಕಳೆಯಾದ ಕೊಡ್ಡನಾರಿ ಗಡ್ಡೆಯನ್ನು ನಾಶಪಡಿಸಲು ಸಾಧ್ಯವಂತೆ. ಈ ಕೊಡ್ಡನಾರಿ ಗೆಡ್ಡೆ ಬಂಜರು ಭೂಮಿಯಲ್ಲಿ ಬೆಳೆಯದೆ, ತುಂಬಾ ಫಲವತ್ತಾದ ಭೂಮಿಯಲ್ಲಿ ಬೆಳೆಯುತ್ತದಂತೆ. ಇದರಿಂದ ಭೂಮಿಯು ಫಲವತ್ತತೆ

ತಿಳಿಯುತ್ತದೆಯಂತೆ. ತಿಗಳರು ಒಂದು ಬೆಳೆಗೆ ನಾಲ್ಕು ಸಾರಿ ಉಳುಮೆ ಮಾಡುತ್ತಾರೆ. ಎರಡನೆ ಉಳುಮೆ ಸಮಯದಲ್ಲಿ ಕೆರೆಯ ಮಣ್ಣನ್ನು ಬಳಸುತ್ತಾರೆ. ನಾಲ್ಕನೇ ಉಳುಮೆಯ ಸಮಯದಲ್ಲಿ ಕೊಟ್ಟಿಗೆ ಗೊಬ್ಬರವನ್ನು ಮಿಶ್ರ ಮಾಡುತ್ತಾರೆ.

ತಿಗಳರು ಹಿಂದೆ ಬಸಿ ಕಾಲುವೆ ಅಥವಾ ಬಸಿ ಗುಂಡಿಗಳನ್ನು ತೋಡಿ ಏತದ ಬಾನಿ ಅಥವಾ ರಾಟೆಗಳಿಂದ ನೀರನ್ನು ತೆಗೆದು ಅಂಬುಗಳಿಗೆ ನೀರನ್ನು ಕೊಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅಂತರ್ಜಲದ ಪ್ರಮಾಣ ಕಡಿಮೆಯಾದುದರಿಂದ ಈ ಏತ ಮತ್ತು ರಾಟೆಗಳು ಇಲ್ಲವಾಗಲು ಸರ್ಕಾರಿ ನೀರಿನ ಮೇಲೆ ಅವಲಂಬಿಸಲಾಗಿದೆ. ಈಗಲೂ ಸಹ ದೊಡ್ಡಬಳ್ಳಾಪುರದ ಹೆಗ್ಗುಂದ ಸುತ್ತಮುತ್ತಲಿನ ತಿಗಳರು ಈ ಕಪಿಲೆಗಳಿಂದ ನೀರನ್ನು ಎತ್ತುತ್ತಿದ್ದಾರೆ. ಇವರು ಸಿಹಿನೀರಿನ ಅಂತರ್ಜಲವನ್ನು ಹುಡುಕಲು ಹೊಂಗೆಕಡ್ಡಿಯನ್ನು ಉಪಯೋಗಿಸುತ್ತಾರೆ ಮತ್ತು ಹೊಂಗೆ ಮರಗಳು ಎಲ್ಲಿ ಸೊಂಪಾಗಿ ಬೆಳೆಯುತ್ತವೆಯೋ ಅಲ್ಲಿ ಸಿಹಿನೀರಿನ ಅಂತರ್ಜಲ ಇವೆ ಎಂದು ಗಮನಿಸುತ್ತಾರೆ.

ತೂಗೂತೊಟ್ಟಿಲು ಹುಳುಗಳು ನೆಲದ ಮಟ್ಟದಲ್ಲಿ ಗುಂಪುಗುಂಪಾಗಿ ಹಾರಾಡುವುದು, ಕರಿ ಇರುವೆಗಳು ಮೊಟ್ಟೆಗಳನ್ನು ಬಾಯಲ್ಲಿ ಕಚ್ಚಿ ಸಾಗಿಸುವುದು ಮತ್ತು ಕೋಗಿಲೆಯ ಕೂಗಿನಿಂದ ಮಳೆಯ ಮುನ್ಸೂಚನೆ ಪಡೆಯುತ್ತಾರೆ.

ತಿಗಳರ ಮಾರುಕಟ್ಟೆ

ತಿಗಳರು ಮೂಲತಃ ಸ್ವಾವಲಂಬಿಗಳು ಮತ್ತು ಸಣ್ಣ ಕೃಷಿಕರು. ಇವರು ಯಾವುದೇ ಬೆಳೆಗಳನ್ನು ಬೆಳೆದರೂ ಸಹ ಮಧ್ಯವರ್ತಿಯ ಕೈಗೆ ಕೊಡದೇ ಅವರೇ ಸಂತೆಯಲ್ಲಿ ನೇರವಾಗಿ ಮಾರುವುದು ಮತ್ತು ಹಳ್ಳಿಗಳಲ್ಲಿ ಮಂಕರಿಯನ್ನು ತಲೆಯ ಮೇಲೆ ಹೊತ್ತು ಮಾರಾಟ ಮಾಡುವುದು ಸಾಮಾನ್ಯ. ಅತೀ ಸಣ್ಣ ತಿಗಳರು ಅಂದರೆ ಮೂರು ನಾಲ್ಕು ಕುಂಟೆ ಜಮೀನಿರುವಂತಹವರು ರಾಗಿಯಂತಹ ಆಹಾರ ಪದಾರ್ಥಗಳನ್ನು ಬೆಳೆಯಲು ಆಗದೇ ಇರುವಂತಹವರು ವೀಳೆದೆಲೆಯನ್ನು ಬೆಳೆದು ಹಳ್ಳಿಯಲ್ಲಿ ಬೇರೆ ಜನಾಂಗದವರಿಗೆ ಏಳು ದಿನಕ್ಕೆ ಒಂದು ಕಟ್ಟಿನಂತೆ (100 ಎಲೆಗಳು) ಮಾರಿ ವರ್ಷಕ್ಕೆ ಒಂದು ಪಲ್ಲ ರಾಗಿಯನ್ನು ಪಡೆಯುತ್ತಾರೆ. ಅದರಂತೆ ಒಂದು ಹಳ್ಳಿಯಲ್ಲಿ ಏಳು ಕುಟುಂಬಗಳಲ್ಲಿ ವಸ್ತು ವಿನಿಮಯ ಅನುಸರಿಸಿದರೆ ಅವರಿಗೆ ವರ್ಷವಿಡೀ ಜೀವನಕ್ಕೆ ರಾಗಿ ದೊರೆಯುತ್ತದೆ. ಮತ್ತು ಇತರೆ ಹಣಕಾಸಿನ ಅವಶ್ಯಕತೆಗೆ ಮನೆಯ ಹಿತ್ತಲಲ್ಲಿ ಸೊಪ್ಪನ್ನು ಬೆಳೆದು ಹಳ್ಳಿಯಲ್ಲಿ, ಸಂತೆಯಲ್ಲಿ ಮಹಿಳೆಯರೇ ಮಾರಾಟಮಾಡಿ ಹಣ ಪಡೆಯುತ್ತಾರೆ. ಮನೆಯ ಗಂಡಸು ತೋಟಗಳಲ್ಲಿ ಹೆಚ್ಚು ಕೆಲಸವಿರದೇ ಇರುವುದರಿಂದ ಬೇರೆ ಜನಾಂಗದ ರೈತರಲ್ಲಿಗೆ ಕೂಲಿಗೆ ಹೋಗಿ ಹಣ ಸಂಪಾದಿಸುತ್ತಾರೆ. ***ತಿಗಳ ಜನಾಂಗದವರ ಅಭಿಪ್ರಾಯದಂತೆ ಮೂರು ಕುಂಟೆ ಜಮೀನು ಹೊಂದಿರುವವನ ಜೀವನ ಮಟ್ಟವು ಮತ್ತು ಮೂರು ನಾಲ್ಕು ಎಕರೆ ಜಮೀನು ಹೊಂದಿರುವವನ ಜೀವನ ಮಟ್ಟವೂ ಒಂದೇಯಾಗಿದೆ.*** ಮೂರು ಕುಂಟೆ ಜಮೀನನ್ನು ಹೊಂದಿರುವ ಒಬ್ಬ ರೈತನು ವಾರಕ್ಕೆ ಮುನ್ನೂರು ಕಟ್ಟು ವೀಳೆದೆಲೆಯನ್ನು ಮಾರುತ್ತಾನೆ. ಒಂದು ಕಟ್ಟಿನ ಬೆಲೆ ಕನಿಷ್ಠ ನಾಲ್ಕು ರೂಪಾಯಿಯಾದರೂ ವಾರಕ್ಕೆ ಸಾವಿರದ ಇನ್ನೂರು ರೂಪಾಯಿಯಾಗುತ್ತದೆ.ಮತ್ತು ಜಮೀನಿನಲ್ಲಿ ಕೆಲಸ ಮಾಡುವುದು ದಿನಕ್ಕೆ ಒಂದು ಅಥವಾ ಎರಡು ಗಂಟೆ ಮಾತ್ರ. ಉಳಿದಂತೆ ಬೇರೆಯವರಿಗೆ ಕೆಲಸಕ್ಕೆ ಹೋಗುತ್ತಾರೆ. ಆದರೆ ನಾಲ್ಕು ಎಕರೆ ಜಮೀನನ್ನು ಹೊಂದಿರುವವನು ಯಾವಾಗಲೂ ತನ್ನ ಜಮೀನಿನಲ್ಲೇ ಕೆಲಸ ಮಾಡಬೇಕು. ಹೊರಗೆ ಹೋಗುವಂತಿಲ್ಲ ಮತ್ತು ವೀಳೇದೆಲೆಯನ್ನು ನಾಲ್ಕು ಎಕರೆಯಲ್ಲಿಯೂ ಕಟ್ಟಲು ಸಾಧ್ಯವಿಲ್ಲ. ಅವನು ನಾಲ್ಕು ಎಕರೆ ವೀಳೆದೆಲೆ ಮಾಡಿದರೆ ಮಾರುಕಟ್ಟೆ ಮಾಡಲು ಕಷ್ಟ ಮತ್ತು ಸಂಪೂರ್ಣವಾಗಿ ಬೇರೆಯವರ ಮೇಲೆ ಅವಲಂಬಿಸ ಬೇಕಾಗುತ್ತದೆ. ಅವನಿಗೆ ಲಾಭಕ್ಕಿಂತ ವೆಚ್ಚವೇ ಹೆಚ್ಚಿರುತ್ತದೆ.

ತಿಗಳರ ಆಹಾರ ಮತ್ತು ಔಷಧಿ ಕ್ರಮಗಳು

ಒಂದು ಹೊತ್ತು ಗೆಣಸು, ಪಪ್ಪಾಯ ಈ ತರಹದ ಪದಾರ್ಥವನ್ನು, ಒಂದು ಹೊತ್ತು ಮುದ್ದೆ, ಸಾರು, ಅನ್ನ, ಒಂದು ಹೊತ್ತು ವಿವಿಧ ಸೊಪ್ಪು ಬೇಯಿಸಿ ತಿನ್ನುವಂತಹದ್ದು, ತಿಗಳರು ಹೆಚ್ಚು ಇಷ್ಟಪಡುವ ಆಹಾರ. ಮನೆಯ ಅತಿಥಿಗಳಿಗೆ ಔತಣ ಏರ್ಪಡಿಸಲು ಏಡಿಕಾಯನ್ನು ಬಳಸುತ್ತಾರೆ. ಏಡಿ ಇವರಿಗೆ ತುಂಬಾ ಪ್ರಿಯವಾದ ಆಹಾರ. ಬಾಣಂತಿಯರಿಗೆ ಹಚ್ಚು ದಷ್ಟಪುಷ್ಟವಾಗಿರಲು ಮತ್ತು ಯಾವುದೇ ರೋಗರುಜಿನ ಬಾರದೆ ಇರಲೆಂದು ವಾರಕ್ಕೆ ಎರಡು ಮೂರು ಬಾರಿ ಏಡಿಯನ್ನು ತಂದು ಆಹಾರ ತಯಾರಿಸಿ ಇಡುತ್ತಾರೆ.

ತಿಗಳರ ಔಷಧಿ ಪದ್ಧತಿ

ತಿಗಳರು ಸಾಮಾನ್ಯವಾಗಿ ತಮ್ಮ ಜಾನುವಾರುಗಳಿಗೆ ನಾಟಿ ಔಷಧಿ ಪದ್ಧತಿಯನ್ನು ಅನುಸರಿಸುತ್ತಾರೆ. ಉದಾಹರಣೆಗೆ ನರಡೀರೋಗ ಬರುವ ಪಶುಗಳಿಗೆ ಗುಲಗಂಜಿ, ಶುಂಠಿ, ಹಿಪ್ಪಲಿ ಇವುಗಳನ್ನು ಅರೆದು ಕುಡಿಸುತ್ತಾರೆ. ಮತ್ತು ಪಶುಗಳಿಗೆ ಗರ್ಭಸ್ರಾವವಾಗುತ್ತಿದ್ದರೆ ಕಿರು ಕಸಾಲೆ ಸೊಪ್ಪು, ಬಿಳಿ ಬಸಿರೇ ಬೇರು ಇವುಗಳನ್ನು ಅರೆದು ಮಜ್ಜಿಗೆಗೆ ಸೇರಿಸಿ ಎರಡು ಮೂರು ದಿನ ಕುಡಿಸುತ್ತಾರೆ. ಮತ್ತು ಗರ್ಬಿಣಿ ಹೆಂಗಸರಿಗೆ ಕೆಮ್ಮಿದ್ದರೆ ಬಾಡಂಗಿ ಸೊಪ್ಪಿನ ರಸವನ್ನು ಕುಡಿಸುತ್ತಾರೆ. ಈ ಔಷಧಿ ಪದ್ಧತಿ ಒಬ್ಬ ವ್ಯಕ್ತಿಯ ಆಚರಣೆಯಲ್ಲ ಇದು ಇಡೀ ಜನ ಸಮೂಹದ್ದು.

ಈ ಲೇಖನಕ್ಕೆ ಅಗತ್ಯವಾದ ಮಾಹಿತಿಯನ್ನು ತಿಪ್ಪೂರು, ಪುಟ್ಟಯ್ಯನ ಅಗ್ರಹಾರ, ಚಿಕ್ಕ ಹೆಜ್ಜಾಜಿ, ಮಾಗಡಿಯ ಒಬ್ಬಾಳಮ್ಮ ನಪೇಟೆ, ದೇವರಾಯನ ದುರ್ಗದ ಸುತ್ತಮುತ್ತಲ ಹಳ್ಳಿಗಳ ತಿಗುಳ ಜನಾಂಗದವರಿಂದ ಸಂಗ್ರಹಿಸಲಾಗಿದೆ.

ವಿಶೇಷ ಸೂಚನೆ

- ✳ ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ವಾಣಿಜ್ಯ ದೃಷ್ಟಿಯಿಂದ ಬಳಸಬಯಸುವವರು ಮೊದಲು ಅದನ್ನು ಹಿತ್ತಲಗಿಡದ ಗಮನಕ್ಕೆ ತರಬೇಕಾಗಿ ಈ ಮೂಲಕ ಸೂಚಿಸಲಾಗಿದೆ.
- ✳ ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವವನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ✳ ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

ಬೆಮೆಲ್ ಪ್ರಕಾಶರ ಉರುವಲು ಉಳಿಸು ಡಬಲ್ ಶಾಖದ ಒಲೆ

ಬೆಂಗಳೂರಿನ ಬೆಮೆಲ್ ಕಾರ್ಖಾನೆಯಲ್ಲಿ ಅಡ್ಮಿನಿಸ್ಟ್ರೇಟಿವ್ ಅಸಿಸ್ಟೆಂಟ್ ಆಗಿರುವ ತರುಣ ಪ್ರಕಾಶ್‌ರಿಗೆ ತಮ್ಮ ನಿತ್ಯದ ನೀರು ಕಾಯಿಸುವ ಕಟ್ಟಿಗೆ ಒಲೆಯಿಂದ ಶಾಖ ಅನಗತ್ಯವಾಗಿ ಎಲ್ಲೆಡೆ ಹರಿದು ಉರುವಲ ವ್ಯರ್ಥವಾಗುತ್ತಿರುವ ಚಿಂತೆ ಕಾಡತೊಡಗಿತು. ಸೋಲಾರ್ ಹೀಟರಿನ ತತ್ವದ ಮಾದರಿಯಲ್ಲೇ ಈ ರೀತಿ ವ್ಯರ್ಥವಾಗುತ್ತಿರುವ ಶಾಖವನ್ನು ನೀರು ಕಾಯಿಸಲು ಏಕೆ ಬಳಸಲಾರದೆಂಬ ಯೋಚನೆ ಬಂತು. ಇದರ ತತ್ವ ಸರಳ. ಪಾತ್ರೆಯೊಳಗೊಂದು ಪಾತ್ರೆ ಹಾಕಿ, ಮಧ್ಯದಲ್ಲಿ ನೀರು ಹಾಯಿಸಲು ಬಿಟ್ಟು, ಒಳಗಿನ ಪಾತ್ರೆಯೊಳಗೆ ಇಂಧನ/ಉರುವಲು ಹಾಕಿ ಕಾಯಿಸಿದಲ್ಲಿ, ಪಸರಿಸುವ ಶಾಖದಿಂದ ಸುತ್ತಲಿನ ನೀರು ಕಾಯುತ್ತದೆ, ಮೇಲಿನ ಬೆಂಕಿಯಿಂದ ಒಲೆಯ ಮೇಲಿಟ್ಟ ಪಾತ್ರೆ ಬಿಸಿಯಾಗುತ್ತದೆಯಲ್ಲವೇ? ಈ ರೀತಿ ಒಲೆಯ ಸುತ್ತಲು ಕಾದ ನೀರನ್ನು ಸೋಲಾರು ಹೀಟರಿನ ಸೈಫನ್ ತತ್ವದ ರೀತಿಯಲ್ಲಿ ಮತ್ತೊಂದು ಪಾತ್ರೆಗೆ ಹರಿಸಿದಲ್ಲಿ ಅದು ಸ್ನಾನಕ್ಕೆ, ಆಹಾರ, ಅಕ್ಕಿ ಬೇಯಿಸಲು ಎಲ್ಲದಕ್ಕೂ ಉಪಯೋಗ. ಈ ರೀತಿ ಡಬಲ್ ಶಾಖ ನೀಡುವ ಒಲೆಯ ವಿವರ ಈ ಕೆಳಗೆ ಕೊಡಲಾಗಿದೆ.

ಈ ರೀತಿಯ ಒಲೆಯನ್ನು ಪ್ರಕಾಶ್ ಮೊದಲು ಸ್ಟೀಲ್‌ನಿಂದ ತಯಾರಿಸಿದ್ದು ಸರಿಬರದೇ ನಂತರ ಅಲ್ಯುಮಿನಿಯಂಗೆ ಇಳಿದರು. ಈ ರೀತಿಯ ಒಲೆಯನ್ನು ಪ್ರಕಾಶರು ಕಳೆದ ನಾಲ್ಕಾರು ತಿಂಗಳುಗಳಿಂದ ಬಳಸುತ್ತಿದ್ದು, ತಮ್ಮ ಕುಟುಂಬದ ಎಂಟು ಜನರಿಗೆ ಅಡಿಗೆ, ಸ್ನಾನಕ್ಕೆ ಬೇಕಾದ ಸಂಪೂರ್ಣಶಕ್ತಿಯ ಪೂರೈಕೆ ಇದರಿಂದಲೇ ಬರುತ್ತದೆಯಂತೆ. ಇವರ ಪ್ರಕಾರ ಈ ಹಿಂದೆ ಒಂದು ತಿಂಗಳಿಗೆ ಬೇಕಾಗುತ್ತಿದ್ದ ಉರುವಲು ಈಗ ಎರಡು ತಿಂಗಳಿಗೆ ಸಾಕಂತೆ.

ಈ ಪ್ರಕಾಶರ ಒಲೆಯ ಸಣ್ಣ ಪಾತ್ರೆ ೫ ಲೀಟರ್ ನೀರು ಹಾಕುವಷ್ಟು ಗಾತ್ರವಿದ್ದರೆ ದೊಡ್ಡದು ಸುಮಾರು ೨೦ ಲೀಟರ್. ಈ ಎರಡು ಪಾತ್ರೆಗಳ ಒಟ್ಟು ಬೆಲೆ ಸುಮಾರು ರೂ. ೩೦೦. ಇದಕ್ಕೊಂದು ಸ್ಟ್ಯಾಂಡ್ ತಯಾರಿಸಿದ್ದು ಅದರ ವೆಚ್ಚ ರೂ. ೫೦. ಇನ್ನು ರಂಧ್ರ ಕೊರೆಯಲು, ವೆಲ್ಡ್ ಮಾಡುವ ವೆಚ್ಚ ರೂ. ೨೦೦. ನೀರು ಹರಿಯುವ ಅಲ್ಯೂಮಿನಿಯ ಟ್ಯಾಪುಗಳ ದರ ರೂ. ೫೦. ಒಟ್ಟಾರೆ ಈ ಒಲೆಯ ವೆಚ್ಚ ೬೦೦ ಆಗಿದ್ದು, ದೊಡ್ಡ ಪ್ರಮಾಣದಲ್ಲಿ ತಯಾರಿಸಿದರೆ ಹಣ ಬಹಳಷ್ಟು ಉಳಿಸಬಹುದು. ಇದರ ವಿನ್ಯಾಸವನ್ನು ಮತ್ತಷ್ಟು ಸುಧಾರಿಸಿದಲ್ಲಿ ಇದು ಕಟ್ಟಿಗೆ ಬಳಸುವ ಮಧ್ಯಮ ವರ್ಗದ ಜನರಿಗೆ ಒಂದು ವರವಾಗುವುದು ಮಾತ್ರವಲ್ಲ ಉರುವಲು ಉಳಿಸಲು ಅಪಾರ ಸಹಾಯವಾಗುತ್ತದೆ. ಇಂತಹ ಪ್ರಯತ್ನಕ್ಕೆ ಶ್ರೀ ಪ್ರಕಾಶರಿಗೆ ಪುರಸ್ಕಾರವಾಗಿ ಸರ್ಕಾರದಿಂದ ಇವರ ಈ ಒಲೆಗೆ ರಿಯಾಯ್ತಿ ದೊರೆಯುವಂತಾಗಲೆಂದು ಹಿತ್ತಲಗಿಡ ಹಾರೈಸುತ್ತದೆ.

ಒಲೆಯನ್ನು ತಯಾರಿಸುವ ವಿಧಾನ

1. ಚಿತ್ರ 'A' (Fig. 1) ಮತ್ತು 'B' (Fig. 2) ತೋರಿಸಿರುವಂತೆ 7.5 ಇಂಚು ವ್ಯಾಸದ 7" ಎತ್ತರದ ಮತ್ತು 6.5" ವ್ಯಾಸ 6" ಎತ್ತರ ಇರುವ ಎರಡು ಅಲ್ಯೂಮಿನಿಯಂ ಕೊಳಗಗಳನ್ನು ತೆಗೆದುಕೊಳ್ಳಬೇಕು. ಕೊಳಗದ ದಪ್ಪ (Wall thickness) 2.5mm ಇರಬೇಕು.
2. ಚಿತ್ರ 3 ರಲ್ಲಿ ತೋರಿಸಿರುವಂತೆ ಕೊಳಗದ ಕೆಳಗಡೆಯಿಂದ 1 ಇಂಚು ಬಿಟ್ಟು 3" ವ್ಯಾಸದ ಒಂದು ರಂಧ್ರವನ್ನು ಮಾಡಬೇಕು. ಅದೇ ರೀತಿ 'B' ಕೊಳಗವನ್ನು 'A' ಕೊಳಗದ ಒಳಗೆ ಸೇರಿಸಿ 'A' ಕೊಳಗದ ರಂಧ್ರದ ಮೂಲಕ 'B' ಕೊಳಗಕ್ಕೆ ಸರಿಹೊಂದುವಂತೆ ಗುರುತು ಮಾಡಿಕೊಂಡು 'B' ಕೊಳಗಕ್ಕೆ ಕೂಡಾ 3 ಇಂಚು ವ್ಯಾಸದ ರಂಧ್ರ ಮಾಡಬೇಕು. (ಚಿತ್ರ 4).
3. ಚಿತ್ರ 5 ರಲ್ಲಿ ತೋರಿಸಿರುವಂತೆ 'A' ಕೊಳಗದ ಪಾರ್ಶ್ವದಲ್ಲಿ ಮೇಲೆ ಮತ್ತು ಕೆಳಗೆ 3/4" ವ್ಯಾಸದ ಎರಡು ರಂಧ್ರ ಮಾಡಬೇಕು.
4. ಚಿತ್ರ 6ರಲ್ಲಿ ತೋರಿಸಿರುವಂತೆ (ಕೊಳಗ 'B') 3" ವ್ಯಾಸದ ಉದ್ದದ 1' ಅಲ್ಯುಮಿನಿಯಂ ಕೊಳವೆಯನ್ನು ಸೇರಿಸಿ ಕೊಳಗದ ಹೊರಭಾಗದಲ್ಲಿ ಸುತ್ತಲೂ ಅಲ್ಯುಮಿನಿಯಂ ವೆಲ್ಡಿಂಗ್ ಮಾಡಬೇಕು.

A



FIG. 1

B



FIG. 2




FIG. 3



FIG. 4




FIG. 5




FIG. 6




FIG 7




FIG 8

FIG. 9

5. ಚಿತ್ರ 7ರಲ್ಲಿ ತೋರಿಸಿರುವಂತೆ ಕೊಳಗ 'B' ಯನ್ನು 'A' ಕೊಳಗದ ಒಳಗೆ ಸೇರಿಸಿ 'B' ಕೊಳಗದ ಕೊಳವೆ 'A' ಕೊಳಗದ ರಂಧ್ರಕ್ಕೆ ಸರಿಹೊಂದಿಸಿ 'B' ಕೊಳಗವನ್ನು ಸರಿಯಾಗಿ ಕೂಡಿಸಿಕೊಳ್ಳಬೇಕು. ನಂತರ 'A' ಕೊಳಗದ ಹೊರಗಡೆಯಿಂದ ಅಲ್ಯುಮಿನಿಯಂ ವೆಲ್‌ಡಿಂಗ್ ಮಾಡಬೇಕು. 'A' ಮತ್ತು 'B' ಕೊಳಗಗಳು ಕೂಡುವ ಅಂಚಿನಲ್ಲಿ ಅಲ್ಯುಮಿನಿಯಂ ವೆಲ್‌ಡಿಂಗ್ ಮಾಡಬೇಕು.
6. ಚಿತ್ರ 8 ರಲ್ಲಿ ತೋರಿಸಿರುವಂತೆ, 'A' ಕೊಳಗದ 3/4" ರಂಧ್ರಕ್ಕೆ ಮತ್ತು 10 ಲೀಟರ್ ನೀರು ಹಿಡಿಸುವ ಮತ್ತೊಂದು ಕೊಳಗಕ್ಕೆ (ಚಿತ್ರ 9) 3/4" ವ್ಯಾಸದ 9" ಉದ್ದದ ಎರಡು ಕೊಳವೆಯನ್ನು ತೆಗೆದುಕೊಂಡು ಎರಡು ಕೊಳಗಗಳು ಸೇರುವಂತೆ ಅಲ್ಯುಮಿನಿಯಂ ವೆಲ್‌ಡಿಂಗ್ ಮಾಡಬೇಕು. ಚಿತ್ರ (8 ಮತ್ತು 9).
7. ಚಿತ್ರ 8 ರಲ್ಲಿ ತೋರಿಸಿರುವಂತೆ ಒಲೆಗೆ ಇಟ್ಟಿಗೆ ಅಥವಾ ಕಬ್ಬಿಣದ ಸರಳಿನಿಂದ ಸ್ಟ್ಯಾಂಡ್ ಮಾಡಿ ಅದರ ಮೇಲೆ ಅಡುಗೆ ಪಾತ್ರೆಯನ್ನು ಇಡಬೇಕು.
8. ಚಿತ್ರ 8 ರಲ್ಲಿ ತೋರಿಸಿರುವ ಒಲೆಗೆ ಸೌದೆಯ ಸಣ್ಣ ತುಂಡುಗಳನ್ನು ಹಾಕಿ ಬೆಂಕಿ ಹೊತ್ತಿಸಬೇಕು. ಅಡುಗೆ ತಯಾರಾಗುತ್ತಿದ್ದ ಹಾಗೆ ಪಕ್ಕದ ಕೊಳಗದಲ್ಲಿ (ಚಿತ್ರ 9) ನೀರು ಬಿಸಿಯಾಗುತ್ತದೆ. ಈ ಬಿಸಿನೀರನ್ನು ಇತರೆ ಅಡುಗೆ ಮಾಡಲು ಮತ್ತು ಸ್ನಾನಕ್ಕೆ ಬಳಸಬಹುದು. ಬಿಸಿ ನೀರು ತೆಗೆಯುತ್ತಿದ್ದ ಹಾಗೆ ಕೊಳಗಕ್ಕೆ ತಣ್ಣೀರನ್ನು ತುಂಬಿಸಬೇಕು.

ಅಂಬಾರಿ ನೇಗಿಲು

ನಮ್ಮ ರೈತರಲ್ಲಿ ಹಲವಾರು ನೇಗಿಲುಗಳಿವೆ. ಕೆಲವೊಂದು ನೇಗಿಲು ರೈತ ಸಮುದಾಯದ ಬಡಗಿಗಳಿಂದ ಮಾಡಲ್ಪಟ್ಟವು. ಕೆಲವೊಂದು ವಿಶ್ವವಿದ್ಯಾನಿಲಯದ ತಂತ್ರಜ್ಞಾನದಿಂದ ಮಾಡಲ್ಪಟ್ಟಿರುವಂತಹವು. ಇದರಲ್ಲಿ ದೇಶೀಯವಾದ ರೈತ ಸಮುದಾಯದವರೇ ಮಾಡಿಕೊಳ್ಳಬಹುದಾದಂತಹ, ತುಂಬಾ ಕಡಿಮೆ ಖರ್ಚಿನ ನೇಗಿಲುಗಳಲ್ಲಿ ಅಂಬಾರಿ ನೇಗಿಲೂ ಒಂದು. ಈ ನೇಗಿಲು ಕೆಸರುಗದ್ದೆ ಉಳುಮೆ ಮಾಡಲು ತುಂಬಾ ಸೂಕ್ತವಾದ ನೇಗಿಲು. ಈ ನೇಗಿಲನ್ನು ಮಲೆನಾಡು ಪ್ರದೇಶಗಳಲ್ಲಿ ಹಾಗೂ ಬೆಂಗಳೂರು ಗ್ರಾಮಾಂತರ, ಮಾಗಡಿ, ಕುಣಿಗಲ್, ಹಾಸನ, ರಾಮನಗರ, ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಬಳಕೆ ಮಾಡುತ್ತಿದ್ದಾರೆ. ಕೆಸರುಗದ್ದೆ ಮಣ್ಣು ಜಿಗಟಾಗಿರುವುದರಿಂದ ಹಾಗೂ ಹಬ್ಬುವ ಗರಿಕೆ ಅಥವಾ ಯಾವುದೇ ರೀತಿಯ ಕಳೆ ಇದ್ದರೆ ಸಾಮಾನ್ಯ ನೇಗಿಲುಗಳಿಂದ ಉಳುಮೆ ಮಾಡುವುದು ಸುಲಭ ಸಾಧ್ಯವಾದುದಲ್ಲ. ಇದಕ್ಕೆ ಉದಾಹರಣೆ ಎಂದರೆ ಅನೇಕ ಕಡೆ ಇಂತಹ ಭೂಮಿಯನ್ನೇ ಉಳುಮೆ ಮಾಡಲು ಎರಡು ಮೇಣಿಯ ಕಬ್ಬಿಣದ ನೇಗಿಲಾದ ಸೀಮೆನೇಗಿಲನ್ನೇ ಉಪಯೋಗಿಸುತ್ತಾರೆ. ಆದರೆ ಕಬ್ಬಿಣದ ನೇಗಿಲು ಯಾವಾಗಲೂ ತೆವಡೆಗಟ್ಟುತ್ತದೆ. ಹಾಗೂ ಜಿಗುಟು ಭೂಮಿಯಾದರೆ ನೇಗಿಲನ್ನು ಮುಂದಕ್ಕೆ ಬಿಟ್ಟುಕೊಡುವುದಿಲ್ಲ. ಇದರಲ್ಲಿ ಉಳುಮೆ ಮಾಡಲು ತುಂಬಾ ಶ್ರಮ. ಇದಕ್ಕೆ ಬದಲಾಗಿ ಈ ಅಂಬಾರಿ ನೇಗಿಲನ್ನೇ ಬಳಸಬಹುದಾಗಿದೆ. ಯಾರಾದರೂ ರೈತರು ಕೆಸರುಗದ್ದೆಗೆ ಹಸಿರೆಲೆ ಗೊಬ್ಬರ ಕೊಡಬೇಕೆಂದರೆ ಈ ನೇಗಿಲು ತುಂಬಾ ಉಪಯುಕ್ತವಾಗಿದೆ. ಕೆಸರುಗದ್ದೆಗೆ ಹಸಿರೆಲೆ ಗೊಬ್ಬರಕ್ಕೆಂದು ಪುಂಗಡಿ ಬೀಜ ಅಥವಾ ಹುರಳಿ, ಜೊತೆಗೆ ಯಾವುದಾದರೂ ಹಸಿರೆಲೆ ಗೊಬ್ಬರದ ಸೊಪ್ಪನ್ನು ಬೇರೆ ಕಡೆಯಿಂದ ತಂದು ಹಾಕುತ್ತಾರೆ. ಕೆಸರುಗದ್ದೆಗೆ ತುಳಿಯುವುದಕ್ಕಿಂತ ಒಂದೆರಡು ತಿಂಗಳು ಮುಂಚಿತವಾಗಿ ಪುಂಗಡಿ, ಹುರುಳಿ ಬೀಜವನ್ನು ತಂದು ಬಿತ್ತಿ ಅದು ಬೆಳೆದ ನಂತರ ಈ ನೇಗಿಲಿಂದ ಉಳುಮೆ ಮಾಡಿದರೆ, ನೇಗಿಲು ಮಣ್ಣನ್ನು ತಿರುವುದರಿಂದ ಹಸಿರೆಲೆಯು ಮಣ್ಣಿನ ಸಮೇತ ತಿರುವಿಬೀಳುತ್ತದೆ. ಈ ರೀತಿ ಉಳುಮೆ ಮಾಡಲು ಬೇರೆ ನೇಗಿಲಿನಿಂದ ಕಷ್ಟ. ಈ ನೇಗಿಲು ಒಂಟಿ ಮೇಣಿಯ ನೇಗಿಲು. ಇದನ್ನು ಹೆಚ್ಚು ಗಟ್ಟಿ ಇರುವ ನೇಗಿಲಿನಿಂದ ಮಾಡಬಹುದಾಗಿದೆ. ಇದು ಹೆಚ್ಚು ತೂಕವಿರುವುದಿಲ್ಲ. ತ್ರಿಭುಜಾಕೃತಿಯ ಕಬ್ಬಿಣದ ಗುಳ ಇರುವಂತಹ ಈ ನೇಗಿಲು ಕುಣಿಗಲ್‌ನ ಸುತ್ತಮುತ್ತಲಿನ ಹಳ್ಳಿಗಳಲ್ಲಿನ ಬಡಗಿಯವರೇ ಮಾಡುತ್ತಿದ್ದಾರೆ. ಇದು ಇನ್ನೂರರಿಂದ ಇನ್ನೂರೈವತ್ತು ರೂ. ಬೆಲೆಗೆ ಸಿಗುತ್ತದೆ. ಇದಕ್ಕೆ ಉಪಯೋಗಿಸುವ ಗುಳದ ಬೆಲೆ ಐವತ್ತು ರೂ. ಇದು ಮೂವತ್ತು, ನಲವತ್ತು ರೂ. ಗಳಿಗೂ ಸಿಗುತ್ತದೆ.

ಕೂಚುಭಟ್ಟ

ಕರ್ನಾಟಕದಲ್ಲಿ ಔಷಧ ಸಸ್ಯಗಳು

ಲೇಖಕರು : ಮಾಗಡಿಗುರುದೇವರ

ಔಷಧ ಸಸ್ಯಗಳನ್ನು ಆಧರಿಸಿದ ಚಿಕಿತ್ಸೆಗಳ ಬಗ್ಗೆ ಹಲವಾರು ಪುಸ್ತಕಗಳನ್ನು ಪರಿಚಯಿಸಲಾಗಿದೆ. ಆದರೆ ಈ ಚಿಕಿತ್ಸೆಗೆ ಬಳಸುವಂತಹ ಔಷಧ ಸಸ್ಯಗಳನ್ನು ಪರಿಚಯಿಸುವಂತಹ ಪುಸ್ತಕಗಳು ಕಡಿಮೆ. ಇಂತಹ ಸಂದರ್ಭದಲ್ಲಿ ಮಾಗಡಿ ಗುರುದೇವರ ಪುಸ್ತಕದಲ್ಲಿ ರೀತಿಯ ಔಷಧಿಯ ಸಸ್ಯಗಳನ್ನು ಪರಿಯಿಸುವುದಲ್ಲಿದೆ. ಸಸ್ಯದ ಕುಟುಂಬದ ಹೆಸರನ್ನು ಪರಿಚಯಿಸಿದ್ದಾರೆ. ಎಲ್ಲಕ್ಕಿಂತಲೂ ಸಸ್ಯಗಳ ಹೆಸರನ್ನು ಕನ್ನಡದಲ್ಲಿ ಪರಿಚಯಿಸಿರುವುದು ಒಂದು ವಿಶೇಷವಾಗಿದೆ. ಹಾಗೂ ಈ ಸಸ್ಯಗಳ ಚಿತ್ರ, ಇವುಗಳು ಬೆಳೆಯುವ ಸ್ಥಳ ಮತ್ತು ಅವುಗಳ ಬಗೆಗಿನ ಕಿರುಪರಿಚಯವಿದೆ. ಚಿಕಿತ್ಸೆಯನ್ನು ಪಡೆಯಲು ಬಳಸುವ ವಸ್ತುಗಳು ಮತ್ತು ಅವುಗಳ ಅಳತೆಯನ್ನು ಹೇಳಲಾಗಿದೆ. ಈ ಪುಸ್ತಕದ ಬೆಲೆ 130 ರೂಪಾಯಿಗಳು. ಈ ಪುಸ್ತಕವನ್ನು ದಿವ್ಯ ಚಂದ್ರ ಪ್ರಕಾಶನದವರು ಪ್ರಕಟಿಸಿದ್ದಾರೆ.

ಭಾರತೀಯ ಜ್ಞಾನ ವ್ಯವಸ್ಥೆಯ ಕೇಂದ್ರ, ಚೆನ್ನೈ

ಪ್ರಕಟಣೆಗಳು (ಆಂಗ್ಲ ಭಾಷೆಯಲ್ಲಿ)

- ಸಾವಯವ ತರಕಾರಿ ಕೈ ತೋಟ
  (Organic Vegetable Gardening)

ಸಾವಯವ ರೀತಿಯಲ್ಲಿ ತರಕಾರಿ ಬೆಳೆಯುವ ಜೊತೆಗೆ, ಕಾಂಪೋಸ್ಟ್, ಜೈವಿಕ ಕೀಟನಾಶಕಗಳು, ಕೈತೋಟಗಳ ವಿನ್ಯಾಸ ಇತ್ಯಾದಿ ವಿವರಗಳಿವೆ.

ಲೇಖಕರು : ಕೆ. ವಿಜಯಲಕ್ಷ್ಮಿ ಮತ್ತು ಸುಭಾಷಿನಿ ಶ್ರೀಧರ್
ಬೆಲೆ : 25

(ಮುಂದುವರೆದಿದೆ ಪುಟ : 10)

ಕಣ್ಮರೆಯಾಗುತ್ತಿರುವ ದೇಶೀಯ ಸಂಸ್ಥೆಗಳು - *ಗುಂಡು ತೋಪುಗಳು*

ಚಿತ್ರಶೇಖರ

ಗುಂಡುತೋಪು ಗುಂಪಾದ ಮರಗಳ ಕೇಂದ್ರ, ಒಂದು ನಿರ್ದಿಷ್ಟ ಜಾಗದಲ್ಲಿ ವಿವಿಧ ರೀತಿಯ ಮರಗಿಡಗಳನ್ನು ನೆಟ್ಟು ಪೋಷಿಸಿ ಸಾರ್ವಜನಿಕ ಉಪಯೋಗಕ್ಕೆಂದು ಮೀಸಲಾದ ಸಂಸ್ಥೆಯೆಂದರೆ ತಪ್ಪಾಗಲಾರದು. ನಗರ ಪ್ರದೇಶಗಳಲ್ಲಿ ಉದ್ಯಾನವನಗಳು ಹೇಗೋ ಹಳ್ಳಿಗಳಿಗೆ ಗುಂಡುತೋಪುಗಳು ಉದ್ಯಾನವನಗಳಾಗಿದ್ದವು. ಗುಂಡುತೋಪುಗಳು ಹಲವಾರು ಜೀವ ವೈವಿಧ್ಯಗಳ ಕೇಂದ್ರವಾಗಿತ್ತು. ಗ್ರಾಮೀಣ ಮಕ್ಕಳ ಹಾಗೂ ಯುವಕರ ಜನಪದ ಕ್ರೀಡೆಗಳ ಹಾಗೂ ಜನರ ಉಲ್ಲಾಸದ ತಾಣವಾಗಿತ್ತು. ದನಕರುಗಳು, ಮೇಕೆ ಕುರಿಗಳು ಇಲ್ಲಿ ಬೆಳೆದಂತ ಹುಲ್ಲು ಸೊಪ್ಪನ್ನು ತಿಂದು ಸೊಂಪಾಗಿ ಇರುತ್ತಿದ್ದವು. ಊರಿಗೆ ಒಂದು ವನ, ಒಂದು ಗುಂಡುತೋಪು, ದೇವರ ಕಾಡು ಇಂತಹ ಹಳ್ಳಿಯ ಸಾರ್ವಜನಿಕ ಭೂಮಿ ಕಾಡು ಎಲ್ಲವನ್ನೂ ಸರ್ಕಾರಿ ಸ್ವಾಮ್ಯಕ್ಕೆ ಒಳಪಡಿಸಿದ ಸರ್ಕಾರ ಇಂದು ಅರಣ್ಯವನ್ನು ರಕ್ಷಿಸಲು ಜಂಟಿ ಅರಣ್ಯಯೋಜನೆ ಎಂಬ ನಾಟಕವಾಡುತ್ತಿದೆ.

ಮೈಸೂರು, ಬೆಂಗಳೂರು, ಮಂಡ್ಯ, ತುಮಕೂರು, ಕೋಲಾರ ಈ ಎಲ್ಲಾ ಜಿಲ್ಲೆಗಳಲ್ಲೂ ಪ್ರತಿಯೊಂದು ಹಳ್ಳಿಗೂ ಒಂದೊಂದು ಗುಂಡುತೋಪು ಕೆಲವು ಹಳ್ಳಿಯಲ್ಲಿ ಎರಡು, ಮೂರು ಇದ್ದದ್ದೂ ಉಂಟು. ಈ ಗುಂಡುತೋಪುಗಳು ಕೆಲವು ಹಳ್ಳಿಗಳಲ್ಲಿ ಮಕ್ಕಳರಾಯನ ತೋಪು, ಸಂತೆತೋಪು, ಪಾಳೆಗಾರನ ತೋಪು, ಶಾನಭೋಗರ ತೋಪು, ಇಂತಹ ಹಲವಾರು ಹೆಸರುಗಳಿಂದ ಕರೆಯಲ್ಪಡುತ್ತಿದ್ದವು. ಈ ಗುಂಡುತೋಪುಗಳನ್ನು ಯಾರು ನೆಟ್ಟಿದರೆಂಬುದಕ್ಕೆ ಪುರಾವೆಗಳಿಲ್ಲ. ಈ ಗುಂಡುತೋಪುಗಳು ಅನಾದಿಕಾಲದಿಂದಲೂ ಇರುವುದಂತೂ ಸತ್ಯವಾಗಿದೆ.

ಆದರೆ ಹಳ್ಳಿಯ ಜನರ ತುಂಬಾ ವಯಸ್ಸಾದಂತಹ ವೃದ್ಧರನ್ನು ಗುಂಡುತೋಪುಗಳ ಬಗ್ಗೆ ಕೇಳಿದರೆ ಹಲವಾರು ದಂತಕಥೆಗಳನ್ನು ಹೇಳುತ್ತಾರೆ. ಊರ ಪಟೇಲರಿಗೆ ಅಥವಾ ಶಾನುಭೋಗರಿಗೆ ಮಕ್ಕಳಿಲ್ಲದಿದ್ದುದಕ್ಕೆ ಮರಗಳನ್ನು ನೆಟ್ಟು ಪೋಷಿಸಿ ಮರಗಳೇ ಮಕ್ಕಳೆಂಬ ಭಾವನೆಯಿಂದ ಗುಂಡುತೋಪನ್ನು ನಿರ್ಮಿಸಿದ್ದರು. ಪಾಳೇಗಾರರು, ಯುದ್ಧದಲ್ಲಿ ಸತ್ತ ಪಾಳೆಗಾರರ ಹೆಸರಿನಲ್ಲಿ ನೆಟ್ಟ ತೋಪುಗಳೂ ಇವೆ. ಕೆಲವೊಮ್ಮೆ ವಸಂತಮಾಸದ ಬಿಸಿಲಿನ ಬೇಗೆಯ ಸಮಯದಲ್ಲಿ ಹಸಿರು ಹಾಸಿನ ಹುಲ್ಲುಗಾವಲಿನ ಗುಂಡುತೋಪುಗಳಲ್ಲಿ ದುಡಿದ ಜನರು ವಿಶ್ರಮಿಸಿಕೊಳ್ಳಲು ಹಳ್ಳಿಯ ಜನರೇ ನೆಟ್ಟಂತಹ ತೋಪುಗಳೂ ಇವೆ. ಈ ತೋಪುಗಳ ವಿಸ್ತೀರ್ಣ ಸಾಮಾನ್ಯವಾಗಿ ಹಳ್ಳಿಯ ಜನಗಳ ಸಂಖ್ಯೆಗೆ ತಕ್ಕಂತೆ ಸಾಮಾನ್ಯವಾಗಿ ಮೂರರಿಂದ ಹದಿನೈದು ಇಪ್ಪತ್ತು ಎಕರೆಯುವರೆವಿಗೆ ಇರುತ್ತಿದ್ದವು. ಈ ಗುಂಡುತೋಪುಗಳಲ್ಲಿ ಸಾಮಾನ್ಯವಾಗಿ ಜನರಿಗೆ ಬೇಕಾದಂತಹ ಮರಗಿಡಗಳನ್ನು ನೆಟ್ಟಿರುತ್ತಿದ್ದರು. ಅವುಗಳೆಂದರೆ ಮಾವಿನಮರ, ಹಲಸಿನಮರ, ಆಲದಮರ, ಜುಮ್ಮುನೇರಳೆಯ ಮರ, ಹೊಂಗೆ, ಹಿಪ್ಪೆ, ಹುಣಸೇ, ನಲ್ಲಿ, ಬೆಲ್ಲದ ಹಣ್ಣಿನ ಮರ, ಅರಳೀಮರ, ಹತ್ತಿಮರ, ಕಕ್ಕೇಮರ ಹಾಗೇ ಹತ್ತು ಹಲವು ಜಾತಿಯ ಔಷಧಿಯ ಗಿಡಗಳು, ಬಳ್ಳಿಗಳು ಗುಂಡುತೋಪುಗಳಲ್ಲಿ ಇರುತ್ತಿದ್ದವು. ಈ ಗುಂಡುತೋಪುಗಳು ಸಾಮಾನ್ಯವಾಗಿ ಗ್ರಾಮಗಳ ಪಕ್ಕದಲ್ಲಿ ಕೆರೆಯ ಹಿಂದೆ ಊರಿನ ಮುಂಭಾಗದಲ್ಲಿ, ತಂಪಾದ ಜಾಗದಲ್ಲಿ ಇರುತ್ತಿದ್ದವು. ಕೆಲವೊಂದು ಹಳ್ಳಿಗಳಲ್ಲಿ ಸಂತೇತೋಪು ಎಂದು ಇರುತ್ತಿದ್ದವು. ಈ ಸಂತೆತೋಪುಗಳು ಸಾಮಾನ್ಯವಾಗಿ ಹತ್ತು ಹದಿನೈದು ಹಳ್ಳಿಗಳಿಗೆ ಒಂದರಂತೆ ಇರುತ್ತಿದ್ದವು. ಈ ಸಂತೆತೋಪುಗಳಲ್ಲಿ ವಾರಕ್ಕೆ ಅಥವಾ ತಿಂಗಳಿಗೆ ಒಂದು ಬಾರಿ ಸಂತೆ ಸೇರುತ್ತಿತ್ತು. ಹಳ್ಳಿಯ ಜನರ ವ್ಯವಹಾರಗಳು ಈ ಸಂತೆಯಿಂದಲೇ ನಡೆಯುತ್ತಿದ್ದವು. ಕೆಲವೊಂದು ಕಡೆ ಮಕ್ಕಳರಾಯನ ತೋಪು ಎಂದು ಹೆಸರಿವೆ ಈ ಮಕ್ಕಳರಾಜನ ತೋಪಿಗೆ ದಂತಕಥೆಗಳೂ ಇವೆ. ಉದಾಹರಣೆಗೆ ದೊಡ್ಡಬಳ್ಳಾಪುರ ತಾಲ್ಲೂಕಿನ ವೆಂಕಟೇಶಪುರ ಎಂಬ ಪಾಳು ಗ್ರಾಮಕ್ಕೆ ಸೇರಿದ ಮಕ್ಕಳರಾಯನ ತೋಪಿನಲ್ಲಿ ಒಂದು ದೇವರ ಗುಡಿ ಇದೆ ಆದರೆ ಇದು ಯಾವ ದೇವರ ಗುಡಿ ಎಂದು ಗೊತ್ತಿಲ್ಲ. *ಮಕ್ಕಳಿಲ್ಲದಂತಹ ದಂಪತಿಗಳು ಈ ದೇವರಿಗೆ ಮೊರೆ ಹೋಗಿ ಈ ಗುಂಡುತೋಪಿನಲ್ಲಿ ಮರವನ್ನು ನೆಟ್ಟು ಪೂಜಿಸಿದರೆ ಮಕ್ಕಳಾಗುತ್ತಿದ್ದವು ಎಂಬ ನಂಬಿಕೆ ಅಂದಿನ ಜನರಲ್ಲಿ ಇತ್ತಂತೆ.*

ಗುಂಡುತೋಪುಗಳು ಬರೀ ಹಣ್ಣು ಹಂಪಲಿಗಾಗಲಿ, ದನಕರುಗಳ ಮೇವಿಗಾಗಲಿ ಮೀಸಲಾಗಿರಲಿಲ್ಲ. ಈ ಗುಂಡುತೋಪುಗಳಲ್ಲಿ ಹತ್ತಾರು ವಿವಿಧ ಚಟುವಟಿಕೆಗಳಿಗೆ ಉಪಯೋಗವಾಗುತ್ತಿತ್ತು. ಹಳ್ಳಿಯ ಜನರು ಬೇಸಾಯವನ್ನೆಲ್ಲಾ ಮುಗಿಸಿ ಪೈರು ಹಸಿರು ಕಂಡಮೇಲೆ ಹಸಿರು ಬಲಿಯನ್ನು ಕೊಡುತ್ತಿದ್ದರು. ಅಂದರೆ ಮೇಕೆ ಅಥವಾ ಕುರಿಯಂತಹ ಯಾವುದಾದರೂ ಒಂದು ಪ್ರಾಣಿಯನ್ನು ಗುಂಡುತೋಪಿನಲ್ಲಿ ಒಂದು ಗಿಡವನ್ನು ನೆಟ್ಟು ಅದಕ್ಕೆ ಬಲಿಕೊಟ್ಟಂತಹ ಪ್ರಾಣಿಯನ್ನು ಅಲ್ಲಿಯೇ ಔತಣಕ್ಕೆಂದು ಬಳಸುತ್ತಿದ್ದರು. ಇದೇ ಸಮಯದಲ್ಲಿ ಬೂದಿಯನ್ನು ಪ್ರತಿಯೊಂದು ಹೊಲಗದ್ದೆಗಳಿಗೆ ಎರಚುತ್ತಿದ್ದರು. ಈ ಬೂದಿ ಎರಚಲು ಕಾರಣವೆಂದರೆ ಪಸಲಿನ ಇಳುವರಿ ಹೆಚ್ಚಲೆಂದು ಎರಚುತ್ತಿದ್ದರಂತೆ. ಈ ಗುಂಡುತೋಪುಗಳಲ್ಲಿ ಯುವಕರು ಮತ್ತು ಮಕ್ಕಳು ಬೇಸಿಗೆಯ ದಿನಗಳಲ್ಲಿ ದನಕರುಗಳನ್ನು ಹೊಡೆದುಕೊಂಡು ಮೆಯಿಸುತ್ತಾ ಹಲವಾರು ಜಾನಪದ ಕ್ರೀಡೆಗಳನ್ನಾಡುತ್ತಿದ್ದರು. ಅವುಗಳೆಂದರೆ ಕಬ್ಬಡ್ಡಿ, ಉಯ್ಯಾಲೆ, ಮರದಕೋತಿಯಾಟ, ಚಿಲ್ಲಿದಾಂಡು, ಸೀರಂಗೋಲು, ಬಾರುಗೋಲು, ಕಳ್ಳಪೋಲೀಸ್ ಇಂತಹ ಹತ್ತು ಹಲವಾರು ಆಟಗಳನ್ನು ಆಡುತ್ತಿದ್ದರು. ಮತ್ತೆ ಹಳ್ಳಿಯ ಜನರ ದನಕರುಗಳಿಗೆ ಕಾಯಿಲೆ ಬಂದರೆ ಈ ಗುಂಡುತೋಪುಗಳ ಔಷಧಿ ಸಸ್ಯಗಳನ್ನು ಬಳಸುತ್ತಿದ್ದರು. ಇಲ್ಲಿ ಸಿಗುತ್ತಿದ್ದ ಎಣ್ಣೆಕಾಳುಗಳು, ಬೀಜಗಳನ್ನು ತಂದು ಎಣ್ಣೆ ತೆಗೆದು ಊರಿನ ಜನರೆಲ್ಲಾ ಹಂಚಿಕೊಂಡು ದೀಪಗಳನ್ನು ಉರಿಸಿಕೊಳ್ಳುತ್ತಿದ್ದರು. ಈ ಎಣ್ಣೆಬೀಜಗಳನ್ನು ಸಂಗ್ರಹಿಸಲು ಮತ್ತು ಎಣ್ಣೆ ತೆಗೆಯಲು ಊರಿನ ಜನರೆಲ್ಲಾ ಒಟ್ಟಾಗಿ ಸೇರುತ್ತಿದ್ದರು.

1886-89ರಲ್ಲಿ ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ಸರ್ವೇ ಸೂಪರಿಡೆಂಟರ್ ಆದೇಶದ ಮೇಲೆ ಗುಂಡುತೋಪುಗಳನ್ನು ಪುನರ್ಜೀವನಗೊಳಿಸುವ ಪ್ರಕ್ರಿಯೆಯೊಂದು ನಡೆಯಿತು. ಅಂದರೆ ಊರಗೌಡರು ಮತ್ತು ಶಾನುಭೋಗರಿಗೆ ಹೆಚ್ಚು ಕಂದಾಯ ವಸೂಲಿ ಮಾಡಲೆಂದು ಮತ್ತು ಗುಂಡುತೋಪುಗಳನ್ನು ಪುನರ್ಜೀವನಗೊಳಿಸಲು, ಗುಂಡುತೋಪು ಅಥವಾ ಸಾರ್ವಜನಿಕ ಭೂಮಿಯನ್ನು ಶಾನುಭೋಗರಿಗೆ ಹಾಗೂ ಊರ ಗೌಡರಿಗೆ ಬಿಟ್ಟುಕೊಡಲಾಯಿತು. ಇದೇ ಸಮಯದಲ್ಲಿ ಹಿಂದೆ ಯಾರು ಗುಂಡುತೋಪುಗಳನ್ನು ನೆಟ್ಟಿದ್ದರೋ ಅವರಿಗೆ ಗುಂಡುತೋಪುಗಳ ಅನುಭೋಗದ ಹಕ್ಕನ್ನು ನೀಡಲಾಯಿತು. ಇದರಲ್ಲಿ

ಕೆಲವು ಕರಾರನ್ನು ಹಾಕಲಾಗಿತ್ತು. ಗುಂಡುತೋಪಿನಲ್ಲಿ ಬರುವಂತಹ ಹಣ್ಣು, ಹಂಪಲು, ಎಣ್ಣೆ ಬೀಜಗಳು, ಹುಲ್ಲು ಮತ್ತು ಒಣಗಿದ ಮರಗಳನ್ನು ಅನುಭೋಗಿಸಬಹುದು. ಒಣಗಿದ ಜಾಗಕ್ಕೆ ಮರಗಿಡಗಳನ್ನು ನೆಡಬೇಕು. ಯಾವುದೇ ಕಾರಣಕ್ಕೂ ಈಗಿರುವ ಮರಗಳ ಸಂಖ್ಯೆಗಿಂತ ಕಡಿಮೆ ಇರಬಾರದು. ಈಗಲೂ ಬೆರಳೆಣಿಕೆಗೆಂದು ಗುಂಡುತೋಪುಗಳು ಜೀವಂತಿಕೆಯನ್ನು ಉಳಿಸಿಕೊಂಡಿವೆ. ಆದರೆ ಇವು ಖಾಸಗಿ ಸ್ವತ್ತಾದ ಕಾರಣದಿಂದ ಹಿಂದೆ ನಡೆಯುತ್ತಿದ್ದ ಸಾಮೂಹಿಕ ಚಟುವಟಿಕೆಗಳೆಲ್ಲಾ ನಿಂತುಹೋಗಿವೆ. ಉಳಿದ ಗುಂಡುತೋಪುಗಳೆಲ್ಲಾ ಸಂಪೂರ್ಣವಾಗಿ ನಶಿಸಿಹೋಗಿವೆ.

ಈ ಗುಂಡುತೋಪುಗಳ ನಾಶ ಸುಮಾರು ಮೂರು ಹಂತಗಳಲ್ಲಾಯಿತೆಂದರೆ ತಪ್ಪಾಗಲಾರದು. ಮೊದಲ ಹಂತವೆಂದರೆ ಪಂಚಾಯತಿಗೆ ಖಾಸಗಿಯವರಿಗೆ ವರ್ಗಾಯಿಸಿದ್ದು, ಎರಡನೇ ಹಂತ 1970 ರಿಂದ 85ರ ಅವಧಿಯಲ್ಲಿ ಸಾರ್ವಜನಿಕ ಭೂಮಿಯನ್ನು ಉಳುಮೆ ಮಾಡಲು ಅವಕಾಶ ಮಾಡಿದ್ದು, ಮೂರನೇ ಹಂತದಲ್ಲಿ ಹೊಸ ಕೃಷಿ ಮತ್ತು ಹೊಸ ಆರ್ಥಿಕ ನೀತಿಯ ಪರಿಣಾಮಗಳಿಂದಾಗಿ ಸಂಪೂರ್ಣವಾಗಿ ಗುಂಡುತೋಪುಗಳು ಸರ್ವನಾಶದ ಅಂಚಿಗೆ ಬಂದವು. ಹೊಸ ಕೃಷಿ ನೀತಿಯ ಬೆಲೆ ಮತ್ತು ಬೇಡಿಕೆಯಿಂದಾಗಿ ಜಮೀನು ಮಾರಿಕೊಂಡು ರೈತರು ಇಂತಹ ಗುಂಡುತೋಪು, ಕೆರೆಗಳನ್ನು ಒತ್ತುವರಿ ಮಾಡಿಕೊಂಡರು.

ಈ ಗುಂಡುತೋಪಿಗೆ ಸಂಬಂಧಿಸಿದಂತೆ ದೊಡ್ಡಬಳ್ಳಾಪುರ ತಾಲ್ಲೂಕಿನ ಎರಡು ಹಳ್ಳಿಯ ವಸ್ತು ಸ್ಥಿತಿ ಹೀಗಿವೆ. ದೊಡ್ಡಹೆಜ್ಜಾಜಿ ಎಂಬ ಹಳ್ಳಿಯಲ್ಲಿ ಎರಡು ಗುಂಡುತೋಪುಗಳಿವೆ. ಒಂದು ಗುಂಡುತೋಪು ಪಂಚಾಯತಿಯ ಅಧೀನದಲ್ಲಿದೆ. ಇನ್ನೊಂದು ಖಾಸಗಿಯವರ ಅಧೀನದಲ್ಲಿದೆ. ಗ್ರಾಮಪಂಚಾಯತಿಗೆ ಸೇರಿದಂತಹ ಗುಂಡುತೋಪು ಇಂದು ನಾಶದ ಅಂಚಿನಲ್ಲಿದೆ. ಈ ಗುಂಡುತೋಪಿನಲ್ಲಿ ಹುಣಸೇಮರ, ಮಾವಿನ ಮರ ಈ ರೀತಿ ಹತ್ತು ಹಲವು ಮರಗಳಿದ್ದವು. ಪಂಚಾಯತಿ ವರ್ಷಕ್ಕೆ ಒಂದು ಬಾರಿ ಈ ಮರದ ಫಲಗಳನ್ನು ಹರಾಜು ಹಾಕುತ್ತಿದೆ. ಇದರಲ್ಲಿ ವರ್ಷಕ್ಕೆ ರೂ. 2000 - 3000 ವರೆವಿಗೂ ಹಣ ಬರುತ್ತಿತ್ತು. ಈ ಹಣವನ್ನು ಈ ಗುಂಡುತೋಪಿಗೆ ಮೀಸಲಿಟ್ಟಿದ್ದರೂ ಸಾವಿರಾರು ಮರಗಳನ್ನು ನೆಡಬಹುದಾಗಿತ್ತು. ಅದರಿಂದ ಹತ್ತಾರು ಸಾವಿರ ರೂಪಾಯಿ ಹಣವೂ ಬರುತ್ತಿತ್ತು ಹಾಗೂ ನಡೆಯಲಿಲ್ಲ. ಅದರ ಜೊತೆಗೆ, ಹಳ್ಳಿಯ ಜನರ ಸಂಪೂರ್ಣ ನಿರ್ಲಕ್ಷ್ಯಕ್ಕೆ ಇದು ಒಳಗಾಯಿತು. ಇದು ನಮ್ಮದಲ್ಲ, ಪಂಚಾಯತಿ ಸ್ವತ್ತು ಎಂಬ ಭಾವನೆ ಬೆಳೆಯಿತು. ಇದೇ ಸಮಯದಲ್ಲಿ ಪಂಚಾಯತಿಯವರು ಓಟಿನ ಆಮಿಷಕ್ಕೆ ಜನರ ಒಲವನ್ನು ಗಳಿಸಿಕೊಳ್ಳಲು ಈ ಗುಂಡುತೋಪುಗಳ ಒತ್ತುವರಿಯ ಬಗ್ಗೆ ಉತ್ಸಾಹ ಮಾಡಿದರು. ಇದರಿಂದಾಗಿ ಗುಂಡುತೋಪು ಸಂಪೂರ್ಣವಾಗಿ ನಾಶವಾಯಿತು.

ಇನ್ನು ಖಾಸಗಿ ಒಡೆತನದಲ್ಲಿರುವ ಗುಂಡುತೋಪು ಇಂದು ನಾಶವೂ ಆಗದೆ, ಉಳಿಯಲೂ ಆಗದೆ ಮಧ್ಯಸ್ಥಿತಿಯನ್ನು ತಲುಪಿದೆ. ಈ ಗುಂಡುತೋಪನ್ನು ಸಂಪೂರ್ಣವಾಗಿ ಖಾಸಗೀ ವ್ಯಕ್ತಿಯೇ ನೆಟ್ಟು ಪೋಷಿಸಿದಂತಹ ತೋಪು. ಇದಕ್ಕೂ ಸಹ ಒಂದು ಕಥೆಯಿದೆ. ಈ ಖಾಸಗೀ ವ್ಯಕ್ತಿಯ ಮೂರುನಾಲ್ಕು ತಲೆಮಾರಿನ ಹಿಂದಿನ ಹಿರಿಯರು ಮಕ್ಕಳಿಲ್ಲದ ಕಾರಣಕ್ಕೆ ಈ ಗುಂಡುತೋಪನ್ನು ನೆಟ್ಟಿದ್ದರು. ಇದರ ಆಧಾರದ ಮೇಲೆಯೇ 1927ರಲ್ಲಿ ಈ ಗುಂಡುತೋಪಿನ ಸಂಪೂರ್ಣ ಅನುಭೋಗದ ಹಕ್ಕನ್ನು ಈ ವ್ಯಕ್ತಿಗೆ ನೀಡಲಾಗಿತ್ತು. ಈಗ ಈ ತೋಪು ಗ್ರಾಮ ಪಂಚಾಯತಿ ಮತ್ತು ಖಾಸಗಿ ವ್ಯಕ್ತಿಯ ಜಗಳದ ಮೇಲಿದೆ.

ಗೊಲ್ಲಹಳ್ಳಿಯಲ್ಲಿ ಈ ರೀತಿಯ ಗುಂಡುತೋಪು ಅನುಭೋಗದ ಹಕ್ಕು ಪಡೆದಿದ್ದ ಖಾಸಗಿ ವ್ಯಕ್ತಿಯ ಕೃಷಿ ಭೂಮಿಯಾಯಿತು. ಮೂಲತಃ ಈ ಗುಂಡುತೋಪಿನ ಮೇಲೆ ಖಾಸಗಿ ವ್ಯಕ್ತಿ ಅನುಭೋಗಿಸುವ ಹಕ್ಕನ್ನು ಮಾತ್ರ ಹೊಂದಿದ್ದರೂ, ಕ್ರಮೇಣ ಸರ್ಕಾರಿ ಅಧಿಕಾರಿಗಳ ನೆರವಿನಿಂದ ಸಂಪೂರ್ಣವಾಗಿ ತನ್ನದಾಗಿಸಿಕೊಂಡಿದ್ದರು. ಇದು ಭೂಮಿಗೆ ಬೆಲೆ ಬಂದಾದ ಮೇಲೆ ನಡೆದಂತಹ ಘಟನೆ.

ಇದೇ ರೀತಿ ಹೊನ್ನಾಘಟ್ಟದ ಒಂದು ಖಾಸಗಿ ಗುಂಡುತೋಪು ಸಂಪೂರ್ಣವಾಗಿ ಆರ್ಥಿಕ ದೃಷ್ಟಿಕೋನ ಇಟ್ಟುಕೊಂಡು ಹೊಂಗೆ ಮರಗಳನ್ನು ನೆಟ್ಟ ಬೆಳೆಸಿದಂತಹ ತೋಪು. ಇದೂ ಸಹ ಇಂದು ದೊಡ್ಡಹೆಜ್ಜಾಲದಲ್ಲಿಯ ಖಾಸಗೀ ಗುಂಡುತೋಪಿನ ಸ್ಥಿತಿಯಲ್ಲಿಯೇ ಇದೆ.

ಹೀಗೆ ಇಡೀ ಗ್ರಾಮದಲ್ಲಿನ ಪರಿಸರದ ಸಮತೋಲನಕ್ಕೆ, ಜಾನುವಾರುಗಳಿಗೆ ಎಲ್ಲವುದಕ್ಕೂ ಆಸರೆಯಾಗಿದ್ದುವೆಂಬ ಹೆಗ್ಗಳಿಕೆಯ ಗುಂಡುತೋಪಿನಂತಹಾ ಸಂಸ್ಥೆಗಳು ದಂತಕಥೆಯಾಗಿ ಮಾತ್ರ ಉಳಿಯುವಂತಾಗಿದೆ.

ಕೂಚುಭಟ್ಟ

(ಪುಟ : 8 ರಿಂದ ಮುಂದುವರೆದಿದೆ)

- ಬತ್ತದಲ್ಲಿ ರಾಸಾಯನಿಕ ರಹಿತ ಪೀಡೆ ನಿಯಂತ್ರಣ (Rice-Non Chemical Pest Control)

ಬತ್ತದಲ್ಲಿ ರಾಸಾಯನಿಕ ಬಳಸದೇ ಪೀಡೆ ನಿಯಂತ್ರಣ ಕ್ರಮಗಳು, ಪೀಡೆ ಮತ್ತು ಅವುಗಳನ್ನು ನಿಯಂತ್ರಿಸುವ ಪರಾವಲಂಬಿಗಳ ವಿವರಗಳಿವೆ. ಬಹುತೇಕ ಕ್ರಮಗಳು ದೇಶದಾದ್ಯಂತ ರೈತರೇ ಪ್ರಯೋಗಿಸಿ ನೋಡಿರುವಂತಹವು.

ಲೇಖಕರು *:* ಕೆ. ವಿಜಯಲಕ್ಷ್ಮಿ, ಸುಭಾಷಿನಿ ಶ್ರೀಧರ್ ಮತ್ತು ಇ. ದಾಮೋಧರನ್ ಬೆಲೆ *: 35* ರೂ.

ಗ್ರೀನ್ ಫೌಂಡೇಷನ್, ಬೆಂಗಳೂರು : ಪ್ರಕಟಣೆಗಳು

- **Seeds for future :** ದಕ್ಷಿಣ ಭಾರತದ ನಾಟಿ ತಳಿಗಳ ಗುಣ ವಿಶೇಷತೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಪುಸ್ತಕ
  ಬೆಲೆ : ರೂ. 30/-
- **On form conservation of seed diversity:** ಜೀವ ವೈವಿಧ್ಯ ಸಂರಕ್ಷಣೆಯಲ್ಲಿ ಆಸಕ್ತರಾಗಿರುವ ರೈತ, ಗುಂಪು, ಸಂಸ್ಥೆಗಳಿಗೆ ಬೀಜ ಸಂರಕ್ಷಣೆಯ ಹಂತ ಜ್ಞಾನದ ಮಾಹಿತಿ ನೀಡುವ ಉಪಯುಕ್ತ ಕೈಪಿಡಿ. ಬೆಲೆ : ರೂ. 75/-
- **Cultivating Seed links :** ಜೈವಿಕ ವೈವಿಧ್ಯದ ಸಂರಕ್ಷಣೆ ಹಾಗೂ ಬೀಜ ರಾಜಕೀಯದ ಮಗ್ಗುಲುಗಳನ್ನು ಪರಿಚಯಿಸುವ ಪುಸ್ತಕ ಬೆಲೆ : ರೂ. 25/-

ಕರ್ನಾಟಕದ ಇಬ್ಬರು ತಳಮಟ್ಟದ ಅನ್ವೇಷಕರಿಗೆ ಗುಜರಾತಿನಲ್ಲಿ ಸನ್ಮಾನ

ಗುಜರಾತಿನ ರಾಜಧಾನಿ ಅಹಮದಾಬಾದಿನ 'ಭಾರತೀಯ ನಿರ್ವಹಣಾ ಸಂಸ್ಥೆ' (Indian Institute of Management) ವಾಣಿಜ್ಯ, ಕೈಗಾರಿಕೆ, ಉದ್ದಿಮೆಗಳ ವ್ಯವಹಾರಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುವತ್ತ ಶಿಕ್ಷಣ, ತರಬೇತಿ ನೀಡುವ ವಿಖ್ಯಾತ ಸಂಸ್ಥೆ. ಇಲ್ಲಿಂದ ಪದವಿ ಪಡೆದ ತರುಣ ತರುಣಿಯರಿಗಂತೂ ಬಿಳೀ ಹಣೇ ಪಟ್ಟಿಯ ಕೈತುಂಬಾ ಸಂಬಳದ ನೌಕರಿ ಖಾತರಿ. ಇಂತಹ ನಾಜೂಕಿನ ವಾತಾವರಣದಲ್ಲಿ ಕಳೆದ ಐದಾರು ವರ್ಷಗಳಿಂದ ಫೆಬ್ರವರಿ ತಿಂಗಳಲ್ಲಿ ಒಂದೆರಡು ದಿನಗಳು ಯಾವುದೋ ರೀತಿಯ ವಿಚಿತ್ರ ಕಳೆ, ಹೊಸ ಹೊಸ ಮುಖಗಳಿಂದ ಚಕಿತಗೊಳಿಸುವ ವಾತಾವರಣ. ದೇಶದಾದ್ಯಂತದಿಂದ ಮಣ್ಣುಬಟ್ಟೆ, ಸೀರೆ, ತಲೆಗೆ ರುಮಾಲು ಧರಿಸಿ, ಎಲೆ ಅಡಿಕೆ ಜಗಿಯುತ್ತಾ ನೂರಾರು ರೈತರು, ಮಹಿಳೆಯರು ಗ್ರಾಮೀಣ ಬಡಜನತೆ ದೌಡಾಯಿಸಿ, ಇಡೀ ಕ್ಯಾಂಪಸ್ಸಿಗೆ ಒಂದು ರೀತಿಯ ನಾಟೀ ಸೊಬಗು ಬರಿಸುವ ವಾತಾವರಣ. ಇದು ಆ ಐ.ಐ.ಎಂ. ವಾತಾವರಣಕ್ಕೆ, ದೇಶೀಯ ತಂತ್ರಜ್ಞಾನ ವ್ಯವಸ್ಥೆಗೆ, ಜನಸಾಮಾನ್ಯರ ಅಸಮಾನ್ಯ ಶೋಧನೆಗಳಿಗೆ, ಗ್ರಾಮೀಣ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಜೀವ ವಿವಿಧತೆಗೆ, ಈ ಎಲ್ಲಾ ದೇಶೀಯ ಸಂಪತ್ತಿಗೆ ಬೆಲೆಕಟ್ಟಿ ಅವುಗಳನ್ನು ಸಂರಕ್ಷಿಸಿಕೊಂಡು ಬಂದಿರುವ ಈ ಸಾಮಾನ್ಯರ ಸೇವೆಗಳನ್ನು ಗುರುತಿಸಿ ಗೌರವಿಸಿ ಪುರಸ್ಕರಿಸುವ ಪ್ರೊ. ಅನಿಲ್‌ನ ಗುಪ್ತಾರ ಅನನ್ಯ ಪ್ರಯೋಗವಾಗಿರುತ್ತದೆ. ಪ್ರತಿ ವರ್ಷವೂ ಕೃಷಿ, ಪಶುಪಾಲನೆ, ಕರಕುಶಲತೆ, ನಾಟೀ ಚಿಕಿತ್ಸೆ, ಗ್ರಾಮೀಣ ಕಸುಬುಗಾರಿಕೆ ಈ ಎಲ್ಲಾ ರಂಗಗಳಲ್ಲಿ ಪಾವಿಣ್ಯತೆ ಪಡೆದು ಜನಸೇವೆಯಲ್ಲಿ ಬೆಳಕಿಗೂ ಬಾರದಂತೆ ತಣ್ಣನೆ ತೊಡಗಿರುವ ಹತ್ತಾರು ಮಂದಿಯನ್ನು ಗುರುತಿಸಿ ಶಾಲು ಹೊದಿಸಿ ಗೌರವಿಸುವ ಪರಿಪಾಠಕ್ಕೆ ಅನಿಲ್ ಗುಪ್ತಾರ ಹನಿಬೀ ಮತ್ತು ಸಹೋದರ ಪತ್ರಿಕೆಗಳು ಅವರ ಸೃಷ್ಟಿ (Sristi - Society for Research & Initiative for Sustaianase Technologies & Instititutions) ಹಾಗೇ ಗ್ಯಾನ್ (Gain - Gujarat Grassroots innovations Augmentations Netwark) ಸಂಸ್ಥೆಗಳು ಪಣತೊಣ್ಣುನಿಂತಿದೆ. ಈ ಬಾರಿಯ ಪುರಸ್ಕಾರ ಸಮಾರಂಭ ಇದೇ ಫೆಬ್ರವರಿ 20 ರಂದು ಜರುಗಿದ್ದು ಇದರಲ್ಲಿ ಕರ್ನಾಟಕದ ಇಬ್ಬರು ತಳಮಟ್ಟದ ಅನ್ವೇಷಣಾಕಾರರಾದ ಬೀದರ್‌ನ ಅಂಬಾಜಿ ತೇಲಂಗ ಮತ್ತು ಹಾಸನದ ಬಸವರಾಜ ಸಂತೇಶಿವರರು ಈ ಗೌರವಕ್ಕೆ ಪಾತ್ರರಾಗಿರುತ್ತಾರೆ.

ಶ್ರೀ ಅಂಬಾಜಿ ತೇಲಂಗ ಬೀದರ್‌ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಗೊರ್ಟ್ವಹಳ್ಳಿಯ ಓರ್ವ ಬಡ ಕೂಲಿಗಾರ. ಜಾನುವಾರುಗಳಿಗೆ ಚಿಕಿತ್ಸೆನೀಡುವ ವಿದ್ಯೆ ಈತನಿಗೆ ಕರತಲಾಮಲಕ. ಇದು ಈತನಿಗೆ ವಂಶಪಾರಂಪರಕವಾಗಿ ಬಂದಿದ್ದೆಂದರೆ ತಪ್ಪಾಗಲಾರದು. ಈತನ ಖ್ಯಾತಿ ಎಷ್ಟೆಂದರೆ, ಸುತ್ತಮುತ್ತಲಿನ ಹತ್ತು ಹಳ್ಳಿಗಳಿಗೆ ಈತನಿಲ್ಲವೆಂದರೆ, ಪಶುಚಿಕಿತ್ಸೆಗೇ ಏನೋ ಊನ ಬಂದಂತೆ. ದಿನ ನಿತ್ಯ ಹತ್ತಾರು ದನ, ಎಮ್ಮೆ, ಕುರಿ, ಮೇಕೆಗಳಿಗೆ ಚಿಕಿತ್ಸೆ, ಅವುಗಳ ಔಷಧಿಗಾಗಿ ಸಸ್ಯಗಳ ಹುಡುಕಾಟ ನಂತರ ಅವುಗಳಿಂದ ಔಷಧಿ ತಯಾರಿಸಿ ಪಶುಗಳಿಗೆ ಉಪಚಾರ, ಇದರಲ್ಲೇ ಹಲವಾರು ಕೂಲಿದಿನಗಳು ವ್ಯರ್ಥ. ಸದ್ಯಕ್ಕೆ ಈತನ ಹೆಂಡತಿ, ಮಕ್ಕಳ ದುಡಿತದಿಂದ ಸಂಸಾರ ಹೇಗೋ ದೂಡುವಂತಾಗಿದೆ. ಆದರೆ, ಪಶುಚಿಕಿತ್ಸೆಯಿಂದ ಒಂದು ಪೈಸೆಯನ್ನೂ ಕೇಳುವುದಿಲ್ಲ ಕೊಟ್ಟರೂ ಸ್ವೀಕರಿಸಲಾರ. ತನ್ನ ತಾತ ಮುತ್ತಾತರಿಂದ ಬಳುವಳಿಯಾಗಿ ಬಂದ ಈ ವಿದ್ಯೆ ಜನಸೇವೆಗೇ ಹೊರತು ಹಣ ಮಾಡುವುದಕ್ಕಲ್ಲ ಎಂಬುದು ಈತನ ಅಚಲ ನಂಬಿಕೆ. ಹಸುಗಳಲ್ಲಿ ಹಾಲು ಹೆಚ್ಚಿಸಲು ಅಮೃತಬಳ್ಳಿ (*Tinospora cordifolia*), ಎತ್ತುಗಳ ಹೆಗಲ ಬೇವೆ (*Yalk Gall*) ಗೆ ಕೊಡಂಗಿ ಬೇರು (Yellow parasite om tree), ಹಸುವಿನ ಮೈ ಮೇಲಿರುವ ಉಣ್ಣೆಗಳಿಗೆ ಕೇದಿಗೆ (Pandanus tectorius) ಹೀಗೆ ಸುಮಾರು 200ಕ್ಕೂ ಹೆಚ್ಚು ಔಷಧಿ ಸಸ್ಯಗಳು ಈತನಿಗೆ ಚಿರಪರಿಚಿತ. ಈತ ಹಸುಗಳ ಗಾಯಕ್ಕೆ ಬೆಣ್ಣೆ, ಕರ್ಪೂರ, ಎಕ್ಕದ ಹಾಲು ಇವುಗಳ ಮಿಶ್ರಣದಿಂದ ತಯಾರಿಸುವ ಮುಲಾಮಿನ ಪರಿಣಾಮವಂತೂ ಹೇಳತೀರದು. ಹೀಗೆ ಕಡುಬಡತನವಿದ್ದರೂ ನಿಸ್ವಾರ್ಥದಿಂದ ಏನೂ ಪ್ರತಿಫಲ ಬೇಡದೆ ಅಂಬಾಜಿ ನೀಡುತ್ತಿರುವ ಸೇವೆಗೆ ಅಲ್ಲಿನ ಜನರು ಬೆಲೆಕೊಟ್ಟು, ಗೌರವಿಸುವ ಗೋಜಿಗೂ ಹೋಗದಿರುವಾಗ, ಹಿತ್ತಲಗಿಡ ಪತ್ರಿಕೆಯಲ್ಲಿ ಈತನ ಪಶು ಚಿಕಿತ್ಸೆಗಳನ್ನು ಪ್ರಸ್ತಾಪಿಸಿದ್ದು, ಅದು ಅಹಮದಾಬಾದಿನ ಅನಿಲ್‌ಗುಪ್ತಾರವರಿಗೂ ತಲುಪಿ, ಈ ಬಾರಿ ಈತನನ್ನು ಕರೆಸಿ ಗೌರವಿಸುವಂತಾಯ್ತು. ಆದರೆ ಈತನದೊಂದು ಚಿಕ್ಕ ಬೇಡಿಕೆ ಇದೆ. ಈತನ ಚಿಕಿತ್ಸೆಗೆ



ಹಿತ್ತಲ ಗಿಡದ ವ್ಯಕ್ತಿಗಳು

ಅಗತ್ಯವಿರುವ ಆ ನೂರಾರು ಔಷಧಿ ಸಸ್ಯಗಳು ಈಗ ಸಿಗುವುದೇ ಕಷ್ಟವಾಗಿದ್ದು, ಅವುಗಳನ್ನು ತಾನೇ ಸ್ವತಃ ಬೆಳೆಯಲು ಸರ್ಕಾರದ ವಶದಲ್ಲಿರುವ ಒಂದೆರಡೆಕರೆ ಬೀಳು ಭೂಮಿ ಹಾಗೇ, ತನ್ನ ವೇಳೆಯನ್ನು ಸಂಪೂರ್ಣವಾಗಿ ಈ ಪಶುಗಳ ಸೇವೆಯಲ್ಲೇ ಕಳೆಯುವಂತಾಗಲು ಈತನಿಗೆ ಕನಿಷ್ಟ ಮಾಸಿಕ ಧನ ಸಹಾಯ ಬೇಕೆಂದು ಅವರಿವರ ಹತ್ತಿರ ಕೇಳುತ್ತಿರುವನು. ಇದು ನಮ್ಮ ಸರ್ಕಾರದ ಗಮನಕ್ಕೆ ಬಂದು ತನಗೆ ಒಂದಲ್ಲಾ ಒಂದು ದಿನ ಸಹಾಯ ದೊರೆಯುತ್ತದೆಂಬುದು ಈತನ ನಂಬಿಕೆ. ಇಷ್ಟು ಸಹಾಯ ದೊರೆತಲ್ಲಿ ಪಶುಗಳಿಗೇನೂ ಮನುಷ್ಯರ ಕ್ಯಾನ್ಸರ್‌ನಂತಹ ಕಾಯಿಲೆಗಳನ್ನು ಗುಣಮಾಡುವತ್ತಲೂ ಪ್ರಯತ್ನಿಸಿ ಔಷಧ ನೀಡಬಲ್ಲೆ ಎಂದು ಉತ್ಸಾಹದಿಂದ ಹೇಳುತ್ತಾನೆ.

ಇನ್ನು ಹಾಸನ ಜಿಲ್ಲೆಯ ಸಂತೇಶಿವರದಲ್ಲಿ ಐದಾರು ಎಕರೆ ಜಮೀನಿನ ಒಡೆಯ ಶ್ರೀ ಬಸವರಾಜ್ ಇಷ್ಟೇ ಸಾಹಸದ ಸದಾ ಅನ್ವೇಷಣೆಯಲ್ಲಿ ತೊಡಗಿರುವ ರೈತ. ಭತ್ತಕ್ಕೆ ಬೀಳುವ ಕಂದುಜಿಗಿಹುಳದ ಹತೋಟಿ ಇರಬಹುದು, ಕಾಯರ್ ಪಿತ್ಥ ಉಪಯೋಗಿಸಿ ಅತಿಪೋಷಾಕಾಂಶಯುಕ್ತ ಕಂಪೋಸ್ಟ್‌ಗೊಬ್ಬರ ತಯಾರಿಗೆ ಇರಬಹುದು, ಮಣ್ಣಿನ ಫಲವತ್ತತೆ ಕಾಪಾಡುವ ಬಹುಬೆಳೆ ಬೇಸಾಯ ಕ್ರಮವಿರಬಹುದು, ಅಷ್ಟೇಕೆ ಹುಳುಗಳ ಹಾವಳಿಯಿಂದ ಕೊಳೆತ ತೆಂಗಿನಸುಳಿ ಮತ್ತೆ ತರಿಸುವ ವಿಧಾನವಿರಬಹುದು. ಇವೆಲ್ಲಾ ತಾವೇ ಸ್ವತಃ ಪ್ರಯೋಗಿಸಿ, ಸುತ್ತಲಿನ ನೂರಾರು ರೈತರಿಗೆ ಸಾವಯವ ಕೃಷಿಯ ಗಿಳಿಪಾಠ ಹೇಳುವಲ್ಲಿ ನಿಸ್ಸೀಮರಾಗಿರುವರು. ಮನೆಯಲ್ಲಿ ದುಡಿಯಲು ಇವರೊಬ್ಬರೇ. ಸಾವಯವ ಕೃಷಿ ಎಂದಮೇಲೆ ಕೈತುಂಬಾ ಕೆಲಸ, ಸಾಲದಕ್ಕೆ ಈತನ ಪಾಠ ಕೇಳಲು ಬರುವ ರೈತರು, ಇವೆಲ್ಲವನ್ನು ನಿಭಾಯಿಸಿ, ಕೃಷಿ ಕಾರ್ಯ ಮಾಡುತ್ತಿರುವಾಗಲೇ ಸುತ್ತಮುತ್ತಲಿಂದ ಬೆಂಗಳೂರಿನ ಗ್ರೀನ್ ಫೌಂಡೇಶನ್‌ವರೆಗೆ ಬಸವರಾಜ್‌ಗೆ ಅನುಭವದ ಕಥೆ ಕೇಳಲು ಆಗಾಗ್ಗೆ ಆಮಂತ್ರಣ. ಇದ್ಯಾವುದಕ್ಕೂ ಸುಸ್ತಾಗದೇ, ಸಾವಯವ ಕೃಷಿಯಲ್ಲಿ ಅಪಾರ ಭರವಸೆ ಹೊಂದಿ, ಇತರರಲ್ಲೂ ಭರವಸೆ ನೀಡುತ್ತಿರುವ ಸಾಹಸಿ ರೈತ ಬಸವರಾಜ್ ಸಂತೇಶಿವರ, ಹಿತ್ತಲಗಿಡ ಪತ್ರಿಕೆಗೆ ಸದಾ ತಮ್ಮ ಅನುಭವ, ಅನ್ವೇಷಣೆಗಳನ್ನು ಬರೆಯುತ್ತಿರುವ ಲೇಖಕರ ಬಳಗದ ಸದಸ್ಯ ಕೂಡಾ ಹೌದು.

ಈ ರೀತಿ ಜನಸಾಮಾನ್ಯರ ನಡುವೆ ಬೆರೆತು, ಯಾವುದೇ ಪ್ರಚಾರ, ಪ್ರತಿಫಲಗಳಿಗೆ ಆಸೆಪಡದೇ ಜನಸೇವೆಮಾಡುತ್ತಾ, ತಮ್ಮ ಇತಿಮಿತಿಗಳೊಳಗೇ ಅದ್ಭುತ ಅನುಶೋಧನೆಗಳನ್ನು ಮಾಡುತ್ತಿರುವ ಅಂಬಾಜಿ, ಬಸವರಾಜ್‌ರಂತಹವರನ್ನು ಗುರುತಿಸಿ, ಗೌರವಿಸುವ ಪ್ರೊ. ಅನಿಲ್‌ಗುಪ್ತಾರ ಈ ಕಾರ್ಯ ಅನನ್ಯ ರೀತಿಯದ್ದು. ಇಂತಹ ಅನುಶೋಧನೆಗಳನ್ನು ಮತ್ತಷ್ಟು ವ್ಯವಸ್ಥೆಗೊಳಿಸಿ, ವಾಣಿಜ್ಯರೂಪಕೊಟ್ಟು ಆ ಮೂಲಕ ಅಂಬಾಜಿ, ಬಸವರಾಜರಂತಹವರ ಆರ್ಥಿಕ ಮಟ್ಟ ಸುಧಾರಿಸುವತ್ತ ಅವರು ಸದಾ ಯೋಚಿಸುತ್ತಿರುತ್ತಾರೆ. ಕೇಂದ್ರ ಸರ್ಕಾರದ ಸಾಹಸಿ ಉದ್ದಿಮೆದಾರರ ಬಂಡವಾಳ ನಿಧಿ ವೈಯುಕ್ತಿಕ ತಾಂತ್ರಿಕೋದ್ಯಮಿಗಳನ್ನು ಮುಂದೆ ತರುವ ಕಾರ್ಯಕ್ರಮ ಇವೆಲ್ಲವುಗಳ ಹಿಂದೂ ಪ್ರೊ. ಗುಪ್ತಾರವರು ತಮ್ಮ ಪ್ರಭಾವ ಬೀರುತ್ತಾ ಗ್ರಾಮೀಣಾಭಿವೃದ್ಧಿಗೆ ಹೊಸದೊಂದು ಮಾದರಿಯ ಹುಡುಕಾಟದಲ್ಲಿ ನಿರತರಾಗಿರುವರು.

ಎರೆಗೊಬ್ಬರದಿಂದ ಜೀವನೋಪಾಯ ಪಡೆದ ಶಿವಮ್ಮ

ಸಾವಯವ ಕೃಷಿಯಲ್ಲಿ ಬದುಕಿನ ಸಾರ್ಥಕತೆ ಪಡೆದ ಶಿವಮ್ಮನವರು ಹೇಳುವ ಪ್ರಕಾರ ಎರೆಗೊಬ್ಬರ ತಯಾರಿಕೆಗೆ ನಾಲ್ಕು ಮೀಟರ್ ಉದ್ದ, ಒಂದೂವರೆ ಮೀಟರ್‌ನ ಗುಂಡಿ ಸಾಕು. ಎಲೆ, ಕಸಕಡ್ಡಿ, ಹಸಿರೆಲೆ, ಅಡಿಗೆಮನೆಯ ವೇಸ್ಟ್ ಹೀಗೆ ಮಣ್ಣಿನಲ್ಲಿ ಕೊಳೆಯಬಹುದಾದ ಎಲ್ಲಾ ವಸ್ತುಗಳನ್ನು ಹಾಗೂ ಸಗಣಿಯನ್ನು ಗುಂಡಿಗೆ ಒದಗಿಸಬೇಕು.

ಎರೆಹುಳುವಿನ ಒಂದು ಮೊಟ್ಟೆಯಿಂದ ಹತ್ತು ಹುಳುಗಳು ಬರುತ್ತವೆ. ಹೊರಬಂದ ಒಂದು ವಾರಕ್ಕೆ ಆಹಾರ ಸೇವಿಸಲು ಪ್ರಾರಂಭಿಸುತ್ತವೆ. ಬಾಳೆ ಎಲೆಯನ್ನು ಎರೆಹುಳು ಸುಲಭವಾಗಿ ತಿನ್ನುತ್ತದೆ. ಇದಕ್ಕೆ ನೆರಳು ಹಾಗೂ ತೇವಾಂಶದ ಅಗತ್ಯ ಇದೆ. ಹುಳು ಬಿಟ್ಟ ೬ ತಿಂಗಳಿಗೆ ಮೊದಲಗೊಬ್ಬರ ತೆಗೆಯಬಹುದು ಎನ್ನುತ್ತಾರಿವರು.

ಒಂದು ಕಿಲೋ ಗೊಬ್ಬರಕ್ಕೆ 25-30 ರೂ. ದೊರಕುತ್ತದೆ. ಇಂಥ ಒಂದು ಗುಂಡಿಯಿಂದ ವರ್ಷಕ್ಕೆ ಒಂದರಿಂದ ಒಂದೂವರೆ ಲಕ್ಷ ಆದಾಯ ಪಡೆಯಬಹುದೆಂಬ ನಂಬಿಕೆ ಈಕೆಯದು.

ತಾನು ಕಲಿತು, ಪರಿಶ್ರಮದಿಂದ ಅದನ್ನೇ ಉದ್ಯೋಗವನ್ನಾಗಿ ಮಾಡಿಕೊಂಡ ಈಕೆ, ಇತರರಿಗೆ ತರಬೇತಿ ಕೊಡಲು ಹೋಗುವುದಲ್ಲದೆ ರೈತ ಸಮುದಾಯಕ್ಕೆ ಆತ್ಮೀಯವಾಗಿ ತಮ್ಮ ಜ್ಞಾನ ಹಂಚಿಕೊಳ್ಳುತ್ತಿದ್ದಾರೆ. ತನ್ನ ಜಮೀನಿಗೂ ಇದನ್ನೇ ಬಳಸಿ, ಹೆಚ್ಚಿನ ಇಳುವರಿ ಪಡೆಯುತ್ತಿದ್ದಾರೆ.

ಈಕೆಗೆ ಸಂದ ಪ್ರಶಸ್ತಿ ಪುರಸ್ಕಾರಗಳು ಹಲವು. ಅವುಗಳಲ್ಲಿ ಸಾವಯವ ಕೃಷಿಗಾಗಿ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ 1997ರಲ್ಲಿ 15000 ಸಹಾಯ ಧನನೀಡಿ ಗೌರವಿಸಿರುವುದು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಈಕೆಯನ್ನು ಉದ್ಯೋಗಮಹಿಳೆಯೆಂದು ಗುರುತಿಸಿರುವುದು, ಕರ್ನಾಟಕ ಪ್ರದೇಶ ಕೃಷಿ ಸಮಾಜದ ಸನ್ಮಾನ ಹಾಗೂ ಬಹುಮಾನ ಹೆಸರಿಸಬಹುದಾಗಿದೆ.

1991 ರಿಂದ ಬನಶಂಕರಿ ಎರೆಹುಳು ಸಾಕಣಿಕಾ ಕೇಂದ್ರ ತೆರೆದು, ಗೊಬ್ಬರ ತಯಾರಿಸಿ ವಿಲೇವಾರಿ ಮಾಡುತ್ತಿದ್ದಾರೆ. ಇದರೊಂದಿಗೆ ಅಡಿಕೆ, ಕಾಫಿ, ಕರಿಬೇವು ಹಾಗೂ ನುಗ್ಗಿ ಸಸಿಗಳನ್ನು ಸಹ ಮಾಡಿ ಮಾರಾಟಮಾಡುತ್ತಾರೆ. ಇದರ ಮೂಲಕ ನಾಲ್ಕು ಐದು ಜನರಿಗೆ ವರ್ಷಪೂರ್ತಿ ಉದ್ಯೋಗ ಒದಗಿಸುತ್ತಿದ್ದಾರೆ. ಸಾವಯವದಲ್ಲಿ ಸಾರ್ಥಕತೆ ಪಡೆದ ಶಿವಮ್ಮನ ಕಿರು ಪರಿಚಯವಿದು.

ಸಂಗ್ರಹ : ಶಾರದ ಬಿ.ಎನ್.

ಅಮೃತ್ ಮಹಲ್ ಹೋರಿಯನ್ನು ಪಳಗಿಸಿದ ದಲಿತ ನೋರ್ವನ ಸಾಹಸ

ಅಮೃತ್‌ಮಹಲ್ ಚಿತ್ರದುರ್ಗದ ಒಂದು ಹಳ್ಳಿ. ಈ ಹಳ್ಳಿಯ ಹೋರಿ ತಳಿಗಳು ಹೆಸರು ಮಾಡಿದಂತಹ ದನದ ತಳಿಗಳು. ಬೇರೆ ಜಾತಿಯ ಹೋರಿಗಳಿಗೆ ಹೋಲಿಸಿದರೆ ತುಂಬಾ ಎತ್ತರ, ತುಂಬಾ ಉದ್ದ, ಕಾಲುಗಳು ನೀಳವಾಗಿರುವ ಈ ಹೋರಿಗಳ ಓಟವೆಂದರೆ ಕುದುರೆಗಳ ಸಮ. ಇವುಗಳ

ಬೆಲೆ ತುಂಬಾ ಜಾಸ್ತಿ. ಈ ಹೋರಿಗಳನ್ನು ಎಷ್ಟೋ ರೈತರು ತಮ್ಮ ಪ್ರತಿಷ್ಠೆಗಾಗಿ ಸಾಕುತ್ತಿದ್ದರು. ಇವುಗಳ ಸಾಕಣೆ ಎಂದರೆ ಆನೆಯನ್ನು ಸಾಕಿದಂತೆ. ರಾಜರುಗಳಿಗೆ ಕುದುರೆಗಳು ಎಷ್ಟು ಮುಖ್ಯವೋ ರೈತರಿಗೆ ಈ ಹೋರಿಗಳು ಅಷ್ಟೇ ಮುಖ್ಯ. ಇಂತಹ ಜಾತಿಯ ಹೋರಿಯನ್ನು ಪಳಗಿಸಿದ.

ಗಂಗಾಧರಯ್ಯನ ಅನುಭವ ಹೀಗಿದೆ. "ನಾನು ಗೌಡರ ಮನೆಯಲ್ಲಿ ಕೆಲಸಕ್ಕೆ ಇದ್ದೆ. ಅವರು ನನ್ನ ಒತ್ತಾಯದ ಮೇರೆಗೆ ಒಂದು ಜೊತೆ ಅಮೃತ್ ಮಹಲ್ ಹೋರಿಯನ್ನು ಕೊಂಡರು. ಅದರಲ್ಲಿ ಒಂದು ಹಠಮಾರಿ ಹೋರಿಯಾಗಿತ್ತು. ಇದನ್ನು ಕಟ್ಟುವುದು ಮತ್ತು ಬಿಚ್ಚಿ ಕೆಲಸ ಮಾಡಿಸುವುದು ತುಂಬಾ ಕಷ್ಟವಾಯಿತು. ಅದಕ್ಕೆ ನಾನೊಂದು ಉಪಾಯಮಾಡಿದೆ. ಆ ದನಕ್ಕೆ ಎರಡು ಮೂರು ದಿವಸ ಹುಲ್ಲು ನೀರನ್ನಿಡಲಿಲ್ಲ. ನಾಲ್ಕನೇ ದಿನ ನಾನು ಸ್ನಾನ ಮಾಡಿದ ಬೆವರಿನ ನೀರನ್ನು ಕುಡಿಸಿದೆ. ನಂತರ ನನ್ನ ಕೈಗೆ ಉಪ್ಪು ಬೆಲ್ಲವನ್ನು ಸವರಿ ನೆಕ್ಕಿಸಿದೆ. ಅಲ್ಲಿಂದೀಚೆಗೆ ನನ್ನ ಬೆರೆಯಲು ಶುರು ಮಾಡಿತು. ಆದರೆ ಮೈ ತೊಳೆಸಿಕೊಳ್ಳುತ್ತಿರಲಿಲ್ಲ. ನಸಿಕುನಿ ತುರಿಕೆ ಬರಿಸುವ ಬೀಜವನ್ನು ಅದರ ಹೊಟ್ಟೆಯ ಭಾಗಕ್ಕೆ ಸವರಿದೆ. ಅದಕ್ಕೆ ಮೈ ತಿವಿತ ಜಾಸ್ತಿಯಾಗಿ ತುರಿಸಲು ಆರಂಭವಾಯಿತು. ಯಾರಾದರೂ ಕೆರೆದರೆ ಸಾಕೆಂಬಂತಾಗಿತ್ತು. ಇದೇ ಸಮಯ ನೋಡಿ ನೀರಲ್ಲಿ ನಿಲ್ಲಿಸಿ ಮೈ ತೊಳೆದೆ. ಅಲ್ಲಿಂದಾಚೆಗೆ ಮೈ ತೊಳೆಸಿಕೊಳ್ಳುತ್ತಿತ್ತು.

ಇದರಲ್ಲಿ ಇನ್ನೊಂದು ಹೋರಿ ಬರಬರುತ್ತಾ ಸಣ್ಣಗಾಯಿತು. ಸರಿಯಾಗಿ ಮೇವು ತಿನ್ನುತ್ತಿರಲಿಲ್ಲ. ಅದಕ್ಕೆ ನಾನು ಮಾಡಿದ ಔಷಧ ಏನು ಗೊತ್ತೆ? ಪರಂಗೀಹಣ್ಣು, ಪಚ್ಚಕರ್ಪೂರ ಹಾಗೂ ಹಂದಿ ಮಾಂಸದ ಕರಳನ್ನು ತಿನ್ನಿಸಿದೆ. ಅಲ್ಲಿಂದಾಚೆಗೆ ಆನೆಗಾತ್ರದ ಹೋರಿಯಾಯಿತು. ಈ ಘಟನೆ ನಡೆದ ಮೇಲೆ ನಮ್ಮ ಗೌಡರ ಪಕ್ಕದ ಊರಿನ ಸಂಬಂಧಿಕರು ನನ್ನನ್ನು ಹೋರಿ ಮೇಯಿಸಲು ಹೆಚ್ಚು ಹಣಕೊಟ್ಟು ಕರೆದುಕೊಂಡು ಹೋದರು. ಅಲ್ಲಿ ಸುಮಾರು ಮೂರು ನಾಲ್ಕು ವರ್ಷ ಕೆಲಸ ಮಾಡಿದೆ. ನನಗೆ ಈ ಎರಡೂ ಊರಿನಲ್ಲೂ ಜನರು ಗೌರವ ಕೊಡುತ್ತಿದ್ದರು. ಮತ್ತು ಹೊಸದಾಗಿ ತಂದಂತಹ ಹೋರಿಗಳನ್ನು ಉಳುಮೆ ಮಾಡಲು, ಗಾಡಿ ಹೊಡೆಯಲು ಪಳಗಿಸಲಿಕ್ಕೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು ಮತ್ತು ಬಸವನ ಜಯಂತಿಯ ಸಂದರ್ಭದಲ್ಲಿ ಹೋರಿಗಳ ಮೆರವಣಿಗೆಯ ಶೃಂಗಾರ ಮಾಡಲು ಕರೆಯುತ್ತಿದ್ದರು. ಹಾಗೇ ನನಗೆ ಒಂದು ಜೊತೆ ಹೊಸ ಬಟ್ಟೆ, ಪಂಚೆ ಕೊಟ್ಟು ಗೌರವಿಸುತ್ತದ್ದರು."

ಸಂಗ್ರಹ : ಚಿತ್ರಶೇಖರ

ಅಪ್ಪಟ ಹೋರಾಟಗಾರ ಥಾಮ್‌ಕೊಚೇರಿ

ವಿಶ್ವ ಮೀನುಗಾರರ ಮತ್ತು ಮತ್ಸ್ಯಕಾರ್ಮಿಕರ ವೇದಿಕೆಯ (World Forum of Fish - harvesters and fishworkers) ಮತ್ತು ಜನಪರ ಚಳುವಳಿಗಳ ರಾಷ್ಟ್ರೀಯ ಒಕ್ಕೂಟ (National Alliance of peoples movement) ನ ಸಂಚಾಲಕ, ಕಾರ್ಮಿಕ ಚಳುವಳಿಗಳ ಮುಂದಾಳು, ವಕೀಲ, ಪರಿಸರವಾದಿ, ಕ್ಯಾಥೋಲಿಕ ಪಾದ್ರಿ, ವಿಶ್ವವ್ಯಾಪಾರ ಸಂಘಟನೆ ವಿರುದ್ಧದ ಸಮರದ ಅಗ್ರಗಣ್ಯ, ಭಾರತದ ಕರಾವಳಿ ಪರಿಸರದ ಸಂರಕ್ಷಣೆಗೆ ಕೈಗೊಂಡ ಐತಿಹಾಸಿಕ 1989 ರ ಕನ್ಯಾಕುಮಾರಿ ಯಾತ್ರೆಯ ರುವಾರಿ. ಹೀಗೆ ಬಂಡಾಯ ಬದುಕಿನ ಹಲವು ಹತ್ತಾರು ಪಾತ್ರ ನಿರ್ವಹಿಸುತ್ತಿರುವ ಥಾಮ್ ಕೊಚೇರಿಯ ನಿಜರೂಪವೇನೆಂದು ಕೇಳಿದಾಗ ಅವರು ತಟ್ಟನೆ ಕೊಟ್ಟ ಉತ್ತರ "ಮಣ್ಣಿನಿಂದ ದೂರವಾದ ವ್ಯಕ್ತಿಗಳಿಂದ ಈ ಮಣ್ಣಿಗೇ ಹೊಂದಿಕೊಂಡು ಬಾಳುತ್ತಿರುವ ಜನಗಳ ಮೇಲಾಗುತ್ತಿರುವ ಅತ್ಯಾಚಾರವನ್ನು ತಡೆಯುವಂತೆ ನಾನು ವಹಿಸುತ್ತಿರುವ ಪಾತ್ರವೇ ನನ್ನ ನಿಜ ರೂಪ" ಎಂಬುದಾಗಿದೆ.

"ನಿಮ್ಮಂತಹ ಪರಿಸರವಾದಿಗಳು ಪ್ರಗತಿ ವಿರೋಧಿಗಳೇ" ಎಂಬ ಪ್ರಶ್ನೆಗೆ ಅವರು ಸಿಟ್ಟಾಗಿ ಕೊಟ್ಟ ಉತ್ತರ ಇನ್ನೂ ಮಾರ್ಮಿಕವಾಗಿತ್ತು. 'ಪರಿಸರದ ಈ ರೀತಿಯ ಅಡೆತಡೆ ಇಲ್ಲದ ಶೋಷಣೆ ಮತ್ತು ಅದರ ಖಾಸಗೀಕರಣ ಪ್ರಗತಿಯೇ? ಮಾನವರ ಎಲ್ಲ ಆಸೆ ಆಕಾಂಕ್ಷೆಗಳನ್ನು ನಿರ್ನಾಮ ಮಾಡುವವರಿಗೆ ನಮ್ಮಂತಹವರನ್ನು ಪ್ರಗತಿ ವಿರೋದಿಗಳೆನ್ನುವ ಹಕ್ಕಾದರೂ ಎಲ್ಲಿದೆ?" ಇಂದು ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಆ ಭ್ರಷ್ಟಾಚಾರ ಮತ್ತು ದಬ್ಬಾಳಿಕೆಗಳಿಗೆ ಏನಾದರೂ ಅರ್ಥವಿದೆಯೇ? ನಿಜವಾದ ಅಭಿವೃದ್ಧಿಯೆಂಬುದು ಶಾಂತಿ, ಪರಿಸರದೊಡನೆ ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯಗಳೊಡಗೂಡಿರಬೇಕು.

ಈ ರೀತಿಯ ವಿಚಿತ ಅಭಿಪ್ರಾಯಗಳ ಕೊಚೇರಿ ಮತ್ತು ಅವರ ಸಂಗಡಿಗರು ಹೋರಾಟದ ಮೂಲಕ ಇಂದು ಭಾರತದ ಕರಾವಳಿಯನ್ನು ವಿದೇಶಿಯರ ಬೃಹತ್ ಮೀನು ಹಿಡಿಯುವ ಯಂತ್ರಗಳಿಂದ ಮುಕ್ತಗೊಳಿಸಲು ಹೆಚ್ಚೂ ಕಡಿಮೆ ಯಶಸ್ವಿಯಾಗಿರುವರು. ಅದೇ ರೀತಿ, ಬೃಹತ್ ಪ್ರಮಾಣದ ಒಳನಾಡು ಸಿಗಡಿ ಮೀನುಗಾರಿಕೆ (ಅಕ್ವಾಕಲ್ಚರ್) ವಿರುದ್ಧವೂ ಹೋರಾಟ ಮುಂದುವರೆಸಿರುವರು. ಒಟ್ಟಾರೆ ವಿಶ್ವದ ಕರಾವಳಿ, ಸಮುದ್ರ ಸಂಪತ್ತೆಲ್ಲವುಗಳ ಉಸ್ತುವಾರಿ, ಒಡೆತನಗಳು ಮೀನುಗಾರ ಸಮುದಾಯಗಳ ಕೈತಪ್ಪಿಹೋಗದಂತೆ ನಿರಂತರ ಕಟ್ಟೆಚ್ಚರಿಕೆ ವಹಿಸಲು ಪಣತೊಟ್ಟಿರುವರು.

ಥಾಮ್ ಕೊಚೇರಿಯವರ ಈ ಹೋರಾಟ ಜೀವನವನ್ನು ಪುರಸ್ಕರಿಸಿ ಅವರಿಗೆ ಪ್ರಶಸ್ತಿ ಹಣಗಳು ಹರಿದು ಬಂದಿರುತ್ತವೆ. ಉದಾಹರಣೆ 1997 ರಲ್ಲಿ ಮಾನವಹಕ್ಕು ರಕ್ಷಣೆಗೆಂದು ಜರ್ಮನ್ ದೇಶದ ಪಿಯೆನ್ ಪ್ರಶಸ್ತಿ, 1998 ರಲ್ಲಿ ವಿಶ್ವಸಂಸ್ಥೆಯ ಭೂ ಸಂಘ ಪ್ರತಿಷ್ಠಾನ ಪ್ರಶಸ್ತಿ, 1999 ರಲ್ಲಿ ನಾರ್ವೆ ದೇಶದ ಒಂದು ಲಕ್ಷ ಅಮೆರಿಕನ್ ಡಾಲರ್, ನಾರ್ವೆ ದೇಶದ ಸೋಫಿ ಬಹುಮಾನ ಹೀಗೆ, ಹಲವು ಹತ್ತಾರು ಪ್ರಶಸ್ತಿ ಬಂದಿದ್ದರೆ, 1997ರಲ್ಲಿ ಪ್ರತಿಷ್ಟಿತ ಪ್ಯೂ ಪ್ರತಿಷ್ಠಾನದ ಒಂದೂವರೆ ಲಕ್ಷ ಡಾಲರ್ ಪ್ರಶಸ್ತಿಯನ್ನು ಅದು ಪರಿಸರಕ್ಕೆ ಹಾನಿ ಮಾಡುವ ಒಂದು ತೈಲ ಕಂಪನಿಯ ಮೂಲಕ ಬಂದಿರುತ್ತದೆ ಎಂಬ ಕಾರಣಕ್ಕೆ ಹಿಂದು ಮುಂದು ನೋಡದೆ ಥಾಮಸ್‌ಕೊಚೇರಿ ತಿರಸ್ಕರಿಸಿರುವರೂ ಕೂಡ. ಹೀಗೆ ಕೆಳವಮಟ್ಟದ ಜನರ ಪರವಾಗಿ ಗಟ್ಟಿಯಾಗಿ ನಿಂತಿರುವ ಅಪ್ಪಟ ಹೋರಾಟಗಾರ ಥಾಮ್ ಕೊಚೇರಿ ಇಂದು ಪರಿಸರ ಸಂರಕ್ಷಣೆಗೆ, ರೈತರ, ಮಹಿಳೆಯರ, ಮೀನುಗಾರರ, ಬುಡಕಟ್ಟು ಜನಾಂಗಗಳ ಜೀವನ ಭದ್ರತೆಯತ್ತ ಹೋರಾಟ ನಡೆಸುವವರಿಗೆಲ್ಲಾ ಆಶಾಚೇತನವಾಗಿರುವರು

ಆಧಾರ : ಡೆಕನ್‌ಹೆರಾಲ್ಡ್, 19-3-2000

ನುಗ್ಗೆ ಸೊಪ್ಪಿನ ಬಸ್ಸಾರು

ನುಗ್ಗೆಸೊಪ್ಪನ್ನು ತೊಗರಿಬೇಳೆಯೊಂದಿಗೆ ಬೇಯಿಸಬೇಕು ಬಳಿಕ ಅದರ ತಿಳಿಯನ್ನು ಬಸಿಯಬೇಕು. ಬಸಿದ ಸಾರಿಗೆ 2-3ಹಸಿಮೆಣಸನ್ನು ಸ್ವಲ್ಪ ಎಣ್ಣೆಯಲ್ಲಿ ಹುರಿದು ಉಪ್ಪಿನೊಂದಿಗೆ ಗುದ್ದಿ ಹಾಕಬೇಕು. ಬಳಿಕ ಬೆಳ್ಳುಳ್ಳಿ ಗುದ್ದಿ ಹಾಕಿ ಕುದಿಸಬೇಕು. ಸ್ವಲ್ಪ ಆರಿದ ಬಳಿಕ ಅರ್ಧ ಲಿಂಬೆ ಹಣ್ಣಿನ ರಸ ಹಿಂಡಬೇಕು. ಈಗ ರುಚಿಯಾದ ಬಸ್ಸಾರು ರೆಡಿ. ಬೇಳೆ ಮತ್ತು ಸೊಪ್ಪಿಗೆ 1 ಗಡ್ಡೆ ನೀರುಳ್ಳಿ 3-4 ಒಣ ಮೆಣಸಿನ ಒಗ್ಗರಣೆ ಹಾಕಿ ಪಲ್ಯ ಮಾಡಿದರೆ, ರುಚಿಯಾಗಿರುತ್ತದೆ.

ನುಗ್ಗೆ ಸೊಪ್ಪಿನ ರೊಟ್ಟಿ

ವಿಧಾನ 1 : ಬೇಕಾಗುವ ಸಾಮಾಗ್ರಿ ನುಗ್ಗೆ ಸೊಪ್ಪು 30 ಗರಿಗಳು, ಈರುಳ್ಳಿ 4 ದೊಡ್ಡದು, ಕಾಯಿ ಮೆಣಸು 10, ಕಾಯಿ ತುರಿ ಅರ್ಧ ಭಾಗ, ರುಚಿಗೆ ತಕ್ಕ ಉಪ್ಪು, 2 ಲೋಟ ಅಕ್ಕಿ ಹಿಟ್ಟು, ಸ್ವಲ್ಪ ಬೆಳ್ತಕ್ಕಿ ಅನ್ನ.

ಮೊದಲಿಗೆ ನುಗ್ಗೆ ಸೊಪ್ಪನ್ನು ತೊಳೆದು ಬಿಡಿಸಿ ಸಣ್ಣಗೆ ಹೆಚ್ಚಿಕೊಳ್ಳಬೇಕು. ಈರುಳ್ಳಿ, ಕಾಯಿಮೆಣಸು, ಇದನ್ನು ಸಣ್ಣಗೆ ಹೆಚ್ಚಿಕೊಳ್ಳಬೇಕು. ಇದರ ಜೊತೆಗೆ ಕಾಯಿತುರಿ, ಉಪ್ಪನ್ನು ಬೆರಸಬೇಕು. ನಂತರ ಸ್ವಲ್ಪ ಬೆಳ್ತಕ್ಕಿ ಅನ್ನವನ್ನು ಪಾತ್ರೆಯಲ್ಲಿ ಹಾಕಿ ನಾದಬೇಕು. ಅದಕ್ಕೆ ಮೇಲೆ ಹೇಳಿದ ಸಾಮಾನುಗಳನ್ನು ಹಾಕಿ ಅಕ್ಕಿ ಹಿಟ್ಟನ್ನು ಬೆರೆಸಿ ಒಟ್ಟಾಗುವಂತೆ ನಾದಬೇಕು. ನಂತರ ಉಂಡೆ ಮಾಡಿ ತಟ್ಟಿ ಕಾವಲಿಯಲ್ಲಿ ಕಾಯಿಸಬೇಕು. ಕಾಯಿಸುವಾಗ ಎಣ್ಣೆಯನ್ನು ಹಾಕಬೇಕು. ಈಗ ನುಗ್ಗೆ ಸೊಪ್ಪಿನ ರೊಟ್ಟಿ ತಯಾರು.

ವಿಧಾನ 2 : 1 ಪಾವು ಅಕ್ಕಿ, ಒಂದು ಹಿಡಿ ನುಗ್ಗೆಸೊಪ್ಪು, 1 ತುಂಡು ಬೆಲ್ಲ, ಸ್ವಲ್ಪ ತೆಂಗಿನ ತುರಿ.

ಅಕ್ಕಿ, ಉಪ್ಪು, ಬೆಲ್ಲ, ತೆಂಗಿನತುರಿ ಹಾಕಿ ರುಬ್ಬಬೇಕು. ನಂತರ ಸೊಪ್ಪು ಹಾಕಿ ಕಲಸಿ ಬಾಳೆ ಎಲೆಯ ಮೇಲೆ ಹಾಕಿ ರೊಟ್ಟಿ ಮಾಡಿಕಾಯಿಸುವುದು.

ನುಗ್ಗೆ ಸೊಪ್ಪಿನ ಬಾತ್

ಬೇಕಾಗುವ ಸಾಮಾನುಗಳು ಒಂದು ಪಾವು ಬೆಳ್ತಿಗೆ ಅಕ್ಕಿ, ಎರಡು ಕಪ್ಪು ನುಗ್ಗೆ ಸೊಪ್ಪು, ಕೊತ್ತಂಬರಿ ಮೂರು ಟೀ ಚಮಚ, ಜೀರಿಗೆ ಕಾಲು ಚಮಚ, ಮೆಂತೆ ಕಾಲು ಚಮಚ, ಒಣಮೆಣಸು ಎಂಟು, ಹುಳಿ ಹುಡಿ ಅರ್ಧ ಚಮಚ, ನೀರು ಮೂರು ಕಪ್, ನೀರುಳ್ಳಿ ಒಂದು, ಸಾಸಿವೆ ಒಂದು ಚಮಚ, ಕಡ್ಲೆಬೇಳೆ ಒಂದು ಚಮಚ, ತೆಂಗಿನತುರಿ ಒಂದು ಕಪ್ಪು.

ವಿಧಾನ : ಉದುರಾದ ಅನ್ನ ಮಾಡಿಕೊಳ್ಳಿ. ಮಸಾಲೆ ಸಾಮಾನು ಹುರಿದುಕೊಳ್ಳಿ. ತೆಂಗಿನತುರಿ, ಹುಳಿ, ಉಪ್ಪನ್ನು ನೀರು ಹಾಕದೆ ಒಟ್ಟಿಗೆ ರುಬ್ಬಿಕೊಳ್ಳಿ, ಬಾಣಲೆಯಲ್ಲಿ ಒಗ್ಗರಣೆಗಿಟ್ಟು ಸಾಸಿವೆ, ಕಡ್ಲೆ ಬೇಳೆ ಹಾಕಿ, ಸಿಡಿದಾಗ ನೀರುಳ್ಳಿ ಹಾಕಿ ಬಾಡಿಸಿ, ಬಳಿಕ ನುಗ್ಗೆ ಸೊಪ್ಪು ಹಾಕಿ ಬಾಡಿಸಿ ಅದಕ್ಕೆ ಸ್ವಲ್ಪ ಅರಸಿನವನ್ನು ಹಾಕಿ. ಈ ಒಗ್ಗರಣೆಗೆ ಅನ್ನ ಮತ್ತು ಮಸಾಲೆ ಹಾಕಿ ಚೆನ್ನಾಗಿ ಮಗುಚಿ.

ನುಗ್ಗೆ ಸೊಪ್ಪಿನ ಇಡ್ಲಿ

ಬೇಕಾಗುವ ಸಾಮಾನುಗಳು ಒಂದು ಪಾವು ಬೆಳ್ತಿಗೆ ಅಕ್ಕಿ, ಒಂದು ಪಾವಿನಷ್ಟು ಸ್ವಚ್ಛಗೊಳಿಸಿದ ನುಗ್ಗೆಸೊಪ್ಪು, ಒಂದು ಮುಷ್ಠಿ ಉದ್ದಿನಬೇಳೆ, ರುಚಿಗೆ ಉಪ್ಪು

ವಿಧಾನ: ಅಕ್ಕಿ ಮತ್ತು ಬೇಳೆಯನ್ನು ತೊಳೆದು ಎರಡು ಗಂಟೆ ನೆನೆಯಿಸಿ ಇಡಬೇಕು. ನಂತರ ಅದಕ್ಕೆ ಸೊಪ್ಪನ್ನು ಸೇರಿಸಿ ಇಡ್ಲಿ ಹಿಟ್ಟಿನ ಹದಕ್ಕೆ ಸ್ವಲ್ಪ ತರಿ ತರಿಯಾಗಿ ರುಬ್ಬಬೇಕು. ಉಪ್ಪು ಹಾಕಿ ಮರುದಿನ ಬೆಳಿಗ್ಗೆ ಇಡ್ಲಿ ಮಾಡಿದರೆ ಮೆತ್ತಗಾಗಿ ರುಚಿಯಾಗಿರುತ್ತದೆ. ಪೌಷ್ಠಿಕಾಂಶವೂ ಧಾರಾಳ ಸಿಗುತ್ತದೆ.

ನುಗ್ಗೆ ಸೊಪ್ಪಿನ ದೋಸೆ

ಬೇಕಾಗುವ ಸಾಮಾನುಗಳು : ಒಂದು ಲೋಟ ಬೆಳ್ತಿಗೆ ಅಕ್ಕಿ, ಅರ್ಧ ಲೋಟ ಸ್ವಚ್ಛಗೊಳಿಸಿದ ನುಗ್ಗೆ ಸೊಪ್ಪು, ಎರಡು ಚಮಚ ಉದ್ದಿನ ಬೇಳೆ, ಒಂದು ಚಮಚ ಮೆಂತೆ, ರುಚಿಗೆ ತಕ್ಕಷ್ಟು ಉಪ್ಪು.

ವಿಧಾನ: ಅಕ್ಕಿ, ಬೇಳೆ ಮತ್ತು ಮೆಂತೆಯನ್ನು ಚೆನ್ನಾಗಿ ತೊಳೆದು ಮೂರು ಗಂಟೆ ನೆನೆಸಿಇಡಬೇಕು. ನಂತರ ಅದಕ್ಕೆ ಸೊಪ್ಪನ್ನು ಸೇರಿಸಿ ದೋಸೆ ಹಿಟ್ಟಿನ ಹದಕ್ಕೆ ಉಪ್ಪು ಹಾಕಿ ರುಬ್ಬಬೇಕು. ಎರಡು ಗಂಟೆ ಬಿಟ್ಟು ದೋಸೆ ಹೊಯ್ಯಬೇಕು.

ಮೂಲ : ನಿಸರ್ಗದತ್ತ ಆಹಾರ
ಸಂಗ್ರಹ : ವಿದ್ಯಾನಾಯಕ್
ಪ್ರಕಾಶಕರು : ನಾಗರೀಕ ಸೇವಾ ಟ್ರಸ್ಟ್ (ರಿ)
ಗುರುವಾಯನ ಕೆರೆ, ದ.ಕ.

ಅಪಾಯದಂಚಿನ ಪ್ರಾಣಿಗಳ ಮಾಂಸದೂಟ

ಹಿತ್ತಲಗಿಡ ನಾಟಿ ಹಣ್ಣು, ತರಕಾರಿ, ದೇಶೀಯ ಆಹಾರ, ಊಟ ಉಪಚಾರಗಳತ್ತ ಜನರ ಗಮನ ಸೆಳೆಯಲು ಪ್ರಯತ್ನಿಸುತ್ತಿದ್ದರೆ, ಕರ್ನಾಟಕದ ಗಡಿ ಪ್ರಾಂತ್ಯದ ಬಂಡೀಪುರ ಮದುಮಲೈ ಅರಣ್ಯ ವಿಭಾಗದ ವ್ಯಾಪ್ತಿಗೆ ಬರುವ ಗುಂಡ್ಲುಪೇಟೆ ಗುಡ್ಲೂರು ಹೆದ್ದಾರಿಯಲ್ಲಿರುವ ಕೆಲ ಹೋಟೆಲುಗಳಲ್ಲಿ ಅಳಿವಿನಂಚಿನಲ್ಲಿರುವ ಹಳದಿ ಕಾವುಜುಗ ಪಕ್ಷಿ, ನವಿಲು, ಸಂಬರ್ ಜಿಂಕೆಗಳ ಮಾಂಸದ ರಸದೌತಣ ಬಡಿಸಲಾಗುತ್ತಿದೆ. ಈ ವಿಚಾರವನ್ನು ಕೆಲ ಪ್ರಾಣಿ ದಯಾ ಸಂಘದವರು ಸಂಭಂದ ಪಟ್ಟ ಅಧಿಕಾರಿಗಳ ಗಮನಕ್ಕೆ ತಂದರೂ ಇದುವರೆಗೂ ಯಾವ ಕ್ರಮವನ್ನೂ ಕೈಗೊಳ್ಳದಿರುವುದು ಖಂಡನೀಯ.

ಅಳಲೇಕಾಯಿ

ಪೀಚುಕಣ್ಣು : ಕಣ್ಣಿನ ಉರಿಯೂತಕ್ಕೆ ನಾಟೀ ಚಿಕಿತ್ಸೆಗಳು

ಕಣ್ಣಿನಲ್ಲಿ ಉರಿ ಮತ್ತು ಕಣ್ಣು ಕೆಂಪಾಗುವಿಕೆಗೆ ಲೋಳೆ ಸರ (ಎಲೆಯ ತಿರುಳು) (*Aloe barbadensis*) ದ ಎಲೆಯನ್ನು ನೀಳವಾಗಿ ಸೀಳಿ ಅದರಲ್ಲಿರುವ ತಿರುಳನ್ನು ಹೊರತೆಗೆದು ಶೇಖರಿಸಿಕೊಳ್ಳಬೇಕು. ತಿರುಳನ್ನು ಕಣ್ಣಿಗೆ ತಾಗುವಂತೆ ಇಟ್ಟುಕೊಂಡು ಅದರ ಮೇಲೆ ಪಟ್ಟಿ ಕಟ್ಟಿಕೊಂಡು ರಾತ್ರಿ ನಿದ್ರಿಸಬೇಕು. ಹೀಗೆ ಮೂರು ದಿನ ಪಾಲಿಸಬೇಕು. ಅತಿ ಬಿಸಿಯಾದ ಆಹಾರ, ಮಸಾಲೆ ಎಣ್ಣೆ ಪದಾರ್ಥಗಳು ಬಿಸಿಲಿಗೆ ಒಡ್ಡುವುದು ವರ್ಜ್ಯ.

ಕಣ್ಣಿನ ಸ್ರಾವಕ್ಕೆ ದಾಳಿಂಬೆ ಹಣ್ಣಿನಿಂದ ರಸ ತೆಗೆದು ಸೋಸಿ ಉಪಯೋಗಿಸಬಹುದು. ಅಥವಾ ಹಣ್ಣಿನ ಸಿಪ್ಪೆಯಿಂದ ಕಷಾಯ ಕಾಯಿಸಿ ಉಪಯೋಗಿಸಬೇಕು. ಒಂದರಿಂದ ಹತ್ತು ತೊಟ್ಟುಗಳಷ್ಟು ಔಷಧಿ ದ್ರವವನ್ನು ಮೂರರಿಂದ ಏಳು ದಿನಗಳವರೆಗೆ ಉಪಯೋಗಿಸಬೇಕು.

ಅಳಲೇ ಕಾಯಿ (*Terminalia chebula*) ಹಣ್ಣಿನ ಸಿಪ್ಪೆ, ಶಾಂತಿ ಕಾಯಿ (*Terminalia belerica*) ಹಣ್ಣಿನ ಸಿಪ್ಪೆ, ನೆಲ್ಲಿಕಾಯಿ ಹಣ್ಣಿನ ಸಿಪ್ಪೆ ಮೂರುದ್ರವಗಳನ್ನು ಒಣಗಿಸಿ ಪುಡಿಮಾಡಿ ಪ್ರತಿಯೊಂದನ್ನು ಹದಿನೈದು ಗ್ರಾಂ ತೆಗೆದುಕೊಂಡು ಬೆರಸಿ ಒಂದು ಚಹಾ ಚಮಚದಷ್ಟು ಬೆರೆಸಿದ ಪುಡಿಯನ್ನು ಒಂದು ಲೋಟ ನೀರಿಗೆ ಸೇರಿಸಿ ಚೆನ್ನಾಗಿ ಕುದಿಸಿ ಅರ್ಧ ಲೋಟಕ್ಕಿಳಿಸಿ ಸೋಸಿ ಉಪಯೋಗಿಸಬೇಕು. ಶುದ್ಧ ಹತ್ತಿಯ ತುಂಡನ್ನು ಕಷಾಯದಲ್ಲಿ ಮುಳುಗಿಸಿ, ಅದನ್ನು ದಿನಕ್ಕೆ ಐದಾರು ಸಲ ಕಣ್ಣಿನ ಮೇಲೆ ಹಚ್ಚಬೇಕು.

ಅರಿಶಿನ ಒಂದು ಚಮಚವನ್ನು ಇನ್ನೂರೈವತ್ತು ಮಿಲಿ ಲೀಟರ್ ನೀರಿಗೆ ಸೇರಿಸಿ ಹತ್ತು ನಿಮಿಷ ಕುದಿಸಿ, ಸೋಸಿ ಉಪಯೋಗಿಸಬೇಕು. ಶುದ್ಧ ಹತ್ತಿಯನ್ನು ಕಷಾಯದಲ್ಲಿ ಅದ್ದಿ ಐದರಿಂದ ಆರು ಸಲ ಕಣ್ಣಿಗೆ ಹಚ್ಚಬೇಕು.

ಸೂಚನೆ ಅನುಕೂಲತೆ ಮತ್ತು ದೊರಕುವಿಕೆಗೆ ತಕ್ಕಂತೆ ಯಾವುದಾದರೂ ಒಂದು ಚಿಕಿತ್ಸೆಯನ್ನು ಆಯ್ದುಕೊಳ್ಳಬಹುದು.

ಕೆಮ್ಮಿಗೆ ನಾಟೀ ಚಿಕಿತ್ಸೆಗಳು

ಒಣ ಕೆಮ್ಮಿಗೆ ಆಡುಸೋಗೆಯ (Adhatoda vasica) ಎರಡು ಅಥವಾ ಮೂರು ಚಿಗುರೆಲೆಗಳನ್ನು ಒಂದು ಬಟ್ಟಲಿನಲ್ಲಿ ಹಾಕಿ ಕುದಿಸಿ ಅರ್ಧಕ್ಕಿಳಿಸಬೇಕು. ಒಂದು ಬಟ್ಟಲು ಔಷಧಿ ದ್ರವ್ಯವನ್ನು ದಿನವೂ ಬೆಳಿಗ್ಗೆ ಕುಡಿಯಬೇಕು. ಹಾಗೆ ಏಳು ದಿನಗಳ ಕಾಲ ಕುಡಿಯಬೇಕು.

ಎಲೆಗಳಿಂದ ಸ್ವರಸ, ಲೇಪ ಅಥವಾ ಪುಡಿಗಳನ್ನೂ ತಯಾರಿಸಬಹುದು. ಒಂದು ಚಮಚ ಔಷಧಿ ದ್ರವ್ಯಕ್ಕೆ ಅರ್ಧ ಚಮಚ ಶುಂಠಿ ರಸವನ್ನು ಬೆರಸಿ ದಿನಕ್ಕೆ ಮೂರು ಬಾರಿಯಂತೆ ಏಳು ದಿನಗಳ ಕಾಲ ಸೇವಿಸಬೇಕು.

ತಣ್ಣನೆಯ ಆಹಾರ, ಥಂಡಿಯಲ್ಲಿ ಓಡಾಟ, ಧೂಳು ತುಂಬಿದೆಡೆ ವಾಸ, ಹಗಲು ನಿದ್ರೆಗಳು ಕೆಮ್ಮನ್ನು ವರ್ಜಿಸುತ್ತದೆ. ಕರಿಮೆಣಸು ಮತ್ತು ಬೆಳ್ಳುಳ್ಳಿಗಳನ್ನು ಸೇವಿಸಬೇಕು. ಬೆಚ್ಚನೆಯ ಉಡುಪನ್ನು ಧರಿಸಬೇಕು.

ಕಫದಿಂದ ಕೂಡಿದ ಕೆಮ್ಮಿಗೆ

ಲೋಳೆ ಸರ (Aloc barbadensis) ಎರಡು ಚಮಚೆ ಎಲೆಯ ತಿರುಳನ್ನು ಅರ್ಧ ಚಮಚೆ ತುಪ್ಪದ ಜೊತೆಗೆ ಹುರಿಯಬೇಕು. ಸ್ವಲ್ಪ ಸಕ್ಕರೆ ಸೇವಿಸಿ ದಿನಕ್ಕೆ ಮೂರು ಸಲದಂತೆ ಮೂರು ದಿನಗಳ ಕಾಲ ಸೇವಿಸಬೇಕು.

ಹಿಪ್ಪಲಿ ಹಣ್ಣುಗಳು (Piper longum) ಕರಿ ಮೆಣಸಿನ ಹಣ್ಣುಗಳು (Piper nigrum) ಮತ್ತು ಶುಂಠಿ (Zingiber officinale) ಪ್ರತಿ ದ್ರವ್ಯವನ್ನು 50 ಗ್ರಾಂ ತೆಗೆದುಕೊಂಡು ಒಂದು ವಾರಕ್ಕೆ ಸರಿಯಾಗುವಂತೆ ಬಳಸಿಕೊಳ್ಳಬೇಕು. ಮೂರು ದ್ರವ್ಯಗಳನ್ನು ಪುಡಿಮಾಡಿ ಜೇನು ತುಪ್ಪದ ಜೊತೆ ಸೇರಿಸಿಟ್ಟುಕೊಳ್ಳಬೇಕು. ಬೇಕಾದಾಗಲೆಲ್ಲಾ ಸ್ವಲ್ಪ ಸ್ವಲ್ಪವೇ ಔಷಧಿಯನ್ನು ಜೇನುತುಪ್ಪಕ್ಕೆ ಸೇರಿಸಿ ಉಪಯೋಗಿಸಬೇಕು.

ಶುಂಠಿಯ (Zingiber officinale) ತಾಜಾ ರೈಸೋಮುಗಳನ್ನು ಜಜ್ಜಿ ರಸ ತೆಗೆಯಬೇಕು. ಒಂದು ಚಮಚ ತಾಜಾ ಸ್ವರಸವನ್ನು ಜೇನುತುಪ್ಪದ ಜತೆ ಬೆರಸಿ ಮೂರು ಸಲದಂತೆ ಏಳು ದಿನಗಳ ಕಾಲ ಸೇವಿಬೇಕು.

ಆಮ್ಲ ಪಿತ್ತಕ್ಕೆ

ಅಮೃತ ಬಳ್ಳಿಯ (Tinospora cordifolia) ಕಾಂಡವನ್ನು ಜಜ್ಜಿ ರಸ ತೆಗೆಯಬೇಕು. ಒಂದು ಚಮಚ ರಸವನ್ನು ಜೇನು ತುಪ್ಪದ ಜತೆ ಸೇರಿಸಿ ದಿನಕ್ಕೆ ಮೂರು ಸಲದಂತೆ ಏಳು ದಿನಗಳ ಕಾಲ ಸೇವಿಸಬೇಕು.

ಅಳಲೆಕಾಯಿ (Terminalia chebula), ಶಾಂತಿಕಾಯಿ (Terminalia beerica) , ನೆಲ್ಲಿಕಾಯಿ (Embica officinais) ಈ ಮೂರು ದ್ರವ್ಯಗಳನ್ನು ಒಣಗಿಸಿ ಸಮ ಪ್ರಮಾಣದಲ್ಲಿ ತೆಗೆದುಕೊಂಡು ಪುಡಿಮಾಡಿ ಬೆರೆಸಿಟ್ಟುಕೊಳ್ಳಬೇಕು. ಒಂದು ಚಮಚ ಪುಡಿಯನ್ನು ಜೇನುತುಪ್ಪದ ಜತೆ ಸೇರಿಸಿ ಏಳುದಿನಗಳ ಕಾಲ ಸೇವಿಸಬೇಕು.

ಬಿಸಿ ಪದಾರ್ಥಗಳು, ಖಾರ ಮತ್ತು ಮಸಾಲೆ ಪದಾರ್ಥಗಳು ಮತ್ತು ಬಿಸಿಲಿಗೆ ಮೈ ಒಡ್ಡುವುದರಿಂದ ಪಿತ್ತ ವರ್ಜಿಸುತ್ತದೆ.

ಮೂಲ : ಪ್ರಾಥಮಿಕ ಆರೋಗ್ಯ ಪಾಲನೆಗೆ ಔಷಧಿಯ ಸಸ್ಯಗಳನ್ನು ಬಳಕದಾರನ ಮಾರ್ಗದರ್ಶಿ. ಪ್ರಕಾಶಕರು : ಸ್ಥಳೀಯ ಆರೋಗ್ಯ ಪರಂಪರೆಗಳ ಪುನರುತ್ಥಾನ ಪ್ರತಿಷ್ಠಾನ, ಬೆಂಗಳೂರು

ಹಿತ್ತಲ ಗಿಡದ ಕುಟುಂಬ

Honey bee	ಇಂಗ್ಲೀಷ್
Nam Vazhi Velanmai	ತಮಿಳು
Lokasarvani	ಗುಜರಾತಿ
Dzongkha Honey Bee	ಭೂತಾನಿ
Thenetiga	ತೆಲುಗು
Sujh Bhuj	ಹಿಂದಿ
Khoj Bhai	ಪಂಜಾಬಿ
Makhir	ಹಿಮಾಚಲ ಪ್ರದೇಶ
Abeja	ಕೊಲಂಬಿಯಾ

ಸಸ್ಯವೈವಿಧ್ಯತೆಯ ಕುರಿತಾಗಿ ಮಲೆನಾಡ ಮಹಿಳೆಯರ ಜ್ಞಾನ ಸಂಪತ್ತು

- *ತೇಜಸ್ವಿನಿ*

ಮಲೆನಾಡ ಕಾಡುಗಳಲ್ಲಿ, ಬೆಟ್ಟ ಗುಡ್ಡಗಳಲ್ಲಿ ಎಷ್ಟೆಲ್ಲಾ ಜಾತಿಯ ಗಿಡಮರಗಳು. ಕಾಡುಗಳನ್ನು, ಗಿಡಮರಗಳನ್ನು ಸಂರಕ್ಷಿಸಿಡುವುದರತ್ತ ಎಲ್ಲರ ಗಮನವಿದೆ. ಈ ಸಸ್ಯಸಂಪತ್ತಿನಷ್ಟೇ ಪ್ರಮುಖವಾದದ್ದು, ಅಲ್ಲಿನ ಸಸ್ಯ ಸಾಮ್ರಾಜ್ಯದ ಕುರಿತಾಗಿ ಜನರ ಜ್ಞಾನ ಸಂಪತ್ತು. ಗಿಡ ಮರಗಳ ಒಡನಾಟದಿಂದ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಜ್ಞಾನ ಅದು.

ಕಾಡಿನಲ್ಲಿ ಬಿದ್ದು ಒಣಗಿದ ಎಲೆ ಗುಡಿಸಿ, ಸೊಪ್ಪು ಕಡಿದು ಕೊಟ್ಟಿಗೆಗೆ ತಂದು ಹಾಕುತ್ತಿದ್ದ ನಾಗರತ್ನಳೊಡನೆ ಕಾಡು ನೋಡಲು ಹೊರಟೆ. ಎಲೆ ಗುಡಿಸುತ್ತಾ, ಅತ್ತಿತ್ತ ಕೈ ತೋರಿಸಿ ಪ್ರತಿಯೊಂದು ಗಿಡ ಗುರುತಿಸಿ ಅದರ ಉಪಯೋಗ ಹೇಳುತ್ತಿದ್ದ ನಾಗರತ್ನಳ ಮಾತು ಕೇಳುವಾಗ ಸಸ್ಯ ಶಾಸ್ತ್ರದ ಪುಸ್ತಕದ ಪುಟ ತಿರುಗಿಸಿದಂತಾಯಿತು. ಮಲೆನಾಡಿನ ಮಧ್ಯೆ, ಶಿವಮೊಗ್ಗ ಚಿಕ್ಕಮಗಳೂರು ಜಿಲ್ಲೆಯ ಅಂಚುಗಳಲ್ಲಿ ಹಂಚಿ ಹೋಗಿರುವ ಹಳ್ಳಿ ಕಮ್ಮರಡಿ. ಇಂತಹ ಒಂದು ಹಳ್ಳಿಯ, ಒಬ್ಬ ರೈತ ಮಹಿಳೆ ನಾಗರತ್ನ. ಇಂತಹ ಅದೆಷ್ಟು ಹಳ್ಳಿಗಳ ಅದೆಷ್ಟು ರೈತ ಮಹಿಳೆಯರ ಬಳಿ ಈ ಜ್ಞಾನ ಹುದುಗಿದೆಯೋ, ಬೆಳಕಿಗೆ ಬಾರದೆ ಆಧುನಿಕತೆಯ ಗಾಳಿಯಲ್ಲಿ, ಸುತ್ತಲಿನ ಪರಿಸರದ ಬಗ್ಗೆ ಗಮನವೇ ಹರಿಸದ ಶಿಕ್ಷಣದ ಭರಾಟೆಯಲ್ಲಿ ಈ ಜ್ಞಾನ ಮತ್ತೆಲ್ಲಿ ಹುದುಗಿ ಬಿಡುತ್ತದೆಯೋ ಎಂದು ಬೇಗ ಬೇಗನೆ ನಾಗರತ್ನ ಮಾತಿನಲ್ಲಿ ಹೇಳಿದ ಪಾಠವನ್ನು ಅಕ್ಷರದಲ್ಲಿ ಇಳಿಸಿದೆ.

- ಕರಡಿಸೊಪ್ಪು : ಇದೊಂದು ಬಳ್ಳಿ. ಕಹಿಯಾದ ಇದರ ಎಲೆಗಳ ಪಲ್ಯ ಹೊಟ್ಟೆ ಹುಳಕ್ಕೆ ಔಷಧಿ. 7-8 ಬಾರಿ ಎಲೆ ತೊಳೆದು, ಕಹಿ ಅಂಶ ಕಡಿಮೆ ಮಾಡಿ ಪಲ್ಯ ಮಾಡುತ್ತಾರೆ.
- ಎತ್ತು ಬೀಳು : ಕಾಡಿನಲ್ಲಿ ಕಡಿದು ಹೊರೆ ಕಟ್ಟಲು ಇದರ ಬಳ್ಳಿ ಉಪಯೋಗ. ಜೊತೆಗೆ ಈ ಬಳ್ಳಿಯಿಂದ ಬುಟ್ಟಿ, ಜಲ್ಲೆ (ಒಣಗಿದ ಎಲೆ ಹೊರುವ ದೊಡ್ಡ ಬುಟ್ಟಿ) ಕೂಡ ಮಾಡುತ್ತಾರೆ.
- ಒಳ್ಳೆಕುಡಿ (*Memecylon malabaricum*) : ಇದೊಂದು ಔಷಧೀಯ ಸಸ್ಯ. ಮೈಯಲ್ಲಿ ಕಜ್ಜಿ ಆದಾಗ, ಅಥವಾ 'ಅಮ್ಮ' ಆದಾಗ ಸಸ್ಯದ ಎಲೆಗಳನ್ನು ಹಚ್ಚಿ ಸ್ನಾನ ಮಾಡಿ ಜೊತೆಗೆ ಅದನ್ನೇ ಔಷಧಿಯಂತೆ ತಿಂದರೆ, ತುರಿಕೆ ಕಡಿಮೆಯಾಗಿ ಕಜ್ಜಿ ಗುಣವಾಗುತ್ತದಂತೆ.
- ಅಳಲೆಮರ (*Terminalia chebula*): ಆಯುರ್ವೇದದ ಔಷಧಿಗಳಲ್ಲಿ ಪ್ರಮುಖವಾಗಿ ಬಳಸುವ ಈ ಅಳಲೇ ಕಾಯಿಯನ್ನು ಒಣಗಿಸಿ ಬೇಯಿಸಿ, ಎಣ್ಣೆ ತೆಗೆದು ತಲೆಗೆ ಹಚ್ಚಿದರೆ ತಂಪಾಗುವುದಂತೆ.
- ಚಿದೊರಳ್ಳಿ : ಇದೊಂದು ಕಾಡುಮಲ್ಲಿಗೆ ಬಳ್ಳಿ. ಇದರ ಕಾಂಡದಲ್ಲಿನ ನೀರು ಕಣ್ಣಿಗೆ ಔಷಧಿ. ಸೊಪ್ಪು ಕಡಿಯುವಾಗ ಕಣ್ಣಿಗೆ ಕಸ ಬಿದ್ದರೆ ಈ ಬಳ್ಳಿಯ ಅಂಚಿನಿಂದ ಬರುವ ನೀರನ್ನು ಕಣ್ಣಿಗೆ ಬಿಟ್ಟು ಕಸ ಹೊರಗೆ ಬರುವಂತೆ ಮಾಡುತ್ತಾರೆ.
- ಬೋಗಿ ಮರ (*Hopea parviflora*) :ಇದು ಸಾಮಾನ್ಯವಾಗಿ ಕಂಡುಬರುವ ಮರ. ಇದು ಗಟ್ಟಿಮರ. ಮನೆ ಕಟ್ಟಲು ಬೇಕಾಗುವ ರೀಪು, ಪಕಾಸು ಮಾಡಲು ಸೂಕ್ತ.
- ಹೈಗನಮರ (*Hopea wightiana*) : ಬೋಗಿಯ ಜಾತಿಗೆ ಸೇರಿದ ಇನ್ನೊಂದು ಮರ, ಬೋಗಿಗಿಂತ ಗಾತ್ರದಲ್ಲಿ ದೊಡ್ಡದು. ಎಲೆ, ಮರ ಎರಡೂ ದೊಡ್ಡದು.
- ಕಂಚಿಗನ ಮುಳ್ಳು : ಎಲೆ, ಗಿಡ, ಹೂ, ಪ್ರತಿಯೊಂದೂ ಮುಳ್ಳಿನಿಂದ ಕೂಡಿದೆ. ಹೆಗ್ಗಣ ಬರದಂತೆ ಮಾಡಲು ಬೇಲಿಯಂತೆ ಇದನ್ನು ಬಳಸುತ್ತಾರೆ.
- ಚಂದ್ರಕ್ಕನ ಗಿಡ : ಮಳೆಗಾಲದಲ್ಲಿ ಕಾಲು ಬೆರಳುಗಳ ಮಧ್ಯೆ ಕೊಳೆತು ನೋವಾಗುವುದು, ನೀರಿನಲ್ಲಿ ಕೆಲಸ ಮಾಡುವ ಎಲ್ಲರಿಗೂ ಸಾಮಾನ್ಯವಾಗಿ ಕಾಡುವ ತೊಂದರೆ. ಈ ಗಿಡದ ಸೊಪ್ಪು ಮತ್ತು ಉಪ್ಪು ಎರಡನ್ನೂ ಬೆರೆಸಿ, ಕಾಲು ಬೆರಳುಗಳ ಮಧ್ಯೆ ಹಚ್ಚುವುದರಿಂದ ತೊಂದರೆ ಮುಕ್ತಿ.
- ಹುಣಸೆ ಬಳ್ಳಿ : ಎತ್ತು ಬೀಳುವಿನಂತೆ ಈ ಬಳ್ಳಿಯನ್ನು ಕೂಡಾ ಬುಟ್ಟಿ ಮಾಡುಲು ಬಳಸುತ್ತಾರೆ.
- ಬೂದಿ ಬೀಳು : ಈ ಬಳ್ಳಿಯ ಎಲೆಯನ್ನು ಉಪಯೋಗಿಸಿ, ಅಕ್ಕಿಯ ಜೊತೆ ಸೇರಿಸಿ ದೋಸೆ ಮಾಡುತ್ತಾರೆ.
- ಧೂಪದ ಮರ (*Vateria indica*) : ಇದರ ಕಾಯಿಗಳಿಂದ ಎಣ್ಣೆ ತೆಗೆಯುತ್ತಾರೆ. ಸ್ಥಳೀಯ ಜನ ಇದರ ಕಾಯಿಯನ್ನು ಹೆಕ್ಕಿ ಮಾರುವುದೂ ಉಂಟು.
- ದಾಲ್ಚಿನಿ (*Cinnamomum zeylanicum*) : ಇದು ಮಾರುಕಟ್ಟೆಯಲ್ಲಿ ದೊರೆಯುವ ದಾಲ್ಚಿನಿ ಚಕ್ಕೆಯಷ್ಟು ಪರಿಮಳವಿಲ್ಲದಿದ್ದರೂ, ಅದನ್ನೇ ಹೋಲುತ್ತದೆ ಮತ್ತು ಸಾಕಷ್ಟು ಪರಿಮಳ ಹೊಂದಿದೆ. ಇದರ ಎಲೆಯಿಂದ ಎಣ್ಣೆ ಮಾಡಿ ಗಾಯಕ್ಕೆ ಹಚ್ಚುತ್ತಾರೆ.
- ಕೆಂದ್ಲಾರೆ ಮರ : ಇದು ಬರಿಯ ಕಟ್ಟಿಗೆ/ಸೌದೆ ಮತ್ತು ಕೊಟ್ಟಿಗೆಗೆ ಹಾಕುವ ಸೊಪ್ಪು ಇವಕ್ಕೆ ಮಾತ್ರ ಉಪಯುಕ್ತ.
- ಸಳ್ಳೆ ಮರ (*Aporosa Lindleyana*) : ಮುಖ್ಯವಾಗಿ ಸೌದೆ ಮತ್ತು ಸೊಪ್ಪಿಗಾಗಿ ಬಳಸುತ್ತಾರೆ. ಇದರ ಹಣ್ಣನ್ನು ಕೂಡಾ ತಿನ್ನುತ್ತಾರೆ. ಅಡಿಕೆ ಗಾತ್ರದ ಬೆಳ್ಳಗಿನ ಗುಂಡಗಿನ ಹಣ್ಣು. ಈ ಹಣ್ಣು ಹುಳಿ ಅಂಶದಿಂದ ಕೂಡಿದೆ.
- ಬಚ್ಚಾರು ಮರ : ಇದು ಸೌದೆ ಮತ್ತು ಸೊಪ್ಪಿಗೆ ಸೂಕ್ತವಾದ ಮರ.
- ಪನ್ನೇರಳೆ ಮರ (*Jambosa vulgaris*) : ಇದರ ಹಣ್ಣು ತಿನ್ನಲು ಬಳಸುತ್ತಾರೆ.
- ಉಗುರಿ ಬಳ್ಳಿ : ಇದು ಪಶುಗಳಿಗೆ ಔಷಧಿಯಾಗಿ ಬಳಸುವ ಸಸ್ಯ.

- ಹೆಬ್ಬಲಸು (*Artocarpus hirsuta*) : ಸಣ್ಣ ಸಣ್ಣ ತೊಳೆಗಳಿರುವ ಒಂದು ಜಾತಿಯ ಸಣ್ಣ ಹಲಸು. ಹಣ್ಣು ತುಂಬಾ ರುಚಿ.
- ಅಮೃತದ ಹಣ್ಣು : ವರ್ಷವಿಡೀ ಈ ಹಣ್ಣನ್ನು ಔಷಧಿಗೆ ಉಪಯೋಗಿಸುತ್ತಾರೆ. ಈ ಮರದ ಎಲೆ, ಹಣ್ಣು ಪ್ರತಿಯೊಂದೂ ಔಷಧಿಗೆ ಉಪಯುತ್ತ.
- ಗುಡ್ಡದಾಸವಾಳ : ಮೈ ಮೇಲೆ ಏಳುವ ಸಣ್ಣ ಗುಳ್ಳೆಗಳಿಗೆ ಇದು ಔಷಧಿ. ಈ ಗಿಡದ ಹಣ್ಣು, ಹೂ ಪ್ರತಿಯೊಂದನ್ನೂ ಆಹಾರವಾಗಿ ಬಳಸಲಾಗುತ್ತದೆ.

ಹೀಗೆ ಕಾಡು ಗುಡ್ಡಗಳ ನಡುವೆ ಕಂಡು ಬಂದ ಸಸ್ಯಗಳು ಮೇಲಿನದಾದರೆ, ಮಲೆನಾಡಿನ ಮುಖ್ಯ ಬೆಳೆಯಾದ ಅಡಿಕೆ ತೋಟದ ನಡುವೆ ಇರುವ ಅನೇಕ ಸಸ್ಯಗಳು, ಅವುಗಳ ಉಪಯೋಗ ಕೂಡಾ ಹಲವು. ವಾಣಿಜ್ಯ ಬೆಳೆಯಾದ ಅಡಿಕೆ ತೋಟದ ಮಧ್ಯೆ, ಆಹಾರ ಬೆಳೆಯಾದ ಭತ್ತದ ಗದ್ದೆಯ ಬದಿಯಲ್ಲಿ ಕಂಡ ಸಸ್ಯಗಳ ಉಪಯೋಗದ ಬಗ್ಗೆ ಜೊತೆಗೆ ಬಂದಿದ್ದ ಶಶಿರೇಖಾ, ನಳಿನಿ ಪಟ್ಟಿ ಮಾಡಿದರು.

- ಗೊಡ್ಡು ಅರಿಶಿಣ/ಅರಾರೂಟು : ಅರಿಶಿನ ಅಥವಾ ಶುಂಠಿಯ ಗೆಡ್ಡೆಯಂತೆಯೇ ಕಾಣುವ ಈ ಗಡ್ಡೆಗಳು ನೀರು ಹಿಡಿದಿಟ್ಟುಕೊಳ್ಳುತ್ತವೆ. ಹಾಗಾಗಿ ಅಡಿಕೆ ತೋಟದಲ್ಲಿ ಬೆಳೆಯುವ ಇದು ತೋಟಕ್ಕೆ ತಂಪು ನೀಡುತ್ತದೆ. ಈ ಗೆಡ್ಡೆಯ ಪುಡಿಯನ್ನು ತೆಗೆದು ಔಷಧಿ ಮತ್ತು ಆಹಾರಕ್ಕೆ ಕೂಡ ಬಳಸುತ್ತಾರೆ. ಬೇದಿಗೆ ಇದು ರಾಮಬಾಣ.
- ಬೆಳ್ಳಂಟೆ (*Albizzia procera*) : ಈ ಸಸ್ಯದ ಒಂದೊಂದು ಎಲೆಗಳು ಬಿಳಿಬಣ್ಣ ಹೊಂದಿರುವುದರಿಂದ ಇದಕ್ಕೆ ಬೆಳ್ಳಂಟೆ ಎಂದು ಹೆಸರು. ಆಹಾರವಾಗಿ ಬಳಸುವ ಈ ಎಲೆಗಳನ್ನು, ತಲೆ ಸ್ನಾನಕ್ಕೆ ಸಮೃದ್ಧ ಕೂಡಲಿಗಾಗಿ ಬಳಸುತ್ತಾರೆ.
- ಲಕ್ಕಿ ಸೊಪ್ಪು (*Litsea chinensis*) : ಅಕ್ಕಿ ಶೇಖರಣೆ ಮಾಡುವಾಗ, ಅಕ್ಕಿಗೆ ಹುಳು ಬೀಳದಂತೆ, ಇದರ ಎಲೆಗಳನ್ನು ಜೊತೆಗೆ ಸೇರಿಸುತ್ತಾರೆ. ಈ ರೀತಿಯ ಲಕ್ಕಿ ಸೊಪ್ಪಿನ ಉಪಯೋಗ ಬಯಲು ಸೀಮೆಯ ಪ್ರದೇಶದಲ್ಲೂ ಬಳಕೆಯಲ್ಲಿದೆ.
- ಮುಂಡುಗ : ಇದೊಂದು ಮುಳ್ಳಿನ ಮರ. ನೋಡಲು ಸಣ್ಣ ಹಲಸಿನಕಾಯಿಯಂತೆ ಕಾಣುವ ಇದರ ಕಾಯಿಗಳನ್ನು ಕತ್ತರಿಸಿ ಒಣಗಿಸಿ ನೆಲ ತಿಕ್ಕಿ ತೊಳೆಯಲು ಬ್ರಷ್‌ನಂತೆ ಬಳಸುತ್ತಾರೆ.
- ಒಂಭತ್ತನೆ ಸೊಪ್ಪು : ಇದರ ಎಲೆ ಸುಟ್ಟು ಮನೆಯ ಅಂಗಳಕ್ಕೆ ಮಣ್ಣು ಮತ್ತು ಸೆಗಣಿ ಜೊತೆ ಸೇರಿಸಿ ಹಾಕುವುದರಿಂದ ಕರಿಯಾದ ಅಂಗಳ ಸಿಮೆಂಟ್ ಹಾಕಿದಂತೆ ಸುಂದರವಾಗಿ ಕಾಣುತ್ತದೆ.

ತೋಟದಲ್ಲಿಯ ಕಾಡು ಗುಡ್ಡಗಳಲ್ಲಿಯ ಸಸ್ಯ ಸಂಪತ್ತಿನಂತೆ, ಗದ್ದೆಯಲ್ಲಿ, ಗದ್ದೆಯ ಬದುಗಳಲ್ಲಿ ಬೆಳೆಯುವ ಸೊಪ್ಪು, ಸಸ್ಯಗಳ ಕುರಿತಾದ ಜ್ಞಾನ ಸಂಪತ್ತು ಕೂಡಾ ಹೇರಳ. ತೋಟ ದಾಟಿ ಗದ್ದೆಗೆ ಇಳಿದಾಗ ಅಲ್ಲಿನ ಸೊಪ್ಪು ಸದೆಗಳ ಉಪಯೋಗದ ಕುರಿತು ಸಾಲು ಸಾಲೇ ಹೊರಟಿತು.

- ಅಪ್ಪು ಚೊಪ್ಪು : ಮರಗಳಿಗೆ ಅಂಟಿ ಬೆಳೆಯುವುದರಿಂದ ಇದರ ಹೆಸರೇ ಅಪ್ಪು ಚೊಪ್ಪು. ಹಸುಗಳ ಆಹಾರವಾಗಿ ಬಳಸುವ ಈ ಎಲೆಗಳು ಹಾಲು ವೃದ್ಧಿಗೆ ಉಪಯುಕ್ತ.
- ತುಂಬೆ (*Acacia leucophloea*) : ಇದರ ಸೊಪ್ಪನ್ನು ಅರಿಶಿಣದೊಂದಿಗೆ ಸೇರಿಸಿ, ತುರಿಕೆ ಆದಾಗ ಔಷಧಿಯಂತೆ ಬಳಸುತ್ತಾರೆ. ಹೂವನ್ನು ಹಾಲಿಗೆ ಹಾಕಿ ಕುದಿಸಿ ಕುಡಿದರೆ ಶೀತಕ್ಕೆ ಔಷಧಿ.
- ನೆಲಮಾವು : ಮಾವಿನಕಾಯಿ ಪರಿಮಳ ಹೊಂದಿರುವ ಇದರ ಎಲೆಗಳನ್ನು ಚಟ್ನಿ ಮಾಡಲು ಬಳಸುತ್ತಾರೆ.
- ಹಾಲಂಡೆ ಸೊಪ್ಪು : ಇದೊಂದು ಬಳ್ಳಿ. ತಂಬುಳಿ ಎನ್ನುವ ಅಡಿಗೆ ಮಾಡಲು ಹಾಗೂ ಬಾಣಂತಿಯರಿಗೆ ಕೊಡುವ ಔಷಧೀಯ ಅಡುಗೆ 'ಕಾರ' ಮಾಡಲು ಇದನ್ನು ಬಳಸುತ್ತಾರೆ.
- ಪಾಂಡವರ ಬಳ್ಳಿ/ಸುರುಳಿ ಕುಡಿ : ಇದು ಕೂಡಾ ಹಾಲಂಡೆ ಸೊಪ್ಪಿನಂತೆ ತಂಬುಳಿ ಹಾಗೂ ಬಾಣಂತಿ ಕಾರ ಮಾಡಲು ಉಪಯುಕ್ತ.

ಕೆಂಚಣ್ಣನ ಬೆರಕೆ ಸೊಪ್ಪು

ಮಾಗಡಿ ಕಾಲೇಜಿನ ಹೊಂಬಾಳಮ್ಮನ ಪೇಟೆಯ ಕೆಂಚಣ್ಣ 80 ವರ್ಷದ ಗಟ್ಟಿಮನುಷ್ಯ. ಪ್ರತಿನಿತ್ಯ ಮನೆಮನೆಯ ಬೇಲಿಗಳಿಂದ ಆಯ್ದು ನಾಟೀಬೆರಕೆ ಸೊಪ್ಪುಗಳನ್ನು ಮಾರಿ ಜೀವಿಸುವುದೇ ಈತನ ವೃತ್ತಿ. ಈತ ದಿನನಿತ್ಯ ಆಯ್ದು ಮಾರುತ್ತಿರುವ ಸಸ್ಯಗಳ ಪರಿಚಯವೆಂದರೆ ಅದು ಜೀವವಿವಿಧತೆ ಹೇಗೆ ನಮ್ಮ ದಿನನಿತ್ಯದ ಬದುಕಿನ ದೇಶೀಯ ಸಂಸ್ಕೃತಿಯ ಒಂದಂಶವಾಗಿದೆ ಎಂಬುದನ್ನು ಪರಿಚಯಿಸುವುದಾಗಿದೆ. ಈ ಕೆಂಚಣ್ಣನ ಬೆರಕೆ ಸೊಪ್ಪುಗಳ ವಿವರ ಈ ಕೆಳಗೆ ನೀಡಲಾಗಿದೆ. ಸಾಧ್ಯವಿದ್ದಷ್ಟು ಸಸ್ಯಗಳ ವೈಜ್ಞಾನಿಕ ಹೆಸರನ್ನೂ ನೀಡಲಾಗಿದೆ.

(1) ಅಗಸೆ (*Sesamum grandiflora*)

(2) ಎಲಚಿ (*Zizyphus jujuba*)

(3) ಹಾಲುವಾಣ (4) ದಾಗಡಿ (5) ಕಳ್ಳಿಕುಡಿ (6) ಹೊಮ

(7) ಕಾರೆಕುಡಿ (8) ಅಣ್ಣೆ ಸೊಪ್ಪು (9) ಗಿಣಿಕೆ (10) ತುಂಬೆ

(11) ಕಾರಮಣಿ (12) ಹಾಗಲು (13) ಕುಂಬಳ

(14) ಹನಗೊನೆ (15) ಸಬ್ಬಿಗೆ

ಇದೆಲ್ಲಾ ಸೇರಿ, ಕೊಚ್ಚಿ, ತಕ್ಕಂತೆ ಕಾಳು ಹಾಕಿ ಬೇಯಿಸಿದ ಸಾರಿನ ರುಚಿಗೆ ಸರಿಸಮ ಇಲ್ಲ. ಆರೋಗ್ಯಕ್ಕೆ ಡಾಕ್ಟರ್ ಬೇಕಾಗಿಯೇ ಇಲ್ಲ.

ವಿವರ : ಡಿ. ರಾಮಚಂದ್ರಯ್ಯ
ಹೊಂಬಾಳಮ್ಮನ ಪೇಟೆ, ಮಾಗಡಿ 562 120

ಗ್ರಾಮೀಣ ಬದುಕಿನ ಜೀವನಾಡಿ ಕೆರೆಗಳನ್ನು ಮರೆಯಬೇಡಿ

ಡಾ॥ ಗಜಾನನ್ ಜಿ.ಎನ್.
ಪ್ರಾಧ್ಯಾಪಕರು ಮಣ್ಣು ರಸಾಯನ ಶಾಸ್ತ್ರ, ಕೃಷಿ ವಿ.ವಿ.ನಿಲಯ, ಬೆಂಗಳೂರು

ಕೆರೆಗಳು ಹಳ್ಳಿಗಳ ಬೆನ್ನೆಲುಬು ಎಂದರೆ ತಪ್ಪಾಗಲಾರದು. ಕೆರೆಗಳು ಹಳ್ಳಿಯಲ್ಲಿ ಕೃಷಿಗೆ ಅಲ್ಲದೆ ದೈನಂದಿನ ಜೀವನಕ್ಕೂ ಮುಖ್ಯ. ಕೆರೆಯಿಲ್ಲದ ಹಳ್ಳಿಯನ್ನು ರೈತರು "ಎತ್ತಿಲ್ಲದ ರೈತನಿಗೂ ಇಲ್ಲವೇ ಕಾಲಿಲ್ಲದ ದೊಂಬನಿಗೆ" ಹೋಲಿಸುತ್ತಾರೆ. "ನೀರು ನಿಂತು ಹೊಲ ಹಾಳಾಯಿತು, ನೀರು ನಿಲ್ಲದೆ ಕೆರೆ ಹಾಳಾಯಿತು" ಎಂಬ ಗಾದೆ ಹೊಲದಲ್ಲಿ ನೀರು ನಿಲ್ಲಿಸಬೇಡಿ ಅಲ್ಲದೆ ಕೆರೆಯಿಂದ ನೀರು ನಷ್ಟವಾಗದಂತೆ ನೋಡಿಕೊಳ್ಳಿ ಎಂಬ ಮಾತನ್ನು ತಿಳಿಸುತ್ತದೆ.

ಕೆರೆಗಳಿಂದ ಕೃಷಿಗೆ ಮತ್ತು ದನಕರುಗಳಿಗೆ ನೀರು ದೊರೆಯುತ್ತದೆ ಅಲ್ಲದೆ ಅಚ್ಚುಕಟ್ಟಿನ ಪ್ರದೇಶದ ಬಾವಿಗಳಲ್ಲಿ ನೀರಿನ ಮಟ್ಟ ಮೇಲೆ ಇರುತ್ತದೆ. ಕೆರೆ ಅಂಗಳದ ಸುತ್ತ ಮರಗಳನ್ನು ಮತ್ತು ಹುಲ್ಲುಗಾವಲುಗಳನ್ನು ಬೆಳೆಯುತ್ತಿದ್ದರು. ಇದರಿಂದ ದನಕರುಗಳಿಗೆ ಮೇವು ದೊರೆಯುತ್ತಿತ್ತು. ಬರಗಾಲದಲ್ಲಿ ಅಲ್ಲದೆ ಪ್ರಕೃತಿ ವಿಕೋಪವಿದ್ದಾಗ ಕೆರೆಗಳು ಒಂದು ವರವೇ ಸರಿ. ಇಂತಹ ಪರಿಸ್ಥಿತಿಯಲ್ಲಿ ಕೆರೆಗಳಲ್ಲೇ ಬಾವಿ ತೆಗೆದು ನೀರು ಒದಗಿಸುತ್ತಿದ್ದರು ಅಲ್ಲದೆ ಅಂಗಳದಲ್ಲೇ ಹುಲ್ಲು ಬೆಳೆದು ದನಕರುಗಳಿಗೆ ಸಾಕಷ್ಟು ಮೇವು ಒದಗಿಸುತ್ತಿದ್ದರು. ಕೆರೆಗಳು ಪರಿಸರವನ್ನು ಕಾಪಾಡುತ್ತದೆ ಎಂದರೆ ಆಶ್ಚರ್ಯವಲ್ಲವೇ. ಇದರಿಂದ ಅಂತರಜಲದ ಮಟ್ಟ ಹೆಚ್ಚುತ್ತದೆ. ಸುತ್ತಮುತ್ತ ಮರಗಳ ಸಂಖ್ಯೆ ಹೆಚ್ಚುತ್ತದೆ. ಜಲಾಶಯನ ಪ್ರದೇಶದಿಂದ ಹೊರ ಬಂದ ಮಣ್ಣನ್ನು ಶೇಖರಿಸಿ ಮರು ಉಪಯೋಗಕ್ಕೆ ಒದಗಿಸುತ್ತದೆ. ಕೆರೆಗಳಲ್ಲಿ ಹುಲ್ಲು, ಜೊಂಡು, ಮರ, ಗಿಡ ಬೆಳೆಯಲು ಸಹಾಯವಾಗುತ್ತದಲ್ಲದೆ ಜಲಚರ ಪ್ರಾಣಿಗಳಿಗೂ ನೆಲೆಯಾಗುತ್ತದೆ.

ಸುಮಾರು 29,500 ಚದರ ಮೈಲಿ ವಿಸ್ತೀರ್ಣವಿದ್ದ ಹಳೆಯ ಮೈಸೂರು ಸಂಸ್ಥಾನದಲ್ಲಿ, 18 ನೇ ಶತಮಾನದಲ್ಲಿ 38,000 ಕ್ಕೂ ಹೆಚ್ಚು ಕೆರೆಗಳಿದ್ದವು. ಪ್ರಸಿದ್ಧವಾದ ಸುಳೆ ಕೆರೆಯ ಸುತ್ತಳತೆ 64 ಕಿಲೋ ಮೀ.ನಷ್ಟಿತ್ತು! ಕರ್ನಾಟಕದಲ್ಲಿ ಇಂದು 43,474 ಕೆರೆಗಳಿವೆ. ಸುಮಾರು 18.25 ಲಕ್ಷ ಕೆರೆಯಷ್ಟು ಜಮೀನು ಈ ಕೆರೆಗಳ ಅಚ್ಚುಕಟ್ಟಿಗೆ ಒಳಪಟ್ಟಿದೆ. 22 ಜಿಲ್ಲೆಗಳ 27,028 ಹಳ್ಳಿಗಳಲ್ಲಿ ಹರಡಿರುವ ಈ ಕೆರೆಗಳಲ್ಲಿ 2500 ಕ್ಕೂ ಹೆಚ್ಚಿನ ಕೆರೆಗಳನ್ನು ಅನುಪಯುಕ್ತ ಎಂದು ಕೈ ಬಿಡಲಾಗಿದೆ. ಈ ಕೆರೆಗಳಲ್ಲಿ 500 ಎಕರೆಗೂ ಹೆಚ್ಚಿನ ಜಮೀನಿಗೆ ನೀರುಣಿಸುತ್ತಿರುವ ಕೆರೆಗಳ ಸಂಖ್ಯೆ 336 (ಪಟ್ಟಿ 1).

ಆಂಗ್ಲರ ಅಧಿಕಾರವಧಿಯಲ್ಲಿ ಹಳ್ಳಿಗಳಿಗೆ ಜೀವನಾಡಿಯಾಗಿರುವ ಕೆರೆಗಳಿಗೆ ಪ್ರಾಧಾನ್ಯ ಸಿಗುತ್ತದೆ ಎಂದು ಆಶಿಸಲಾಗಿತ್ತು. ಆಂಗ್ಲರು ಕೆರೆಗಳು ಬಹು ಉಪಯೋಗಿ ಎಂದು ತಿಳಿದಿದ್ದರೂ ಇದರ ಬಗ್ಗೆ ಗಮನ ಕೊಡಲಿಲ್ಲ. ಆದರೆ ಕೆಲವರು ಈ ವ್ಯವಸ್ಥೆ ವೈಜ್ಞಾನಿಕ ಹಾಗೂ ಉಪಯುಕ್ತ ಎಂದು ದಾಖಲೆ ಮಾಡಿದ್ದಾರೆ. ಭಾರತದ ಸೆನ್ಸಸ್ ಕಮಿಷನರ್ ಆಗಿದ್ದ ಸರ್ ಚಾರ್ಲ್ಸ್ ಎಲಿಯಬ್ 1870 ರಲ್ಲಿ ಈ ವರದಿ ಮಾಡಿದ್ದಾರೆ. "ಒಂದೊಂದು ಕಣಿವೆಯಲ್ಲಿಯೂ ನೀರಾವರಿ ಕೆರೆಗಳ ಒಂದು ದೊಡ್ಡ ಜಾಲವೇ ಇರುತ್ತದೆ. ಒಂದೊಂದು ನದಿಯೂ ಹತ್ತಾರು ನೀರಾವರಿ ಕಾಲುವೆಗಳಿಗೆ ನೀರನ್ನು ಪೂರೈಸುತ್ತದೆ. ಈ ಇಡೀ ವ್ಯವಸ್ಥೆ ನಿಜಕ್ಕೂ ಚಮತ್ಕಾರ ಪೂರ್ಣ". ಹಳೆಯ ಮೈಸೂರು ಪ್ರದೇಶದ ಮೊಟ್ಟಮೊದಲ ಆಂಗ್ಲ ಚೀಫ್ ಇಂಜಿನಿಯರುಗಳಲ್ಲಿ ಒಬ್ಬರಾದ ಮೇಜರ್ ಸ್ಯಾಂಕೀ ಹೀಗೆ ಹೇಳಿದ್ದಾರೆ, "ಇಲ್ಲಿಯ ಜನರ ನೀರು

ಪಟ್ಟಿ - 1 ಕರ್ನಾಟಕದಲ್ಲಿ ಇರುವ ವಿವಿಧ ಗಾತ್ರದ ಕೆರೆಗಳ ಸಂಖ್ಯೆ (1975)

	ಸಂಖ್ಯೆ	ಅಚ್ಚುಕಟ್ಟು ಎಕರೆ
1. 10 ಎಕರೆಗಿಂತ ಕಡಿಮೆ ಜಮೀನಿಗೆ ನೀರು ಒದಗಿಸುವ ಸಣ್ಣ ಕೆರೆಗಳು	15,713	7,744
2. 10 ರಿಂದ 20 ಎಕರೆ ಜಮೀನಿಗೆ ನೀರು ಒದಗಿಸುವ ಸಣ್ಣ ಕೆರೆಗಳು	16,257	3,72,698
3. 50 ರಿಂದ 100 ಎಕರೆ ಜಮೀನಿಗೆ ನೀರು ಒದಗಿಸುವ ಮಧ್ಯಮ ಕೆರೆಗಳು	3,328	2,19,305
4. 100 ರಿಂದ 500 ಎಕರೆ ಜಮೀನಿಗೆ ನೀರು ಒದಗಿಸುವ ಮಧ್ಯಮ ಕೆರೆಗಳು	2,701	3,04,178
5. 500 ಎಕರೆಗೆ ಮೇಲ್ಪಟ್ಟು ನೀರು ಒದಗಿಸುವ ದೊಡ್ಡ ಕೆರೆಗಳು	336	3,04,178

ಶೇಖರಣೆಯ ವ್ಯವಸ್ಥೆ ಎಷ್ಟು ವೈಜ್ಞಾನಿಕವಾಗಿದೆಯೆಂದರೆ ಹೊಸದಾಗಿ ಕೆರೆಯೊಂದಕ್ಕೆ ಜಾಗ ಹುಡುಕುವುದಕ್ಕೆ ಶ್ರಮ ಪಡಬೇಕಾಗುತ್ತದೆ". ಮಳೆಯ ನೀರಿನ ಶೇಖರಣೆಗೆ ಕೆರೆಗಳಿಗಿಂತ ಉತ್ತಮ ತಂತ್ರಜ್ಞಾನ ಇಲ್ಲ ಎಂದು ಅನೇಕರು ತಿಳಿಸಿದ್ದಾರೆ.

ಅನೇಕ ಆಂಗ್ಲರು ಈ ಕೆರೆಗಳ ಬಗ್ಗೆ ಹೆಚ್ಚು ಗಮನ ಕೊಡದೆ ದುರಸ್ತಿ ಮಾಡದಿದ್ದಕ್ಕೆ ಆಗಿನ ಸರ್ಕಾರವನ್ನು ದೂಷಿಸಿದ್ದಾರೆ. 1883 ರಲ್ಲಿ ಜೆ. ಥಾಮ್ಸನ್ ಎಂಬಾತ "ಇಂಡಿಯಾ ಅಂಡ್ ದಿ ಕಾಲೋನಿಸ್" ಎಂಬ ಗ್ರಂಥದಲ್ಲಿ ಈ ದೇಶದ ಜನತೆಗಾಗಿ ಹಿಂದೆ ಹಿಂದುಗಳು ಮತ್ತು ಮುಸಲ್ಮಾನ ಪ್ರಭುತ್ವಗಳು ನಿರ್ಮಿಸಿದ ರಸ್ತೆ, ಕಾಲುವೆ ಮತ್ತು ಕೆರೆಗಳನ್ನು ಹಾಳಾಗಲು ಅವಕಾಶ ಕೊಟ್ಟಿದೆ ಎಂದು ತಿಳಿಸಿದ್ದಾರೆ.

ಸ್ವಾತಂತ್ರ್ಯದ ಮುಂಚೆ ಆಂಗ್ಲರ ಮೇಲೆ ತಪ್ಪನ್ನು ಹಾಕಿದವು ಆದರೆ ಸ್ವಾತಂತ್ರ್ಯ ಬಂದ ಮೇಲು ಕೆರೆಗಳ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲ. ಸರ್ಕಾರ ವಿಜ್ಞಾನ ತಂತ್ರಜ್ಞಾನ, ದೈತ್ಯಾಕಾರದ ನೀರಾವರಿ ಯೋಜನೆ ಅಣೆಕಟ್ಟು ಅಂತಹ ಹೆಚ್ಚು ವೆಚ್ಚದ ಮತ್ತು ದೊಡ್ಡ ಕಾರ್ಯಕ್ರಮಗಳ ಮೇಲೆ ಗಮನಕೊಟ್ಟು ಸಣ್ಣ ಸಣ್ಣ ಉಪಯುಕ್ತ ವಿಚಾರಗಳ ಬಗ್ಗೆ ಗಮನಕೊಡಲಿಲ್ಲ. ಇದರಿಂದ ಕೆರೆಗಳು ಹಳ್ಳಿಯ ಅನಾಥ ಶಿಶು ಆಯಿತು. ಇದಲ್ಲದೆ ದುರಸ್ತಿ ಮಾಡಲು ಪಂಚಾಯಿತಿ ತನ್ನಿಂದ ಸಾಧ್ಯವಿಲ್ಲವೆಂದು ಅದನ್ನು ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಇಲಾಖೆಗಳಿಗೆ ವರ್ಗಾಯಿಸಿದರು. ನೀರು ನಿರ್ವಹಣೆ ಮಾಡುತ್ತಿದ್ದ ನೀರ್‌ಗಂಟಿ ನಾಪತ್ತೆಯಾದರೂ ಇದರಿಂದ ಕೆರೆಗಳ ಬಗ್ಗೆ ಎಲ್ಲರ ಗಮನಕಡಿಮೆಯಾಯಿತು. ಅನೇಕ ದಶಕಗಳಿಂದ ಹೂಳು ಶೇಖರಣೆಯಾಗಿ ನೀರಿನ ಪ್ರಮಾಣ ಕಡಿಮೆಯಾಗಿ ಕೆರೆಯ ನೀರು ಒಂದೇ ಬೆಳೆಗೆ ಸಾಕಾಗುತ್ತಿತ್ತು. ಇದಲ್ಲದೆ ಭೂಸಂರಕ್ಷಣೆಯ ತಂತ್ರಜ್ಞಾನದಿಂದ

ಅಲ್ಲದೆ ಕೆರೆಗಳಿಗೆ ಬರುವ ಕಾಲುವೆಗಳು ಮಣ್ಣಿನಿಂದ ಮುಚ್ಚಿದ್ದರಿಂದ ಕೆರೆಗಳು ಆಗೊಮ್ಮೆ ಈಗೊಮ್ಮೆ ನೀರು ಕಾಣುತ್ತಿದ್ದವು. ಇದರಿಂದ ಕೆರೆಗಳ ಪ್ರಾಮುಖ್ಯತೆ ಕಡಿಮೆಯಾಯಿತು. 1980ರ ದಶಕದಲ್ಲಿ ಅನುಭವಿಸಿದ ಬರದಿಂದ ಕೆರೆಗಳಿಗೆ ಪ್ರಾಮುಖ್ಯತೆ ಮುಖ್ಯ ಎಂದು ಎಲ್ಲರು ನಿರ್ಧರಿಸಿದರು. ಆದರೆ ಹೂಳು ಎತ್ತುವ ಕೆಲಸ, ಕಾಲುವೆಗಳ ಸ್ವಚ್ಛತೆ, ಕೆರೆಯ ದುರಸ್ತಿಯ ಕ್ರಮಗಳು ಹೆಚ್ಚು ಹಣವನ್ನು ಕೇಳುತ್ತದೆ ಎಂದು ಸುಮ್ಮನಾದರು. ಕೆರೆಗಳಲ್ಲಿ ತುಂಬಿರುವ ಹೂಳಿನಿಂದ 2.5 ಲಕ್ಷ ಎಕರೆಗೆ ಕೊಡುವ ನೀರಿನ ಪ್ರಮಾಣ ಕಡಿಮೆ ಆಗಿದೆ ಎಂದು ಅಂದಾಜು ಮಾಡಲಾಗಿದೆ.

ಕೆರೆ ಹೂಳು ಒಂದು ಉತ್ತಮ ಗೊಬ್ಬರ. ಈ ಹೂಳಿನಲ್ಲಿ ಹೆಚ್ಚು ಜೇಡಿ ಮತ್ತು ಹೊಂಡು ಇರುತ್ತದೆ. ಇದರ ಬಳಕೆಯಿಂದ ಹೊಲದಲ್ಲಿ ನೀರು ಹಿಡಿಯುವ ಶಕ್ತಿ ಹೆಚ್ಚುತ್ತದೆ. ಅಲ್ಲದೆ ಹೂಳು ಸಾವಯವ ಗೊಬ್ಬರ ಮತ್ತು ಪೊಟ್ಯಾಷಿಯಂ ಅನ್ನು ಒದಗಿಸುತ್ತದೆ. ಈ ಹೂಳಿನ ಫಲವತ್ತತೆ ಎಷ್ಟು ಕಟುವಾಗಿದೆಯೆಂದರೆ ಇದನ್ನು ಎಕರೆಗೆ 4 ರಿಂದ 5 ಟನ್ ನಷ್ಟು ಮಾತ್ರ ಬಳಸಿ ಭೂಮಿಗೆ ಸೇರಿಸುವುದರಿಂದ ಲಾಭ, ಹೆಚ್ಚಿಗೆ ಬಳಸಿದರೆ ಇದರಿಂದ ಅಪಾಯವೇ ಹೆಚ್ಚು. ಇದರಿಂದ ಮೊಳಕೆ ಪ್ರಮಾಣ ಕಡಿಮೆಯಾಗಿ ಸಸ್ಯಗಳ ಬೇರು ಉಸಿರಾಡದೆ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತದೆ. ಆದುದರಿಂದ ಹೂಳನ್ನು ಎಚ್ಚರಿಕೆಯಿಂದ ಬಳಸಬೇಕು. ಹೂಳಿನಲ್ಲಿ ಹೆಚ್ಚು ಜೇಡಿ ಮತ್ತು ಹೊಂಡು ಇರುವುದರಿಂದ ಇದನ್ನು ಹೆಚ್ಚು ಜೇಡಿಯಿರುವ ಭೂಮಿಯಲ್ಲಿ ಬಳಸಬಾರದು. ಹೆಚ್ಚು ಮರಳು ಇರುವ ಭೂಮಿಗೆ ಈ ಹೂಳಿನ ಬಳಕೆ ಸೂಕ್ತ. ಜೇಡಿ ಅಂಶ ಹೆಚ್ಚಾಗಿರುವ ಹೂಳನ್ನು ಇಟ್ಟಿಗೆಗೂ ಬಳಸಬಹುದು. ಮರಳು ಕಡಿಮೆ ಇರುವ ಅಲ್ಲದೆ ಹೆಚ್ಚು ಜೇಡಿ ಇರುವ ಹೂಳನ್ನು ಹೆಂಚಿಗೆ ಬಳಸುತ್ತಾರೆ. ಸುಲಭವಾಗಿ ಹೂಳು ಸಿಗುತ್ತದೆಂದು ಹೆಚ್ಚು ಹೆಚ್ಚು ಹೂಳನ್ನು ಕೃಷಿಯಲ್ಲಿ ಬಳಸಬೇಡಿ.

ಕೋಲಾರ ಮತ್ತು ಬೆಂಗಳೂರು ಜಿಲ್ಲೆಯ ಕೆರೆಯ ಹೂಳಿನಲ್ಲಿ ಸರಾಸರಿ

ಮರಳು ಶೇ 45.6, ಜೇಡಿ ಮರಳು ಶೇ 20.6, ಹೊಂಡು ಶೇ 33.1, ಸಾವಯುವ ಇಂಗಾಲ ಶೇ. 0.63, ದೊರೆಯುವ ರಂಜಕ ಶೇ 3.1, ಪೊಟ್ಯಾಷ್ 277 ppm ಸತು ಶೇ 1.16 ಈ ರೀತಿ ಪೌಷ್ಟಿಕಾಂಶಗಳಿರುವುದು ಕಂಡು ಬಂದಿದೆ.

ಇಂದಿನ ಪರಿಸ್ಥಿತಿಯಲ್ಲಿ ನಾವು 200 ಮಿಲಿಯನ್ ಆಹಾರ ಧಾನ್ಯಗವನ್ನು ಉತ್ಪಾದಿಸಲು ಬಹಳ ಶ್ರಮ ಪಡಬೇಕಾಗಿದೆ. ಅಲ್ಲದೆ ಸಂಪನ್ಮೂಲಗಳ ಸಮರ್ಪಕ ಬಳಕೆಯಾಗಬೇಕಾಗಿದೆ. ನೀರು ಒಂದು ಒಳ್ಳೆಯ ಸಂಪನ್ಮೂಲ, ಮಳೆಯ ನೀರನ್ನು ಸಂಗ್ರಹಿಸಿದಷ್ಟು ನಮಗೆ ಹೆಚ್ಚು ಲಾಭ. ಆದುದರಿಂದ ಈ ಮಳೆಯ ನೀರಿನ ಸಂಗ್ರಹಣೆಗಾಗಿ ಕೆರೆಗಳ ದುರಸ್ತಿ ಹೊಸ ಕೆರೆಗಳ ರಚನೆ ಅಲ್ಲದೆ ಆಯ್ಕಟ್ಟಿನ ಪ್ರದೇಶದಲ್ಲಿ ಚೆಕ್‌ಡ್ಯಾಂಗಳ ರಚನೆಯಿಂದ ಈ ಕಾರ್ಯವನ್ನು ಸಾಧಿಸಬಹುದು. ಆದುದರಿಂದ ಕೆರೆಗಳ ದುರಸ್ತಿಯಾಗಿ ಹೂಳು ಬಾರದೆ ನೀರು ಹೆಚ್ಚು ತುಂಬುತ್ತದೆ. ಈ ಬಗ್ಗೆ ನಾವು ಇಂದು ತೆಗೆದುಕೊಳ್ಳಬೇಕಾದ ಮುಖ್ಯ ಕ್ರಮಗಳೆಂದರೆ

- ಪ್ರತಿ ವರ್ಷ ಶೇಖರಣೆಯಾದ ಹೂಳನ್ನು ಹೊರ ತೆಗೆಯಬೇಕು. ಇದರಿಂದ ಕೆರೆಯಲ್ಲಿ ನೀರು ಹೆಚ್ಚು ಶೇಖರಣೆಯಾಗುತ್ತದೆ. ಈ ಕೆಲಸವನ್ನು ಸರ್ಕಾರ ಮತ್ತು ಜಿಲ್ಲಾ ಪಂಚಾಯಿತಿಯವರು ಜವಾಬ್ದಾರಿಯಿಂದ ನಿರ್ವಹಿಸಿ ನಂತರ ಪಂಚಾಯಿತಿ ವಹಿಸುವುದು ಸೂಕ್ತ.
- ಕೆರೆಗಳ ಹೂಳನ್ನು ತೆಗೆಯುವುದು ಅಲ್ಲದೆ ಕೆರೆಗೆ ನೀರು ಹರಿಯುವಂತೆ ಕಾಲುವೆಗಳನ್ನು ದುರಸ್ತಿ ಮಾಡಿ ನೀರು ಹರಿಯುವಂತೆ ಮಾಡಬೇಕು.
- ಬರಬಂದಾಗ ಕೋಟಿಗಟ್ಟಲೆ ಖರ್ಚು ಮಾಡುವ ಇಲ್ಲವೆ ಪ್ರಕೃತಿ ವಿಕೋಪಕ್ಕೆ ಒಳಗಾದಾಗ ಆಗುವ ಅನಾನುಕೂಲಕ್ಕೆ ಕೋಟಿಗಟ್ಟಲೆ ಖರ್ಚುಮಾಡುವ ಸರ್ಕಾರ ಮುಂದಾಲೋಚನೆ ಮಾಡಿ ಪ್ರತಿ ವರ್ಷ ಭೂ ಸಂರಕ್ಷಣೆ, ನೀರಾವರಿ, ಕೃಷಿ, ಅರಣ್ಯ ಮತ್ತು ಇತರ ಸಂಬಂಧ ಪಟ್ಟ ಇಲಾಖೆಗಳಿಂದ ಸ್ವಲ್ಪ ಸ್ವಲ್ಪ ಹಣವನ್ನು ಕೆರೆಯ ದುರಸ್ತಿಗೆ ಬಳಸಬೇಕು.
- ಜಲಾಯನ ಇಲಾಖೆಯ ಮುಖ್ಯ ಉದ್ದೇಶ ಸಂಪನ್ಮೂಲ ನಿರ್ವಹಣೆಯಾದುದರಿಂದ ಅವರು ಕೃಷಿ ಹೊಂಡದ ಜೊತೆ ಕೆರೆಗಳಿಗೂ ಪ್ರಾಮುಖ್ಯತೆ ಕೊಡಬೇಕು.
- ಕೆರೆಯ ಸುತ್ತ ಮಣ್ಣು ಕುಸಿಯದ ವೃಕ್ಷ ಸಂಪತ್ತನ್ನು ಹೆಚ್ಚಿಸಬೇಕು. ಇದಲ್ಲದೆ ಹುಲ್ಲನ್ನು ಮರದಜೊತೆ ಬೆಳೆಯುವುದರಿಂದ ಭೂ ಸವಕಲು ಕಡಿಮೆಯಾಗಿ ಕೆರೆಗೆ ಹೂಳಿನ ಶೇಖರಣೆ ಕಡಿಮೆಯಾಗುತ್ತದೆ.
- ಹೆಚ್ಚಿನ ಅಚ್ಚು ಕಟ್ಟು ಇರುವ ಕೆರೆಗಳಿಗೆ ನೀರಿನ ನಿರ್ವಹಣೆಗಾಗಿ ನೀರು ಗಂಟಿಗಳ ನೇಮಕದ ಅವಶ್ಯಕತೆ ಇರುತ್ತದೆ.
- ಕೆರೆ ಅಂಗಳದಲ್ಲಿ ಎರಡು ಬೆಳೆಗಳನ್ನು ಬೆಳೆಯಲು ಅರೆ ನೀರಾವರಿ ಬೆಳೆಗಳನ್ನು ಬೆಳೆಯಬೇಕು. ಬರಗಾಲದಲ್ಲಿ ಕೆರೆಯ ಅಚ್ಚುಕಟ್ಟಿನಲ್ಲಿ ಬೆಳೆ ಬೆಳೆಯಲು ಪಂಚಾಯಿತಿಯ ಅಪ್ಪಣೆಯನ್ನು ಅಗತ್ಯ ಮಾಡಬೇಕು.
- ಬರಗಾಲದಿಂದ ಜನರನ್ನು ರಕ್ಷಿಸಲು ಬರಗಾಲ ಪ್ರದೇಶಗಳಲ್ಲಿಯೇ ಹೊಸ ಕೆರೆಗಳನ್ನು ತೆಗೆಯಬೇಕು.
- ಹೊಸ ಕೆರೆಗಳನ್ನು ತೆಗೆಯುವಾಗ ಅದು ಹಳೆ ಕರೆಗೆ ಹರಿಯುವ ನೀರಿಗೆ ಅಡಚಣೆ ಮಾಡಕೂಡದು
- ಸಮುದ್ರ ತೀರದಲ್ಲಿ ಅಲ್ಲದೆ ಮಲೆನಾಡಿನಲ್ಲಿ ಹೆಚ್ಚು ಮಳೆಯದರೂ ಬೇಸಿಗೆಯಲ್ಲಿ ನೀರಿನ ಅಭಾವ ಇರುತ್ತದೆ. ಆದುದರಿಂದ ಇಂತಹ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಕೆರೆಗಳ ನಿರ್ಮಾಣ ಅವಶ್ಯಕ. ಇಲ್ಲಿ ಜೇಡಿ ಅಂಶ ಕಡಿಮೆ ಇರುವುದರಿಂದ ನೀರು ಇಂಗದೆ ಇರಲು ಸೂಕ್ತ ತಂತ್ರಜ್ಞಾನದ ಬಳಕೆ ಅಗತ್ಯ ಇದರಿಂದ ಅರೇ ನೀರಾವರಿ ಎರಡನೇ ಬೆಳೆಯನ್ನು ಬೆಳೆಯಲು ಸಾಧ್ಯ.
- ಸಾಧ್ಯವಾದಲ್ಲಿ ನದಿಗಳಿಂದ ಹೆಚ್ಚಾಗಿ ಹೊರ ಬರುವ ನೀರನ್ನು ಕೆರೆಗೆ ಸೇರುವಂತೆ ಮಾಡುವುದು ಒಳಿತು.
- ಒಟ್ಟಿನಲ್ಲಿ ಕೆರೆಗಳ ರಕ್ಷಣೆಯಿಂದ ನಮ್ಮ ರೈತರಿಗೂ ಲಾಭ ಅಲ್ಲದೆ ದೇಶಕ್ಕೂ ಹಿತ. ಬರ ಪ್ರಕೃತಿ ವಿಕೋಪ, ಭೂಸಾರ ರಕ್ಷಣೆಯ ಎಲ್ಲಾ ರೀತಿಯ ಒಳಿತಿರುವ ಈ ಕೆರೆಗಳ ಬಗ್ಗೆ ಜಾಗೃತವಾಗಿ ಗಮನ ಹರಿಸುವುದು ಮುಖ್ಯ.

ಅಹಮದಾಬಾದ್‌ನ ಸಭೆ

ನೈಜ ಕೃಷಿಕರ ಚಿಂತನೆ, ಕರಕುಶಲರ ಬದುಕು, ವಿಜ್ಞಾನಿಗಳ ಶ್ರದ್ಧೆ, ಮುಂದಿನ ವ್ಯವಸಾಯದ ಚಿಂತನೆ. ಈ ಚಿಂತನೆಗೆಲ್ಲಾ ಫೆಬ್ರವರಿ ೨೦, ೨೦೦೦ ದಂದು ಪ್ರೊ|| ಅನಿಲ್ ಕೆ. ಗುಪ್ತಾರವರ ನೇತೃತ್ವದಲ್ಲಿ ಒಂದು ಸಮಾರಂಭ ಅಹಮದಾಬಾದ್‌ನಲ್ಲಿರುವ 'ಭಾರತೀಯ ನಿರ್ವಹಣಾ ಸಂಸ್ಥೆಯಲ್ಲಿ' ನೆರವೇರಿತು. ಈ ಸಭೆಗೆ ಕರ್ನಾಟಕ, ಆಂಧ್ರ, ತಮಿಳುನಾಡು, ಪಂಜಾಬ್, ಗುಜರಾತಿನ ಚಿಂತಕರು, ಈ ಚಿಂತಕರ ಅನುಭವಗಳನ್ನು ಹೊರತರುವ ಆಯಾ ರಾಜ್ಯಗಳ ಪತ್ರಿಕೆಗಳ ಸಂಪಾದಕರುಗಳಾದ ಡಾ|| ಟಿ.ಎನ್. ಪ್ರಕಾಶ್ ಕಮ್ಮರಡಿ, ಶ್ರೀ ಅರುಣ್, ಶ್ರೀ ಚಂದನ್, ಶ್ರೀ ಜೋಲ್, ಶ್ರೀ ಲೋಕನಾಥನ್, ಶ್ರೀ ಸುಧೀರ್‌ಶರ್ಮ, ಶ್ರೀಮತಿ ಹೇಮಾ ಪಾಟೀಲ್‌ರವರೂ ಉಪಸ್ಥಿತರಿದ್ದರು. ಅವರವರ ಸಂಚಿಕೆಯಲ್ಲಿ ಪ್ರಕಟಪಡಿಸುವ ವಿಷಯಗಳ ಬಗ್ಗೆ, ಪತ್ರಿಕೆಯ ವಿಷಯಗಳನ್ನು ಸವಿಸ್ಥಾರವಾಗಿ ವಿವರಿಸಿದರು. ಪ್ರತಿ ರಾಜ್ಯಗಳಿಂದ ಬಂದ ರೈತ ಅನ್ವೇಷಕರನ್ನು ಸನ್ಮಾನಿಸಿ, ಮಧ್ಯಾಹ್ನದಲ್ಲಿ ರೈತರನ್ನು ೫ ಗುಂಪುಗಳಾಗಿ ವಿಂಗಡಿಸಿ ಹೊಸಜ್ಞಾನದ ಬಗ್ಗೆ ಚಿಂತನೆ ನಡೆಸಿದರು. ೫ ಗುಂಪುಗಳ ನಾಯಕರು ಹೊಸ ಜ್ಞಾನಗಳನ್ನು ಎಲ್ಲರಿಗೂ ತಿಳಿಯಪಡಿಸಿದರು. ಮುಖ್ಯ ಅಥಿತಿಗಳು ರೈತರ ಚಿಂತನೆಗಳನ್ನು ಮಂಡಿಸಿದರು.

ನಮ್ಮ ದೇಶದಲ್ಲಿ ಆಗುಹೋಗುವಿನ ಬಗ್ಗೆ ಈ ರೀತಿಯ ಚಿಂತನೆಗಳು ಬಹಳ ಮುಖ್ಯವಾಗಿದ್ದು, ಈ ರೀತಿಯ ಸಂಸ್ಥೆಗಳು ರೈತ ಪರವಿಜ್ಞಾನಿಗಳನ್ನು ಹೊರತರುವಂತಾಗುತ್ತವೆ. ಸಾಮಾನ್ಯ ರೈತರಿಗೂ ಅವರ ಅನುಭವಕ್ಕೆ ಹೆಚ್ಚಿನ ಒತ್ತು ದೊರೆಯುವುದರಿಂದ ಅವನ ಆಸಕ್ತಿ ತನ್ನ ಕರ್ತವ್ಯದ ಕಡೆ ಕೇಂದ್ರೀಕೃತವಾಗುತ್ತದೆ. ಅವರ ದೃಷ್ಟಿಕೋನ ಮಣ್ಣಿನ ಆರೋಗ್ಯ, ಪ್ರಕೃತಿ, ಜಲಸಂಪತ್ತು, ಈ ಬಗ್ಗೆ ಚಿಂತನೆ ನಡೆಸುತ್ತಿದ್ದು ಅನೇಕ ಸುಧಾರಣೆಗಳನ್ನು ಅಳವಡಿಸಿಕೊಳ್ಳಲು ಕಾರಣವಾಗಿದೆ. ಈ ಸಭೆಯಲ್ಲಿ ಕರ್ನಾಟಕದ ಶ್ರೀ ಅಂಬಾಜಿ ತೇಲಂಗ ಮತ್ತು ಶ್ರೀ ಬಸವರಾಜ ಸಂತೇಶಿವರರವರನ್ನು ಸನ್ಮಾನಿಸಲಾಯಿತು.

ಹೊನ್ನೇರು 99

ಗ್ರೀನ್ ಪ್ರತಿಷ್ಠಾನ ಬೆಂಗಳೂರು, ಹಿತ್ತಲಗಿಡ ಮತ್ತು ಸ್ವಾಮಿ ವಿವೇಕಾನಂದ ರೈತ ಸಮೂಹ ಹೇರಿಂದ್ಯಪನಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಜನಪದ ಸಂಸ್ಕೃತಿ ಪರಂಪರಾಗತ ಜ್ಞಾನ ಮತ್ತು ಜೀವ ವೈವಿಧ್ಯ ಸಂರಕ್ಷಣಾ ಸ್ಪರ್ಧೆಯನ್ನು ಕನಕಪುರ ತಾಲ್ಲೂಕು ಮಟ್ಟದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿತ್ತು. ಪ್ರತಿ ವಿಭಾಗದಲ್ಲೂ ಮೂರು ಬಹುಮಾನ ಮತ್ತು ಐದು ಸಮಾಧಾನಕರ ಬಹುಮಾನ ನೀಡಲಾಗಿದ್ದು, ಹಾರೋಹಳ್ಳಿ ಸರ್ಕಾರಿ ಪದವಿ ಪೂರ್ವಕಾಲೇಜಿಗೆ ಪರ್ಯಾಯ ಪಾರಿತೋಷಕ ನೀಡಲಾಯಿತು.

ಬೀಜಮೇಳ

ಗ್ರೀನ್ ಫೌಂಡೇಷನ್ ಸಂಸ್ಥೆಯ ಪ್ರತಿ ಬಾರಿಯಂತೆ ಈ ಸಾರಿಯ ಬೀಜಮೇಳ ತಳಿಯಲ್ಲಿ ಈ ಫೆಬ್ರವರಿ ತಿಂಗಳಲ್ಲಿ ಜರುಗಿತು. ಈ ಕಾರ್ಯದಲ್ಲಿ ತೊಡಗಿದ್ದ ರೈತಾಪಿ ಜನಗಳಿಗೆ 'ಬೀಜ ಪೋಷಕ', 'ಬೀಜರಕ್ಷಕ' 'ಬೀಜಮಾತೆ' ಹೀಗೆ ಹತ್ತಾರು ಬಿರುದು ನೀಡಿ ಈ ಸಭೆಯಲ್ಲಿ ಗೌರವಿಸಲಾಯ್ತು.

ಜನಪದ ಸಂಸ್ಕೃತಿ ಮತ್ತು ನಾಡಿಜ್ಞಾನ ಸ್ಪರ್ಧೆ

ಇದೇ ರೀತಿಯ ಮತ್ತೊಂದು ಸ್ಪರ್ದೆಯನ್ನು ದ.ಕ.ದ ಜೊಕ್ಕಾಡಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೂ ಏರ್ಪಡಿಸಲಾಗಿದ್ದು, ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳಿಗೆ ಹಿತ್ತಲಗಿಡದ ವತಿಯಿಂದ ಬಹುಮಾನ ನೀಡಲಾಗುವುದು.

ಪ್ರಯೋಗ ಸ್ಪಂಧನದ ನಾಟೀ ವೈದ್ಯಕೀಯ ಬಗೆಗಿನ ಕಾರ್ಯಾಗಾರ

ದಾವಣಗೆರೆಯ ಸೌಳಂಗಾ ಗ್ರಾಮದ ಪ್ರಯೋಗ ಸ್ಪಂದನ ಸಂಸ್ಥೆಯವರು ಈ ಮೇಲ್ಕಂಡ ಕಾರ್ಯಗಾರವನ್ನು ಮೇ ತಿಂಗಳ ರಂದು ಏರ್ಪಡಿಸಿದ್ದು, ಇದರಲ್ಲಿ ತಮಿಳು ಹನಿಬೀ ನಮ್‌ವಳಿ ವೇಳಾನಮ್ಮಾ ಸಂಪಾದಕ ವಿವೇಕಾನಂದನ್ ಮತ್ತು ಹಿತ್ತಲಗಿಡದ ಪರವಾಗಿ ಚಿತ್ರಶೇಖರ್ ಪಾಲ್ಗೊಂಡಿದ್ದರು.

ದೇಶೀಯ ಕೃಷಿ ಪದ್ಧತಿ ಸಂಗ್ರಹಣೆ ಮತ್ತು ದಾಖಲಾತಿ ಕಾರ್ಯಾಗಾರ

ಬೈಫ್ ಸಂಸ್ಥೆಯಿಂದ ದೇಶೀಯ ಕೃಷಿ ಪದ್ಧತಿಗಳ ಸಂಗ್ರಹಣೆ ಬಗೆಗಿನ ಕಾರ್ಯಾಗಾರವನ್ನು ತಿಪಟೂರಿನ ಬಳಿಯಿರುವ ಬೈಫ್ ಸಂಸ್ಥೆಯಲ್ಲಿ ಜೂನ್ ಮೊದಲಬಾರಿ ಏರ್ಪಡಿಸಲಾಗಿದೆ.

ಪ್ರಿಯರಾದ ಡಾ|| ಪ್ರಕಾಶ್

ನಿಮ್ಮ ಪತ್ರಿಕೆ ಚೆನ್ನಾಗಿದೆ. ವಿಚಾರ, ತಾತ್ವಿಕತೆಗಳು ಹೀಗೆ ದಿನನಿತ್ಯದ ಜೀವಿತದ ವಿವರಗಳ ರೂಪ ತಳೆದಾಗಲೇ ನಿಜವಾಗುವುದು. ಪ್ರಯತ್ನ ಮುಂದುವರೆಸಿ. ಪತ್ರಿಕೆಯನ್ನು ಈ ರೀತಿ ಹೊರತರುವುದಾದಲ್ಲಿ ಖಂಡಿತ ಪ್ರಭಾವ ಇದ್ದೇ ಇರುತ್ತದೆ. ನನ್ನ ವಾರ್ಷಿಕ ಚಂದಾ ತಲುಪಿಸುತ್ತೇನೆ.

ಕೆ. ಸತ್ಯನಾರಾಯಣ್
ಸೆಂಟ್ರಲ್ ರೆವೆನ್ಯೂ ಡಿಪಾರ್ಟ್‌ಮೆಂಟ್, ಚೆನ್ನೈ

ಪತ್ರಿಕೆ ನೊಂದಣೆ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.40/-	ರೂ.400/-
ರೈತರು	ರೂ.50/-	ರೂ.500/-
ಇತರರು	ರೂ.60/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. : ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O) ಅಥವಾ ಡ್ರಾಫ್ಟ್ / ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕುಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ಗೆ, ______________________

____

____

____

ವಿಳಾಸ :
ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು–560 065.
✆ :8563595 \ 3330153 Ext.297 (O) 8560267 (R)
e.mail: hittalu @ bgl.vsnl.net.in

Printed by Sri.S.Sridhar, Published by Smt.K.Meenakshi (Owner). printed at "Navabharath Enterprises" No.10, Sirur Park 'B' Street, Sheshadripuram, Bangalore - 560 020. and Published at No.399, 14-B Cross New Town Yelahanka, Bangalore - 560 064. Edited by Dr.T.N.Prakash.